ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 24 ಭಾನುವಾರ 2022

₹4


ದೂರವಾಣಿ: 2496520, 2496521, 2496526, 2496527, 2496528, **FAX:** 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ **Ph:** 2431774, ಡಿ. ದೇವರಾಜ ಅರಸು ರಸ್ತೆ, **Ph:** 2428695

ಸಂಪುಟ: 43 ಸಂಚಿಕೆ: 9 ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಇಂದು ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ



ಮೈಸೂರು,ಏ.23–ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಏ.24ರಂದು ಡಾ.ರಾಜ್‌ಕುಮಾರ್ ಜನ್ಮ ದಿನ ಆಚರಿಸಲಿದ್ದು, ಅಂದು ಬೆಳಗ್ಗೆ 9.30ಕ್ಕೆ ನಗರದ ಡಾ.ರಾಜ್‌ಕುಮಾರ್ ಉದ್ಯಾನದಲ್ಲಿರುವ ಅವರ ಪ್ರತಿಮೆಗೆ ಮೇಯರ್, ಇನ್ನಿತರ ಗಣ್ಯರು ಪುಷ್ಪಾರ್ಚನೆ ಮಾಡಲಿದ್ದಾರೆ.

ಇಂದು ಶಾಸಕ ಎನ್.ಮಹೇಶ್ ಬೆಂಬಲಿಗರು ಬಿಜೆಪಿ ಸೇರ್ಪಡೆ

ಮೈಸೂರು,ಏ.23(ಎಂಟಿವೈ)–ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಚನ್ನಮ್ಮ ಚನ್ನಬಸಪ್ಪ ಮಂಟಪದಲ್ಲಿ ನಾಳೆ(ಏ.24) ಮಧ್ಯಾಹ್ನ 1.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಚಿವರೂ ಆದ ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಅವರ ಅಭಿಮಾನಿಗಳು ಮತ್ತು ಬೆಂಬಲಿಗರು ಬಿಜೆಪಿ ಸೇರ್ಪಡೆಗೊಳ್ಳಲಿದ್ದಾರೆ ಎಂದು ಎನ್.ಮಹೇಶ್ ಅಭಿಮಾನಿಗಳ ಬಳಗದ ಭೀಮನಹಳ್ಳಿ ಸೋಮೇಶ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಶಾಸಕ ಎನ್.ಮಹೇಶ್ ಬಿಎಸ್ಪಿಯಿಂದ ಹೊರ ಬಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದರು. ಕೋವಿಡ್ ಹಿನ್ನೆಲೆಯಲ್ಲಿ ಅಂದು ಅವರ ಅಭಿಮಾನಿಗಳು ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಿರಲಿಲ್ಲ. ಹೀಗಾಗಿ ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷರಾದ ಮಂಗಳಾ ಸೋಮಶೇಖರ್ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಎನ್.ಮಹೇಶ್ ಅವರ ನೂರಾರು ಸಂಖ್ಯೆಯ ಕಾರ್ಯಕರ್ತರು ಬಿಜೆಪಿ ಸೇರಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎನ್.ಮಹೇಶ್ ಅಭಿಮಾನಿ ಬಳಗದ ಪ್ರಭುಸ್ವಾಮಿ, ರಾಹುಲ್ ನಾಗನಹಳ್ಳಿ, ನಾಡನಹಳ್ಳಿ ಗಣೇಶ್ ಮೂರ್ತಿ ಇದ್ದರು.

ಡಾ.ಶಿವಕುಮಾರ ಸ್ವಾಮೀಜಿ, ಗಾಂಧಿಜೀ ಬದಕಿದ್ದಾಗಲೇ ದೇವರೆನಿಸಿಕೊಂಡವರು

ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ನಂದೀಶ್ ಹಂಚಿ ಅಭಿಮತ



ಮೈಸೂರು, ಏ.23(ಜಿಎ)– ಡಾ. ಶಿವಕುಮಾರ ಸ್ವಾಮೀಜಿ ಮತ್ತು ಗಾಂಧೀಜಿ ಬದಕಿದ್ದಾಗಲೇ ಜನರಿಂದ ದೇವರು ಎನಿಸಿಕೊಂಡವರು ಎಂದು ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ನಂದೀಶ್ ಹಂಚಿ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಸಭಾಂಗಣದಲ್ಲಿ ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ಅಯೋಜಿಸಿದ್ದ ಡಾ. ಶಿವಕುಮಾರಸ್ವಾಮೀಜಿ ಅವರ 115ನೇ ಜಯಂತಿ ಮತ್ತು ಸಾಧಕ ಮಹಿಳೆಯರಿಗೆ 'ಕಸ್ತೂರಿ ಬಾ' ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಈ ಶತಮಾನದಲ್ಲಿ ಗಾಂಧಿಜೀ ಮತ್ತು ಶಿವಕುಮಾರ ಸ್ವಾಮೀಜಿ ಅವರು ತಮ್ಮ ಸಾಧನೆ ವ್ಯಕ್ತಿತ್ವದ ಮೂಲಕ ಜನರಿಂದ ದೇವರ ಸ್ಥಾನ ಪಡೆದುಕೊಂಡವರು ಎಂದ ಅವರು, ಸಿದ್ದಗಂಗಾ ಮಠವನ್ನು ಒಂದು ಸುತ್ತು ನೋಡಿದರೆ ಶಿವಕುಮಾರ ಸ್ವಾಮೀಜಿ ಅವರ ವ್ಯಕ್ತಿತ್ವ ತಿಳಿಯುತ್ತದೆ ಹಾಗೇ ಗಾಂಧೀಜಿ ಅವರು ವ್ಯಕ್ತಿತ್ವವನ್ನು ಕಸ್ತೂರಿ ಬಾ ಅವರ ಪ್ರಕಾರದಿಂದ ನೋಡಿದರೆ ತಿಳಿಯುತ್ತದೆ ಎಂದರು.

ಗಂಡಿನ ಬದುಕು ಪರಿಪೂರ್ಣವಾಗಲು ಹೆಣ್ಣು ಬಹಳ ಮುಖ್ಯ ಭಾಗವಾಗುತ್ತಾಳೆ. ಅದಕ್ಕೆ ಕಸ್ತೂರಿ ಬಾ ಅವರೇ ನಿದರ್ಶನ. ಗಾಂಧೀಜಿ ಅವರ ಬದುಕಿನ ರಾಜ ಮಾರ್ಗಗಳು ಬಹಳ ಸುಲಭವಾಗಿತ್ತು. ಆದರೆ ಅವರ ವೈಯಕ್ತಿಕ ಜೀವನದ ಬಗ್ಗೆ ತಿಳಿದುಕೊಳ್ಳಬೇಕು ಎಂದರೆ ಅವರ ಆತ್ಮಕಥನ ಓದಿದರೆ ತಿಳಿಯುತ್ತದೆ ಎಂದರು.

ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತಿರುವ ವಿಜಯ ಲಕ್ಷ್ಮೀ ಅರಸ್, ಮಾಲಿನಿ, ಚಂದ್ರಿಕಾ ಪಾಟೀಲ್ ಮತ್ತು ಶೋಭ ಅವರಿಗೆ ಕಸ್ತೂರಿ ಬಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಎಂಎಲ್‌ಸಿ ಹಾಗೂ ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಚುಟುಕು ಸಾಹಿತ್ಯ ಪರಿಷತ್ತು ದಾವಣಗೆರೆ ಜಿಲ್ಲಾಧ್ಯಕ್ಷ ರಾಜಶೇಖರ್ ಗುಂಡಗಟ್ಟಿ, ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ ಅಧ್ಯಕ್ಷೆ ಡಾ. ರತ್ನ ಹಾಲಪ್ಪಗೌಡ, ಕಾರ್ಯದರ್ಶಿ ಗಾಯತ್ರಿ ಕದಂಬ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.


ಸಿದ್ದರಾಮಯ್ಯರ ಕೊನೆ ಚುನಾವಣೆ: ಬಿಜೆಪಿ ವ್ಯಂಗ್ಯ

ಬೆಂಗಳೂರು, ಏ.23(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆ ನನ್ನ ಕೊನೆ ಚುನಾವಣೆ ಎಂದಿರುವ ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಕಿಡಿಕಾರಿದೆ. ನಿನ್ನೆ ಮೈಸೂರಿನಲ್ಲಿ ನೀಡಿರುವ ಹೇಳಿಕೆಗೆ ಸರಣಿ ಟ್ವೀಟ್ ಮಾಡಿರುವ ರಾಜ್ಯ ಬಿಜೆಪಿ ವಲಸೆ ರಾಮಯ್ಯ ಅವರೇ, ಯಾವುದು ಹಿತವೋ ನಿಮಗೆ ಈಗಿನ ಕ್ಷೇತ್ರ ಬಾದಾಮಿಯೋ ಅಥವಾ ಇನ್ಯಾವುದೋ ಎಂದು ಪ್ರಶ್ನಿಸಿದೆ. ಕರ್ನಾಟಕ ದರ್ಶನ ಮಾಡಿ, ನಿಮಗೆ ಸ್ಪರ್ಧಿಸಲು ಯಾವ ಕ್ಷೇತ್ರ ಅನುಕೂಲವಾಗುತ್ತದೆ ಎಂಬುದನ್ನು ಪತ್ತೆ ಹಚ್ಚಿ, ಮುಖ್ಯಮಂತ್ರಿಯಾಗಿದ್ದಾಗ, ಭಾಗ್ಯಗಳ ಮೂಲಕ ಒಂದು ವರ್ಗವನ್ನು ಓಲೈಸಿಕೊಂಡ ನೀವು, ಜಾತಿ–ಜಾತಿಗಳಲ್ಲಿ ಬಿರುಕು ಮೂಡಿಸಿ, ಕೊನೆಗೆ ಒಂದು ಕ್ಷೇತ್ರವೂ ಇಲ್ಲದಂತೆ ಮಾಡಿಕೊಂಡಿರಿ. ಮುಂದಿನ ಚುನಾವಣೆಗೆ ಕೋಲಾರ, ಹುಣಸೂರು, ಚಾಮರಾಜಪೇಟೆ, ಕೊಪ್ಪಳ ಎನ್ನುತ್ತಿದ್ದೀರಿ. ಮತ್ತೊಂದೆಡೆ ಬಾದಾಮಿ ಜನತೆಗೆ ಸೋನಿಯಾ ಗಾಂಧಿ ಮೇಲೆ ಆಣೆ ಮಾಡಿ, ಅಲ್ಲಿಯೇ ಸ್ಪರ್ಧಿಸುವುದಾಗಿ ಹೇಳಿದ್ದೀರಿ.

ನಿಮಗೆ ಕರ್ನಾಟಕ ದರ್ಶನ ಮಾಡುವ ಆಸೆ ಇದ್ದರೆ, ಪ್ರವಾಸೋದ್ಯಮ ಇಲಾಖೆಯ ಮೂಲಕ ಹಲವು ಪ್ಯಾಕೇಜ್ ವ್ಯವಸ್ಥೆ ಮಾಡುತ್ತೇವೆ. ಪ್ಯಾಕೇಜ್‌ನಲ್ಲಿ ಹೋಗಿ, ಸ್ಪರ್ಧಿಸುವ ಕ್ಷೇತ್ರಗಳ ಪಟ್ಟಿ ಮಾಡಿಕೊಳ್ಳಿ ಎಂದು ವ್ಯಂಗ್ಯವಾಡಿದೆ.

ಪಿಎಸ್‌ಐ ನೇಮಕಾತಿ ಅಕ್ರಮ: ಕಿಂಗ್‌ಪಿನ್ ರುದ್ರಗೌಡ ಪಾಟೀಲ ಪೊಲೀಸ್ ವಶಕ್ಕೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಪಟ್ಟಂತೆ ಮತ್ತೊಬ್ಬ ಆರೋಪಿ ರುದ್ರಗೌಡ ಡಿ.ಪಾಟೀಲ ಅವರನ್ನು ಮಹಾರಾಷ್ಟ್ರದ ಸಿಐಡಿ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ. ತನಿಖಾಧಿಕಾರಿಗಳು ಆರೋಪಿಯನ್ನು ಕರೆತರಲು ಮಹಾರಾಷ್ಟ್ರಕ್ಕೆ ತೆರಳಿದ್ದಾರೆ. ಪರೀಕ್ಷಾ ಕೇಂದ್ರದೊಳಗೆ ಕೆಲ ಅಭ್ಯರ್ಥಿಗಳಿಗೆ ಬ್ಲೂಟೂತ್ ಸಂಪರ್ಕದ ಮೂಲಕ ಉತ್ತರಗಳನ್ನು ರವಾನಿಸಿದ ಆರೋಪ ರುದ್ರಗೌಡ ಮೇಲಿದೆ. ಈ ಹಿಂದೆ ನಡೆದ ಕೆಲವು ನೇಮಕಾತಿ ಪರೀಕ್ಷೆಗಳಲ್ಲೂ ರುದ್ರಗೌಡ ಇದೇ ತರಹದ ತಂತ್ರ ಬಳಸಿ ಅಕ್ರಮ ಎಸಗಿದ ಬಗ್ಗೆಯೂ ಸಿಐಡಿ ಅಧಿಕಾರಿಗಳು ಮಾಹಿತಿ ಕಲೆಹಾಕಿದ್ದಾರೆ.



ರುದ್ರಗೌಡ ಅವರ ಅಣ್ಣ, ಅಫಜಲಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಆದರೆ, ರುದ್ರಗೌಡ ತಲೆಮರೆಸಿಕೊಂಡಿದ್ದರು. ಮಹಾಂತೇಶ ಅವರನ್ನು ಬಂಧಿಸುವ ವೇಳೆ ರುದ್ರಗೌಡ ಮೊಬೈಲ್ ಮೂಲಕ ಸಿಐಡಿ ಅಧಿಕಾರಿಗಳೊಂದಿಗೆ ಮಾತನಾಡಿ, ಬೆದರಿಕೆ ಹಾಕಿದ್ದರು. ಈ ಕರೆಯ ಜಾಡು ಹಿಡಿದ ಪೊಲೀಸರಿಗೆ ಮಹಾರಾಷ್ಟ್ರದ ಪುಣೆಯ ಹತ್ತಿರ ಅವರ ಲೊಕೇಶನ್ ಪತ್ತೆಯಾಯಿತು. ಮಹಾರಾಷ್ಟ್ರದ ಸಿಐಡಿ ತಂಡಕ್ಕೆ ಮಾಹಿತಿ ನೀಡಿ, ಅವರ ಮೂಲಕ ಶನಿವಾರ ಮಧ್ಯಾಹ್ನ ವಶಕ್ಕೆ ಪಡೆಯಲಾಯಿತು ಎಂದು ಮೂಲಗಳು ತಿಳಿಸಿವೆ.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಏ.23–ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಏ.25ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಬಡಮಕಾನ್, ಸುಭಾಷ್‌ನಗರ, ಎನ್.ಆರ್ ಮೊಹಲ್ಲಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಕ್ಕು ಅನುಭವಿಸುವಂತೆ ಕರ್ತವ್ಯ ನಿರ್ವಹಣೆ ಆಗುತ್ತಿಲ್ಲ

ಹೈಕೋರ್ಟ್ ನ್ಯಾಯವಾದಿ ಪುತ್ತಿಗೆ ಆರ್.ರಮೇಶ್ ವಿಷಾದ

ಮೈಸೂರು, ಏ.23(ಎಸ್‌ಬಿಡಿ)– ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಿಗೆ ಬೇಡಿಕೆ ಸಲ್ಲಿಸುವ ಮಟ್ಟದಲ್ಲಿ ಕರ್ತವ್ಯ ನಿರ್ವಹಣೆ ಆಗುತ್ತಿಲ್ಲ ಎಂದು ಹೈಕೋರ್ಟ್ ಹಿರಿಯ ವಕೀಲ ಪುತ್ತಿಗೆ ಆರ್.ರಮೇಶ್ ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಅಂಗವಾಗಿ 'ಟೀಂ ಮೈಸೂರು' ವತಿಯಿಂದ ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ವಿಶೇಷ ಉಪನ್ಯಾಸದಲ್ಲಿ 'ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು' ಕುರಿತು ಮಾತನಾಡಿ, ನಾನು ಏನು ಬೇಕಾದರೂ ಕೇಳಬಹುದು. ಆದರೆ ನನ್ನನ್ನು ಕೇಳುವಂತಿಲ್ಲ ಎನ್ನುವಂತಹ ಸ್ಥಿತಿ ಇದೆ. ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡುತ್ತಾರೆಯೇ ಹೊರತು ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲ. ಹೀಗೆ ಕರ್ತವ್ಯ ನಿರ್ವಹಿಸದವರು ಹಕ್ಕುಗಳ ಬಗ್ಗೆ ಮಾತನಾಡುವಂತಿಲ್ಲ ಎನ್ನುವ ನಿಬಂಧನೆಯೂ ಇಲ್ಲ ಎಂದರು.



'ಸಂವಿಧಾನ ರಾಷ್ಟ್ರ ಅಡಿಪಾಯ. ಯಾವುದೇ ರಾಷ್ಟ್ರವಾದರೂ ಅಲ್ಲಿನ ಸಂವಿಧಾನದ ಮೇಲೆ ನಿಂತಿರುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಸಂವಿಧಾನವನ್ನು ತಿಳಿಯಬೇಕು. ಭಾರತದ ಸಂವಿಧಾನ ರಚನೆಗೆ ಸ್ವಾತಂತ್ರ್ಯ ಪೂರ್ವದಿಂದಲೇ ಪ್ರಯತ್ನ ಆರಂಭವಾಗಿತ್ತು. ಸಂವಿಧಾನ ಎಂದಾಕ್ಷಣ ಕರಡು ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸಿಕೊಳ್ಳಬೇಕು. ಹಾಗೆಯೇ ಸಂವಿಧಾನದಲ್ಲಿ ಸೂಚಿಸಿರುವ ನಾಗರಿಕ ಕರ್ತವ್ಯಗಳನ್ನು ಪರಿಪಾಲಿಸಬೇಕು. ಯಾವುದೇ ಕಾನೂನು ಸಂವಿಧಾನದಡಿಯಲ್ಲೇ ಜಾರಿಯಾಗಬೇಕು ಎಂದರು.

ಕನ್ನಡ ಕಂಪು: ನಾನು ಬಾಲ್ಯ ಕಳೆದಿದ್ದು ಶ್ರೀರಂಗಪಟ್ಟಣದಲ್ಲಿ. ಮಾಧ್ಯಮಿಕ ಶಿಕ್ಷಣದ ವೇಳೆ ಅಂಕೇಗೌಡರು ನನ್ನ ಗುರುಗಳಾಗಿದ್ದರು. ಗಂಡಬೇರುಂಡ ಲಾಂಛನವುಳ್ಳ ವಾಹನ ಹೋಗುತ್ತಿದ್ದರೆ ಅದರಲ್ಲಿ ಮಹಾರಾಜರಿದ್ದಾರೆ ಎಂದು ಪೂಜ್ಯ ಭಾವನೆಯಿಂದ ಕೈ ಮುಗಿಯುತ್ತಿದ್ದೆವು. ಈಗ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ಅಲ್ಲಿ ಕನ್ನಡ ಬಿಟ್ಟು ಬೇರೆ ಯಾವ ಭಾಷೆ ತಿಳಿದಿದ್ದರೂ ಬದುಕಬಹುದು. ಕೆಲ ಪ್ರದೇಶಗಳಲ್ಲಿ ಕನ್ನಡ ಮಾತನಾಡುವವರನ್ನು ಬೇರೆ ರಾಜ್ಯದಿಂದ ಬಂದವನಂತೆ ಕಾಣುತ್ತಾರೆ. ಆದರೆ ಮೈಸೂರಿಗೆ ಬಂದಾಕ್ಷಣ ದೇವಾಲಯಕ್ಕೆ ಬಂದಷ್ಟು ಸಂತೋಷವಾಯಿತು. ಕನ್ನಡ ಮಲ್ಲಿಗೆಯ ಕಂಪು ಆವರಿಸಿಕೊಂಡಿತು ಎಂದು ವಕೀಲ ಪುತ್ತಿಗೆ ರಮೇಶ್ ಬಣ್ಣಿಸಿದರು.

ಉಪನ್ಯಾಸಕ, ವಕೀಲ ಹರ್ಷ ಮಾತನಾಡಿದರು. ಮೈಸೂರು ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಜಿ.ಎನ್.ನಾಗೇಶ್, ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಅನ್ನನಾಳ, ಹೊಟ್ಟೆ, ಕರುಳಿನ ತೊಂದರೆಗೆ ಚಿಕಿತ್ಸಾ ಶಿಬಿರ

ಮೈಸೂರು, ಏ.23– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.25 ರಿಂದ 30ರ ವರೆಗೆ ಮಕ್ಕಳ ಅನ್ನನಾಳ, ಹೊಟ್ಟೆ ಮತ್ತು ಕರುಳಿನ ತೊಂದರೆಗೆ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಮಾಹಿತಿಗೆ ಮೊ.89993 14535, 7012244606 ಸಂಪರ್ಕಿಸಬಹುದು.

ಸಂಧಿವಾತ ಚಿಕಿತ್ಸಾ ಶಿಬಿರ

ಮೈಸೂರು: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.25ರಿಂದ 30ರವರೆಗೆ ಸಂಧಿವಾತ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಯಲಿದೆ.

ಮಾಹಿತಿಗೆ ಮೊ. 8431444 499, ದೂ. 0821–2548231 ಸಂಪರ್ಕಿಸಿ.

'ಡಾ.ರಾಜ್ ಕರುನಾಡ ಕಣ್ಮಣಿ' ಪ್ರಶಸ್ತಿ ಪ್ರದಾನ



ಮೈಸೂರು,ಏ.23(ಎಂಟಿವೈ)–ವರನಟ ಡಾ.ರಾಜ್‌ಕುಮಾರ್ ಜನ್ಮದಿನದ ಹಿನ್ನೆಲೆಯಲ್ಲಿ ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 'ಡಾ.ರಾಜ್ ಕರುನಾಡ ಕಣ್ಮಣಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಶ್ವಮಾನವ ಡಾ.ರಾಜ್ ಕುಮಾರ್ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜಕೀಯ, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಯಶಸ್ವಿನಿ ಸೋಮಶೇಖರ್, ವಿ.ಕುಮಾರಸ್ವಾಮಿ, ನಾಡನಹಳ್ಳಿ ಎಂ.ರವಿ, ಜಯರಾಂ, ಪ್ರಸನ್ನಕುಮಾರ್, ಜಯಸಿಂಹ, ತಿರುಮಲ ಯೋಗ ಪ್ರಕಾಶ್, ಮಹಾದೇವಸ್ವಾಮಿ, ಶ್ರೀರಾಜ್ ಮನೀಶ್, ಎಂ.ರಮೇಶ್ ಅವರಿಗೆ 'ಡಾ.ರಾಜ್ ಕರುನಾಡ ಕಣ್ಮಣಿ' ಪ್ರಶಸ್ತಿ ನೀಡಲಾಯಿತು.


ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಆರ್.ರಘು (ಕೌಟಿಲ್ಯ) ಮಾತನಾಡಿ, ವರನಟ ಡಾ.ರಾಜ್‌ಕುಮಾರ್ ಅವರ ಬದುಕಿನ ಪ್ರತಿ ಘಳಿಗೆಯು ಇಂದಿನ ಪೀಳಿಗೆಗೆ ಅಮೂಲ್ಯ ಸಂದೇಶ ನೀಡುತ್ತದೆ. ಸರಳತೆಯ ಸಾಕಾರ ಮೂರ್ತಿ ಎನಿಸಿರುವ ಡಾ.ರಾಜ್‌ಕುಮಾರ್ ಅಭಿನಯಿಸದ ಪಾತ್ರವಿಲ್ಲ. ಪ್ರತಿ ಪಾತ್ರವೂ ಸಾಮಾಜಿಕ ವ್ಯವಸ್ಥೆಯ ಉತ್ತಮ ಜೀವನಕ್ಕೆ ಇಂಬು ನೀಡುತ್ತಿದ್ದವು. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಸಲ್ಲಿಸಿರುವಂತಹ ಸಾಧಕರಿಗೆ ಡಾ.ರಾಜ್ ಕರುನಾಡ ಕಣ್ಮಣಿ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಎ.ಓ.ಪ್ರದೀಪ್, ಮುಡಾ ಸದಸ್ಯೆ ಲಕ್ಷ್ಮೀದೇವಿ, ಡಾ.ರಾಜ್ ಕುಮಾರ್ ಸಂಘದ ಸಂಸ್ಥಾಪಕ ರಾಮೇಗೌಡ, ಸಮಾಜ ಸೇವಕ ರಘುರಾಮ್ ವಾಜಪೇಯಿ, ಡಾ. ರಾಜ್‌ಕುಮಾರ್ ಸೇವಾ ಸಮಿತಿ ಗೌರವ ಅಧ್ಯಕ್ಷ ರಾಘವೇಂದ್ರ, ಸೇತುರಾಮ್, ರಮೇಶ್, ಸುಚೇಂದ್ರ, ಚಕ್ರಪಾಣಿ, ಮಂಜುನಾಥ್, ನಾಗಶ್ರೀ, ಸುರೇಶ್ ಗೋಲ್ಡ್, ಡಿ.ಲೋಹಿತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



'ವಿಜಯ ಕರ್ನಾಟಕ' ಸುದ್ದಿ ಸಂಪಾದಕರಾಗಿ ಬಡ್ತಿ ಹೊಂದಿ ಬೆಂಗಳೂರಿಗೆ ವರ್ಗಾವಣೆಯಾಗಿರುವ ಚೀ.ಜ.ರಾಜೀವ, ಜೆಎಸ್‌ಎಸ್ ಮಾಧ್ಯಮ ಮುಖ್ಯಸ್ಥ ಸಿ.ಕೆ.ಮಹೇಂದ್ರ, 'ವಿಜಯ ಕರ್ನಾಟಕ' ನೂತನ ಸ್ಥಾನಿಕ ಸಂಪಾದಕ ಐತಿಚಂಡ ರಮೇಶ್ ಉತ್ತಪ್ಪ, 'ವಿಜಯವಾಣಿ' ನೂತನ ಸ್ಥಾನಿಕ ಸಂಪಾದಕ ಎಂ.ಆರ್.ಸತ್ಯನಾರಾಯಣ ಅವರನ್ನು ಶನಿವಾರ ಖಾಸಗಿ ಹೋಟೆಲ್‌ನಲ್ಲಿ 'ಕನ್ನಡಪ್ರಭ' ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್ ನೇತೃತ್ವದಲ್ಲಿ ಅಭಿನಂದಿಸಲಾಯಿತು.

ಪಿಎಸ್‌ಐ ನೇಮಕಾತಿ ಅಕ್ರಮ: ತಪ್ಪಿತಸ್ಥರ ವಿರುದ್ಧ ಕ್ರಮ ಶತಸಿದ್ಧ

ಬೆಂಗಳೂರು, ಏ.23(ಕೆಎಂಶಿ)–ಪಿಎಸ್‌ಐ ನೇಮಕಾತಿಯ ಯಾವುದೇ ಬ್ಯಾಚ್‌ನಲ್ಲಿ ಅಕ್ರಮವಾಗಿದ್ದರೂ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಇಂದು ತಮ್ಮ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದರು. ಶಾಸಕ ಪ್ರಿಯಾಂಕ ಖರ್ಗೆ ಬಿಡುಗಡೆ ಮಾಡಿರುವ ಆಡಿಯೋ ನಾನು ಕೇಳಿಲ್ಲ.ಯಾವ ಮೆಟೀರಿಯಲ್ ಇದ್ದರೂ ತನಿಖೆಯಾಗುತ್ತದೆ. ಇಬ್ಬರ ನಡುವೆ ಮಾತುಕತೆಯಾಗಿದೆ. ಅವರಿಬ್ಬರು ಯಾರು, ಅವರ ಅರ್ಹತೆ ಏನು ಎನ್ನುವುದು ತನಿಖೆಯಲ್ಲಿ ತಿಳಿಯುತ್ತದೆ. ಆಡಿಯೋವನ್ನು ಸಹ ತನಿಖೆಗೆ ಒಳಪಡಿಸಿ ಯಾರೇ ತಪ್ಪಿತಸ್ಥರಿದ್ದರೂ, ಯಾವುದೇ ಬ್ಯಾಚ್ ಆಗಿದ್ದರೂ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಕಳೆದ 15 ದಿನಗಳ ಹಿಂದೆ ಶಾಲೆಗಳಿಗೆ ಬಂದಿದ್ದ ಬೆದರಿಕೆ ಇ–ಮೇಲ್ ಸಿರಿಯಾ ಹಾಗೂ ಪಾಕಿಸ್ತಾನದಿಂದ ಬಂದಿದೆ ಎಂಬ ಮಾಹಿತಿ ಬಂದಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು, ಈ ಬಗ್ಗೆ ಗೊತ್ತಿಲ್ಲ. ಪೊಲೀಸ್ ಆಯುಕ್ತರೊಂದಿಗೆ ಮಾತನಾಡುವುದಾಗಿ ತಿಳಿಸಿದರು. ಆಗಾಗ್ಗೆ ಶಾಂತಿ ಕದಡಲು ಈ ರೀತಿಯ ಪ್ರಯತ್ನಗಳಾಗುತ್ತವೆ. ಕಳೆದ ವರ್ಷವೂ ಆಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇ– ಮೇಲ್ ಮೂಲವನ್ನು ಪತ್ತೆ ಹಚ್ಚಲಾಗುವುದು. ಯಾವ ದೇಶದಿಂದ ಬಂದಿದೆ ಎಂದು ಗೊತ್ತಾಗುತ್ತದೆ. ಕೆಲವು ಸಂದರ್ಭದಲ್ಲಿ ಆ ದೇಶದ ಅಧಿಕಾರಿಗಳಿಗೆ ತಿಳಿಸಿ, ಕೆಲವರನ್ನು ಬಂಧಿಸಲಾಗಿದೆ. ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಇಂದು ಡಾ.ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ಪ್ರಶಸ್ತಿ ಪ್ರದಾನ

ಮೈಸೂರು,ಏ.23(ಎಂಟಿವೈ)–ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಏ.24ರಂದು ಬೆಳಗ್ಗೆ 10.30ಕ್ಕೆ ಈ ಸಾಲಿನ ಡಾ.ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಡಾ.ಬೆಟಗೇರಿ ಕೃಷ್ಣ ಶರ್ಮ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಪ್ರೊ.ರಾಘವೇಂದ್ರ ಪಾಟೀಲ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಂ.ಜಿ. ಮಂಜುನಾಥ್ ಉದ್ಘಾಟಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಇ.ಸಿ.ನಿಂಗರಾಜಗೌಡ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಮನು ಬಳಿಗಾರ ಪಾಲ್ಗೊಳ್ಳಲಿದ್ದಾರೆ.

ಇದೇ ವೇಳೆ ಡಾ.ಸಿ.ಎನ್.ರಾಮಚಂದ್ರನ್ (ವಿಮರ್ಶೆ–ಸಂಶೋಧನೆ), ಡಾ.ಎನ್.ಆರ್. ನಾಯಕ್ (ಜಾನಪದ) ಮತ್ತು ಪದ್ಮರಾಜ ದಂಡಾವತಿ (ಡಾ.ಬೆಟಗೇರಿ ಕೃಷ್ಣಶರ್ಮ ಪತ್ರಕರ್ತ ಪ್ರಶಸ್ತಿ) ಅವರಿಗೆ ಡಾ.ಹಂ.ಪ.ನಾಗರಾಜಯ್ಯ ಮತ್ತು ಡಾ.ಕಮಲಾ ಹಂಪನಾ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಸಿ.ಕೆ.ನಾವಲಗಿ, ಡಾ.ಸತೀಶ ಕುಲಕರ್ಣಿ, ಡಾ.ಸರಜೂ ಕಾಟ್ಕರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.04.2022 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಅಷ್ಟಮೀ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಉಳುಮೆ ಪ್ರತಿಷ್ಠಾನ:** ಜಾಗತಿಕ ತಾಪಮಾನ ಮತ್ತು ಕೃಷಿ ಜಾಗೃತಿ ಸಮಾವೇಶ, ಉಪಸ್ಥಿತರು : ಪರಿಸರ ತಜ್ಞ ನಾಗೇಶ್ ಹೆಗಡೆ, ಆಹಾರ ತಜ್ಞ ಕೆ.ಸಿ.ರಘು, ಸಾಮಾಜಿಕ ಹೋರಾಟಗಾರ ಬೆಟ್ಟಯ್ಯ ಕೋಟೆ, ಹೊಸೂರು ಕುಮಾರ್, ಕೃಷಿ ತಜ್ಞ ಅವಿನಾಶ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10ರಿಂದ

■ **ಕೆ.ಎಂ.ಪ್ರವೀಣ್‌ಕುಮಾರ್ ಚಾರಿಟಬಲ್ ಟ್ರಸ್ಟ್:** ವಿಶ್ವ ಪಾರಂಪರಿಕ ದಿನ ಆಚರಣೆ, ಮೈಸೂರಿನ ಪಾರಂಪರಿಕ ಕಟ್ಟಡಗಳ ಚಿತ್ರಕಲಾ ಸ್ಪರ್ಧೆ, ಸ್ಥಳ: ಚೆಲುವಾಂಬ ಉದ್ಯಾನವನ ಬೆಳಗ್ಗೆ 10.30 ರಿಂದ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ :** ಡಾ. ರಾಜ್‌ಕುಮಾರ್ ಜನ್ಮ ದಿನಾಚರಣೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಕೆ. ಪೋತರಾಜ್, ಉಪಸ್ಥಿತರು : ಉಪಾಧ್ಯಕ್ಷ ರಾಜಶೇಖರ ಕದಂಬ, ಮಹಿಳಾ ಸಂಘದ ಅಧ್ಯಕ್ಷೆ ಸರೋಜಮ್ಮ ಪಾಪೇಗೌಡ, ಸ್ಥಳ : ಎಂ.ಕೆ. ಶ್ರೀನಿವಾಸ್ ಸಭಾಂಗಣ, ಈಡಿಗ ವಿದ್ಯಾರ್ಥಿ ನಿಲಯದ ಆವರಣ, ಬೆಳಗ್ಗೆ 10.30ಕ್ಕೆ.

■ **ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ :** ಬೆಳ್ಳಿ ಮಹೋತ್ಸವ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಕುಮುದ್ ಮೆಹ್ರಾ, ರಾಧಾ ವೆಂಕಟೇಶ್, ಅಧ್ಯಕ್ಷತೆ: ಮಾಜಿ ಮೇಯರ್ ಪಿ. ವಿಶ್ವನಾಥ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಸಂವಹನ ಪ್ರಕಾಶನ :** ಹಿರಿಯ ಪತ್ರಕರ್ತ ಎಂ.ಆರ್. ಶಿವಣ್ಣ ಅವರ ಸಂಸ್ಮರಣೆ, ಲೇಖಕಿ ಚಂಪಾ ಶಿವಣ್ಣ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಕೃತಿಗಳ ಲೋಕಾರ್ಪಣೆ : ಪ್ರೊ. ಮೊರಬದ ಮಲ್ಲಿಕಾರ್ಜುನ, ಗಜಲ್ ಸಂಕಲನ ಬಿಡುಗಡೆ : ನಿವೃತ್ತ ತಹಸೀಲ್ದಾರ್ ಡಾ. ವಿ.ರಂಗನಾಥ್, ವನಸುಮ: ಪ್ರೊ. ಮೈಸೂರು ಕೃಷ್ಣಮೂರ್ತಿ, ಮಲೆನಾಡು ಮಲ್ಲಿಗೆ : ಡಾ. ಮಹೇಂದ್ರಮೂರ್ತಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಆರ್. ಶಿವಣ್ಣ ಸಂಸ್ಮರಣೆ : ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷೆ ಎ. ಹೇಮಗಂಗಾ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ, ವಿಶ್ವ ಮಧ್ವಮತ ವೆಲ್‌ಫೇರ್ ಅಸೋಸಿಯೇಷನ್ :** ರಾಜ್ಯ ಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣಾ ಸಮಾವೇಶ, ಸಾನ್ನಿಧ್ಯ : ಶ್ರೀಇಳೈ ಆಳ್ವಾರ್ ಸ್ವಾಮೀಜಿ, ಡಾ. ಭಾನುಪ್ರಕಾಶ್ ಶರ್ಮ, ಶ್ರೀ ರವಿಕಿರಣ್ ಆಚಾರ್ಯ, ಉದ್ಘಾಟನೆ : ಎಕೆಬಿಎಂಎಸ್ ನಿಕಟಪೂರ್ವ ರಾಜ್ಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಎಂ.ಆರ್. ಬಾಲಕೃಷ್ಣ, ಎ.ಎಸ್. ಯೋಗಾನರಸಿಂಹ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಕನ್ನಡಿಗರ ಭುವನ ಸಂಗಾತಿ :** 22ನೇ ವಾರ್ಷಿಕೋತ್ಸವ, ಸಾನ್ನಿಧ್ಯ : ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್, ಅಧ್ಯಕ್ಷತೆ: ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಖ್ಯ ಅತಿಥಿಗಳು: ಮೈಸೂರು ಧರ್ಮ ಕ್ಷೇತ್ರ ಧರ್ಮಾಧ್ಯಕ್ಷ ಡಾ. ಕೆ.ಎ. ವಿಲಿಯಂ, ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಹೇಮಂತಕುಮಾರ್ ಗೌಡ, ಹಿರಿಯ ಪತ್ರಕರ್ತ ರವೀಂದ್ರ ಭಟ್, ಡಾ. ಕೃಷ್ಣರಾಜು, ಪ್ರೊ.ಡಿ.ಆನಂದ್, ಸ್ಥಳ: ಹೋಟೆಲ್ ಗೋವರ್ಧನ್, ಶ್ರೀ ಹರ್ಷ ರಸ್ತೆ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಗಾನವೈದ್ಯಲೋಕ :** ಡಾ. ರಾಜ್ ಗಾನ ಸಮರ್ಪಣೆ, ಉದ್ಘಾಟನೆ: ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಡಾ. ರಾಜ್ ಕುರಿತು : ರಂಗ ನಿರ್ದೇಶಕ ಪ್ರೊ. ಹೆಚ್.ಎಸ್. ಉಮೇಶ್, ಪ್ರಾಸ್ತಾವಿಕ ನುಡಿ : ಗಾನವೈದ್ಯಲೋಕ ಗೌರವಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಗಾನವೈದ್ಯಲೋಕ ಅಧ್ಯಕ್ಷ ಡಾ. ಟಿ. ರವಿಕುಮಾರ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ಕೆ.ವಿ.ಮೂರ್ತಿ ಸಂಸ್ಮರಣಾ ಮದುವಟ್ಟು ಕಾರ್ಯಕ್ರಮ. ಉದ್ಘಾಟನೆ: ಮಾಜಿ ಶಾಸಕ ವಾಸು. ಪಿಟೀಲು ದ್ವಂದ್ವ ವಾದನ: ವಿದ್ವಾನ್ ಲಾಲ್ಗುಡಿ ಬಿ.ಜೆ.ಆರ್. ಕೃಷ್ಣನ್ ಮತ್ತು ವಿದುಷಿ ಲಾಲ್ಗುಡಿ ವಿಜಯಲಕ್ಷ್ಮಿ ಅವರಿಂದ. ವಿದ್ವಾನ್ ಕೆ.ಯು.ಜಯಚಂದ್ರರಾವ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ. ಸ್ಥಳ: ಸಂಗೀತ ಕಲಾನಿಧಿ ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಮಯ: ಸಂಜೆ 6 ಗಂಟೆಗೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀರಾಮ ಪಟ್ಟಾಭಿಷೇಕ, ಸಂಜೆ 6 ಗಂಟೆಗೆ ಶಾಸ್ತ್ರೀಯ ಸಂಗೀತ, ಶ್ರೀಮತಿ ವಾಣಿ ಮತ್ತು ವಿಣಾ ಸಹೋದರಿಯರಿಂದ ಹರಿಕಥೆ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಂದ ವಾಸಾಂಸಿ ಜೀರ್ಣಾನಿ ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಜಿಪಿಐಇಆರ್ ರಂಗ ತಂಡ :** ಡಾ. ರಾಜ್‌ಕುಮಾರ್ ಸ್ಮರಣೆ ರಂಗೋತ್ಸವ, ಮಂಟೇಸ್ವಾಮಿ ಕಥಾ ಪ್ರಸಂಗ, ರಚನೆ : ಹೆಚ್.ಎಸ್. ಶಿವಪ್ರಕಾಶ್, ಸಂಗೀತ : ದೇವಾನಂದ ವರಪ್ರಸಾದ್, ನಿರ್ದೇಶನ : ಮೈಮ್ ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ.ಗುರುಮೂರ್ತಿ ಪೆಂಡಕೂರು, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ', ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿ ಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎ.ಎನ್.ಶೀಲಾ, ವ್ಯಾಖ್ಯಾನ– ಮ.ರಾಮಕೃಷ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ.ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ–ಹೃದಯ ಶಸ್ತ್ರ ಚಿಕಿತ್ಸೆಯ ಅಗತ್ಯ ಕುರಿತು ಡಾ.ಬೆಳ್ಳಿಪಾಡಿ ಶ್ಯಾಮ್ ಪ್ರಸಾದ್ ಶೆಟ್ಟಿ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30ಮಕ್ಕಳ ಮಂಟಪ ಮೈಸೂರಿನ ಪೀಪಲ್ಸ್ ಪಾರ್ಕ್ ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ, ಮನ್ ಕಿ ಬಾತ್– ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.05 ವನಿತಾ ವಿಹಾರ–ವಿಶ್ವ ಪುಸ್ತಕ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಕರ್ನಾಟಕ ಪತ್ರಕರ್ತೆಯರ ಸಂಘದ ಸದಸ್ಯೆಯರು ಪ್ರಸ್ತುತ ಪಡಿಸುವ ಸಂಯೋಜಿತ ಕಾರ್ಯಕ್ರಮ 'ಪುಸ್ತಕ ಪ್ರೀತಿ', 12.35 ದೇವರನಾಮ–ಕೆ.ಎಸ್. ಸುರೇಖ, ರಘು ಹೆಗಡೆ, 12.45 ಜನಪದ ಸಂಗೀತ –ಬಸವರಾಜಯ್ಯ ಮತ್ತು ತಂಡ, 1.20 ಭಾವಗೀತೆ–ಎಸ್.ಸುನೀತಾ, ಜಿ.ವಿ.ಅತ್ರಿ, 2.35 ಚಲನ ಚಿತ್ರ ಧ್ವನಿವಾಹಿನಿ "ಗೀತಾ", 4.00 ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಭಾಗವಹಿಸಲಿರುವ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್–2021ರ ಸಮಾರಂಭದ ನೇರ ಪ್ರಸಾರ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ ನಮ್ಮ ಸಂವಿಧಾನ, ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 7.00 AIR Nxt programme – ಮೈಸೂರಿನ ಸಿದ್ಧಾರ್ಥ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕದ ವಿದ್ಯಾರ್ಥಿಗಳು, ಪ್ರಸ್ತುತಿ– ಬಿ. ದಿಗ್ವಿಜಯ್ ಮತ್ತು ಡಾ. ಮೈಸೂರು ಉಮೇಶ್, 8.00 ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.05 ಚಿಣ್ಣರ ಸುದ್ದಿಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ ಪ್ರಸ್ತುತಿ– ಕುಮಾರಿ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ವಿದ್ವಾನ್ ದ್ವಾರಂ ಸತ್ಯನಾರಾಯಣ–ವಯೋಲಿನ್ ವಾದನ, 11.00 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 24 ಭಾನುವಾರ 2022

ಸಂಪುಟ: 43 | ಸಂಚಿಕೆ: 09 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ ಬ್ರಹ್ಮಾಂಡ ಭ್ರಷ್ಟಾಚಾರ

ನೂರಾರು ನಿವೇಶನಗಳ ದಾಖಲೆಯ ಪುಟಗಳೇ ಮಾಯ

- ನೂರಾರು ಕೋಟಿ ರೂ. ಮೌಲ್ಯದ ನಿವೇಶನಗಳ ಅಕ್ರಮ ಪರಭಾರೆ ಶಂಕೆ
- ಮುಡಾ ಅಧಿಕಾರಿಗಳು, ಸಿಬ್ಬಂದಿ ಕೈವಾಡದಿಂದ ಭಾರೀ ಅವ್ಯವಹಾರ
- ಗಣಕೀಕೃತ ಇಂಡೆಕ್ಸ್ ಮಾಡುವಾಗ ಲೆಡ್ಜರ್‌ಗಳಿಂದ ನಿವೇಶನಗಳ ಮಾಹಿತಿ ಪುಟ ನಾಶ
- ಪ್ರಾಧಿಕಾರದ ಆಯುಕ್ತರ ಸೂಚನೆ ಮೇರೆಗೆ

ರಜಾ ದಿನವೂ ಕಾರ್ಯದರ್ಶಿ ನೇತೃತ್ವದ 20ಕ್ಕೂ ಹೆಚ್ಚು ಅಧಿಕಾರಿಗಳ ತಂಡದಿಂದ ಮೂಲ ಕಡತಗಳ ಪರಿಶೀಲನಾ ಕಾರ್ಯಾಚರಣೆ

● ಎಸ್.ಟಿ.ರವಿಕುಮಾರ್

ಮೈಸೂರು, ಏ.23–ನಿವೇಶನ ಹೊಂದುವ ಕನಸು ಕಂಡು ಅರ್ಜಿ ಸಲ್ಲಿಸಿ ಸುಮಾರು 15–20 ವರ್ಷಗಳಿಂದ ಸಾವಿರಾರು ಮಂದಿ ಕಾಯುತ್ತಲೇ ಇದ್ದಾರೆ. ಚಾತಕ ಪಕ್ಷಿಯಂತೆ ಕಾದಿರುವವರಿಗೆ ನಿವೇಶನ ನೀಡದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ), ಸಾವಿರಾರು ಮಂದಿಗೆ ಅಕ್ರಮವಾಗಿ ನಿವೇಶನ ಹೊಂದುವ ಭಾಗ್ಯವನ್ನಂತೂ ಕರುಣಿಸಿದೆ. ಆ ಮೂಲಕ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ.



ಕಚೇರಿ ಲೇಖಾಭಿಲಾಯ (Record Section)ದ ಲೆಡ್ಜರ್ ಮತ್ತು ಕಡತಗಳ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೈಸ್ಡ್ ಇಂಡೆಕ್ಸ್ ಮಾಡುವಾಗ ಬೆಲೆಬಾಳುವ ನೂರಾರು ನಿವೇಶನಗಳ ಮಾಹಿತಿ ಇದ್ದ ದಾಖಲಾತಿ ಪುಟಗಳನ್ನೇ ಹರಿದು ನಾಶ ಪಡಿಸಿರುವುದು ಬೆಳಕಿಗೆ ಬಂದಿದೆ. ಸುಮಾರು 30 ಲೆಡ್ಜರ್‌ಗಳಿಂದ 600 ನಿವೇಶನಗಳ ದಾಖಲೆ ಪುಟ (Page)ಗಳೇ ನಾಪತ್ತೆಯಾಗಿದ್ದು, ಇದರಲ್ಲಿ ನೂರಾರು ಕೋಟಿ ರೂ. ಅವ್ಯವಹಾರ ನಡೆದಿರಬಹುದೆಂದು ಅಂದಾಜಿಸಲಾಗಿದೆ. ಭ್ರಷ್ಟಾಚಾರದ ಸುಳಿವು ಸಿಗುತ್ತಿದ್ದಂತೆಯೇ ಎಚ್ಚೆತ್ತ ಮುಡಾ ಆಯುಕ್ತ ಡಾ.ಡಿ.ಬಿ.ನಟೇಶ್, ಈ ಕರ್ಮಕಾಂಡವನ್ನು ಬಯಲಿಗೆಳೆದು ಭಾಗಿಯಾಗಿರುವವರಿಗೆ ತಕ್ಕ ಶಾಸ್ತಿ ಮಾಡಲು ಮುಂದಾಗಿದ್ದಾರೆ.

● 9ನೇ ಪುಟಕ್ಕೆ


ಮುಡಾ ಸಿಬ್ಬಂದಿಯಿಂದ ಕಡತ ಪರಿಶೀಲನೆ

“ ಬದಲಿ ನಿವೇಶನದಲ್ಲೂ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿರುವ ಬಗ್ಗೆ ಭಾರೀ ಗುಮಾನಿ ಇದೆ. ಬದಲಿ ನಿವೇಶನ ಪಡೆದ ಅದೆಷ್ಟೋ ಫಲಾನುಭವಿಗಳು, ಮೂಲ ನಿವೇಶನವನ್ನು ತಮ್ಮ ಸುಪರ್ದಿಯಲ್ಲೇ ಇರಿಸಿಕೊಂಡಿದ್ದಾರೆ. ಇಲ್ಲವೇ ನಕಲಿ ದಾಖಲೆಗಳ ಮೂಲಕ ಇಂತಹ ಹಲವು ನಿವೇಶನ ಕಂಡ ಕಂಡವರ ಪಾಲಾಗಿವೆ. ಇದರಲ್ಲೂ ಮುಡಾ ಸಿಬ್ಬಂದಿ ಕೈಚಳಕವಿದೆ ಎಂದು ಹೇಳಲಾಗುತ್ತಿದೆ.

ವಿಜಯನಗರ, ದೇವನೂರು ಬಡಾವಣೆ ನಿವೇಶನಗಳದ್ದೇ ಸಿಂಹಪಾಲು

ಮೈಸೂರು: ಕಡತಗಳು, ಲೆಡ್ಜರ್‌ಗಳ ದಾಖಲೆ ಪುಟಗಳು ಕಣ್ಮರೆಯಾಗಿರುವುದರಲ್ಲಿ ವಿಜಯನಗರ 2ನೇ ಹಂತ ಮತ್ತು ದೇವನೂರು 1ನೇ ಹಂತದ ಬಡಾವಣೆಗಳ ನಿವೇಶನಗಳದ್ದೇ ಸಿಂಹಪಾಲು. ವಿಜಯನಗರ 2ನೇ ಹಂತದ 40X60, 50X80 ಅಳತೆ ವಿಸ್ತೀರ್ಣದ ಕೋಟ್ಯಾಂತರ ರೂ. ಬೆಲೆಬಾಳುವ ನಿವೇಶನಗಳ ಹಂಚಿಕೆ ಸಂಬಂಧ ಇದ್ದ ಕಡತ, ಲೆಡ್ಜರ್ ಮತ್ತು ಪ್ರಮುಖ

● 9ನೇ ಪುಟಕ್ಕೆ

ಕೆಬಿಜಿಯವರ ಭೂಮಂತ್ರ..

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ: ಏನಿದು ಇಕ್ಕಟ್ಟು...!?

ಪುಟ–4

ಒಳಪುಟಗಳಲ್ಲಿ

ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಆಯ್ತು... ನಮ್ಮ ಮುಂದಿನ ಗುರಿ ಮಥುರಾದಲ್ಲಿ ಶ್ರೀಕೃಷ್ಣ ಮಂದಿರ, ಕಾಶಿಯಲ್ಲಿ ವಿಶ್ವನಾಥ ಮಂದಿರ ವಿವಾದ ಇತ್ಯರ್ಥ

ಬಿಜೆಪಿ ಹಿರಿಯ ನಾಯಕರೂ ಆದ ರಾಜ್ಯಸಭಾ ಸದಸ್ಯ ಸುಬ್ರಹ್ಮಣಿಯನ್ ಸ್ವಾಮಿ ವಿಶ್ವಾಸ

ಮೈಸೂರು, ಏ.23(ಎಂಕೆ)– ಶ್ರೀ ರಾಮನ ಜನ್ಮ ಭೂಮಿ ಅಯೋಧ್ಯೆಯಲ್ಲಿ 'ಶ್ರೀ ರಾಮ ಮಂದಿರ' ನಿರ್ಮಾಣವಾಗುತ್ತಿರುವಂತೆಯೇ ಶ್ರೀ ಕೃಷ್ಣ ಜನ್ಮ ಭೂಮಿ ಮಥುರಾದಲ್ಲಿ 'ಶ್ರೀಕೃಷ್ಣ ಮಂದಿರ' ಹಾಗೂ



ಕಾಶಿಯಲ್ಲಿ 'ಕಾಶಿ ವಿಶ್ವನಾಥ ಮಂದಿರ'ದ ವಿವಾದ ಇತ್ಯರ್ಥ ನಮ್ಮ ಮುಂದಿನ ಗುರಿಯಾಗಿದೆ ಎಂದು ರಾಜ್ಯಸಭಾ ಸದಸ್ಯ ಡಾ. ಸುಬ್ರಹ್ಮಣಿಯನ್ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

(ಪೂರ್ಣ ವರದಿ ಪುಟ–4)

ನಕ್ಕರೆ ಅದೇ ಸ್ವರ್ಗ

ಪತಿ : "ನನ್ನ ಮೇಲೆ ಎಷ್ಟೊಂದು ಪ್ರೀತಿ ನಿನಗೆ, ನನಗೋಸ್ಕರ ಎರಡು ಬನಿಯನ್ ತಂದಿದ್ದೀಯ?"

ಪತ್ನಿ : "ಐದು ಸಾವಿರ ಕೊಟ್ಟು ರೇಷ್ಮೆ ಸೀರೆ ತಗೊಂಡೆ. ಅದಕ್ಕೆ ಫ್ರೀಯಾಗಿ ಕೊಟ್ಟರು ಅಷ್ಟೆ"

ಮೈಸೂರು ಮಿತ್ರ

ಭಾನುವಾರ, 24 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)


ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಸಮಸ್ಯೆಗಳೇ ಕೆಲವೊಮ್ಮೆ ಮಹತ್ತರವಾದ ಸಾಧನೆಗಳನ್ನು ಉನ್ನತವಾದ ಯಶಸ್ಸನ್ನು ತಂದುಕೊಡುತ್ತವೆ. –ಕೆನಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಟ್ಟಿ ಕೊಟ್ಟ ಬುದ್ಧಿ ಹೇಳಿಕೊಟ್ಟ ಮಾತು ಎಷ್ಟು ದಿನ ಬಂದೀತು?




ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ: ಏನಿದು ಇಕ್ಕಟ್ಟು...!?



ದೇವರಾಜ ಮಾರುಕಟ್ಟೆ



ಲ್ಯಾನ್ಸ್‌ಡೌನ್ ಕಟ್ಟಡ



ಮೈಸೂರು ಅರಮನೆ



ಜಯಲಕ್ಷ್ಮೀ ಮ್ಯಾನ್ಷನ್

ಮೈಸೂರು ಜಿಲ್ಲಾ ಪಾರಂಪರಿಕ ಸಮಿತಿ (Mysore District Heritage Committee), ಅದರ ಅಧ್ಯಕ್ಷರಾದ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು 14ರಂದು ಸಭೆ ಸೇರಿ ಮಹತ್ತರ ನಿರ್ಣಯವನ್ನು ತೆಗೆದುಕೊಂಡಿದೆ. ಅದೇನೆಂದರೆ ವಾಣಿಜ್ಯ ಉದ್ದೇಶಕ್ಕಾಗಿಯೇ ನಿರ್ಮಿಸಿದ ನೂರು ವರ್ಷಗಳಿಗಿಂತ ಹೆಚ್ಚು ಇತಿಹಾಸವುಳ್ಳ (ಅಂದರೆ, ಈಗ ಅದು ಒಂದು ಪಾರಂಪರಿಕ (Heritage) ಕಟ್ಟಡ ಎಂದು ಪರಿಗಣಿಸಲ್ಪಟ್ಟ) ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ಈ ಎರಡೂ ಹಳೇ ಕಟ್ಟಡಗಳನ್ನು ನೆಲಸಮಗೊಳಿಸಿ ಪಾರಂಪರಿಕ ವಿನ್ಯಾಸ ಉಳಿಸಿಕೊಂಡು, ಯಥಾವತ್ತಾಗಿ ಹೊಸದಾಗಿ ನಿರ್ಮಿಸುವುದು.

ಈ ಸುದ್ದಿ ಬಂದಿದ್ದೇ ತಡ **ಕೆಲವು ಪಟ್ಟಭದ್ರ ಸ್ವಹಿತಾಸಕ್ತಿಯ ಜನರು** ಆಕಾಶವೇ ಕಳಚಿ ಬಿತ್ತೇನೋ ಎಂಬಂತೆ ಪ್ರತಿಕ್ರಿಯಿಸಿ ತಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಇನ್ನು ಕೆಲವರು ಇದಕ್ಕೆ ವಿರೋಧವಾಗಿ ತಮ್ಮ ಅಭಿಪ್ರಾಯವನ್ನು ಸ್ಥಳೀಯ ಪತ್ರಿಕೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಒಬ್ಬರಾದ ನಾಗೇಂದ್ರ, ವಿದ್ಯಾರಣ್ಯಪುರಂ, ಮೈಸೂರು ಅವರು '**ಮೈಸೂರು ಮಿತ್ರ**'ನ 'ನಿಮ್ಮ ಪತ್ರಗಳು' ಅಂಕಣದಲ್ಲಿ ಬರೆಯುತ್ತಾರೆ: "ನಮ್ಮ ಪ್ರಶ್ನೆ ಇಷ್ಟೆ. ಈ ಕಟ್ಟಡಗಳ ಪುನಶ್ಚೇತನಗೊಳಿಸಿದ ನಂತರ ಅವುಗಳನ್ನು ಸ್ಮಾರಕಗಳನ್ನಾಗಿ (Monument) ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಆದರೆ ಅವುಗಳನ್ನು ಜನ ಬಳಕೆಗೆ (ವಾಣಿಜ್ಯ ಉದ್ದೇಶಕ್ಕೆ) ಮತ್ತೆ ಮುಕ್ತ ಮಾಡುವುದಾದರೆ, ಒಂದು ವೇಳೆ ಏನಾದರೂ ಮತ್ತೆ ದುರಂತ ಸಂಭವಿಸಿದರೆ..."

ಅಂದರೆ ಅಲ್ಲಿ ಬರುವ ಜನರ ಪ್ರಾಣಕ್ಕೆ ಅಪಾಯವಾದರೆ..., ಕಟ್ಟಡ ಕುಸಿದು ಜನರ ಕೈಕಾಲು ಊನವಾದರೆ..., ತಲೆ ಒಡೆದರೆ ಯಾರು ಜವಾಬ್ದಾರರು? ಈಗಾಗಲೇ, ಈ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡ ಲಾಗುವುದಿಲ್ಲ ಎನ್ನುವುದು ಕಟ್ಟಡದ ಒಂದು ಭಾಗ ಕುಸಿದು ಬಿದ್ದಿದ್ದೇ ಪುರಾವೆ. ಆಗಲೂ ಪಾರಂಪರಿಕ ತಜ್ಞರು ಸಲಹೆ ನೀಡಿದರಲ್ಲವೆ?

ಅಂದ ಹಾಗೆ, ಈ ಕಟ್ಟಡಗಳನ್ನು ಪುನಶ್ಚೇತನ (renovation) ಗೊಳಿಸಿ ಕೇವಲ ಸ್ಮಾರಕಗಳನ್ನಾಗಿ ಮಾಡಿದರೆ, ನಗರ ಪಾಲಿಕೆ ನಮ್ಮ ಜನರಿಗೆ (ತೆರಿಗೆದಾರರಿಗೆ) ನ್ಯಾಯಯುತವಾಗಿ ದೊರಕಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸದ ಹಾಗೆ ಆಗುತ್ತದೆ.

ಅದಾಗಲೇ, ಮೈಸೂರು ರಾಜವಂಶದ ಯದುವೀರ ಕೃಷ್ಣದತ್ತ ನರಸಿಂಹರಾಜ ಒಡೆಯರ್ ಅವರ ನೇತೃತ್ವದಲ್ಲಿ **ಪಾರಂಪರಿಕ ಕಟ್ಟಡಗಳು, ಸ್ಮಾರಕಗಳ ಸಂರಕ್ಷಕರೆಂದು** ಹೇಳಿಕೊಳ್ಳುವವರು ಮತ್ತು ಈ ಕಟ್ಟಡಗಳ ವಾಣಿಜ್ಯ ವ್ಯವಹಾರದ ಫಲಾನುಭವಿಗಳು ಈ ಪಾರಂಪರಿಕ ಕಟ್ಟಡಗಳ ಉಳಿಸಲೇಬೇಕು ಎಂದು ಆಗ್ರಹಿಸುತ್ತಾ ಪ್ರತಿಭಟನೆ ನಡೆಸಿದ್ದಾರೆ. ಹಾಗೂ ಸರ್ಕಾರ ಒಪ್ಪಿದ್ದಲ್ಲಿ ಅರಮನೆ ವತಿಯಿಂದಲೇ ಈ ಕಟ್ಟಡಗಳನ್ನು ಪುನಶ್ಚೇತನಗೊಳಿಸುವ ಕಾಮಗಾರಿಯನ್ನು ಮಾಡುತ್ತೇವೆ ಎಂದು ರಾಜವಂಶಸ್ಥರು ಹೇಳಿಕೆಕೊಟ್ಟಿದ್ದಾರೆ.

ಒಂದು ವೇಳೆ ಇದೆ ರೀತಿಯ ನಿರ್ಧಾರ ವನ್ನು ಪಾರಂಪರಿಕ ಸಮಿತಿ ತೆಗೆದುಕೊಂಡರೆ ಮುಂದೆ ಒಂದು ದಿನ ಅರಮನೆಯನ್ನೂ ಒಡೆಯಬೇಕಾದೀತು ಎಂಬ ಮಾತೂ ಕೇಳಿ ಬಂದಿದೆ. ಇರಬಹುದು. '**ಕಾಲಾಯ ತಸ್ಮೈ ನಮಃ**'– ಕಾಲ ನಿರ್ಣಯ ಬದಲಿಸುವುದು ಯಾರಿಂದಲೂ ಸಾಧ್ಯವಿಲ್ಲ.

ಈ ಹಿಂದೆ ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಇದೇ ಅರಮನೆಯ ಶಿಥಿಲಾವಸ್ಥೆ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದರಂತೆ ಕ್ರಮವನ್ನೂ ತೆಗೆದುಕೊಂಡಿದ್ದರು. ನಮಗೆ ಗೊತ್ತಿರುವ ಹಾಗೆ ಈ ಮೊದಲು ದಸರಾ ಸಂದರ್ಭದಲ್ಲಿ ಅರಮನೆಯ ಮುಂಭಾಗದ ದರ್ಬಾರ್ ಹಾಲ್‌ನಲ್ಲಿ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆಮಂತ್ರಿತ ಜನರು, ಕಲಾ ರಸಿಕರು, ದರ್ಬಾರ್ ಹಾಲಿನ ಎಡ–ಬಲ ಭಾಗದಲ್ಲಿರುವ ಸಭಾಂಗಣದಲ್ಲಿ ಆಸೀನರಾಗುತ್ತಿದ್ದರು. ಸಾರ್ವಜನಿಕರು ಅರಮನೆಯ ಮುಂಭಾಗದ ಪ್ರಾಂಗಣದಲ್ಲಿ ಕುಳಿತು ಸಂಗೀತ ಆಲಿಸುತ್ತಿದ್ದರು. ಆದರೆ ಹಿರಿಯ ಐಎಎಸ್ ಅಧಿಕಾರಿಯ ಸಲಹೆ ಮೇರೆಗೆ ಅಲ್ಲಿಂದ ದರ್ಬಾರ್ ಹಾಲಿನಲ್ಲಿ ಜನರಿಗೆ ಆಸನ ವ್ಯವಸ್ಥೆ ಮಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಇದು ಏನನ್ನು ಸೂಚಿಸುತ್ತದೆ?

ಅದೇ ಗತಿ ಮಾನಸಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ (ಮಹಲು)ಗೂ ಬಂದಿದೆ. ಅದನ್ನು ಕಟ್ಟಿದ್ದು 1910ರಲ್ಲಿ. ಅದರ ಶಿಥಿಲಾವಸ್ಥೆಯನ್ನು ಮನಗಂಡು ಇನ್‌ಫೋಸಿಸ್ ಫೌಂಡೇಷನ್‌ನವರು (ಸುಧಾಮೂರ್ತಿ) 2004–2005ರಲ್ಲಿ ಅದರ ಒಂದು ಭಾಗವನ್ನು ಅದೆಷ್ಟೋ ಕೋಟಿ ಖರ್ಚು ಮಾಡಿ ಪುನರುಜ್ಜೀವನಗೊಳಿಸಿದರು. ಆದರೆ ಈಗ ಪುನಃ ಶಿಥಿಲಾವಸ್ಥೆ ತಲುಪಿದೆ. ಈಗ ಕಟ್ಟಡಕ್ಕೆ ಶಾಸ್ತ್ರೀಯ ಕನ್ನಡ ಕೇಂದ್ರ ಸಂಸ್ಥೆಯನ್ನು ಸ್ಥಳಾಂತರಿಸುವ ಪ್ರಸ್ತಾಪವಿದೆ. ಹಾಗಾಗಿ ಸರ್ಕಾರ ಮತ್ತಷ್ಟು ಕೋಟಿಯನ್ನು ಖರ್ಚು ಮಾಡಿ ಇದನ್ನು ಪುನಶ್ಚೇತನಗೊಳಿಸುವ ಸಾಧ್ಯತೆಗಳಿವೆ. ಅದೆಷ್ಟು ದಿನ ಬಾಳಿಕೆ ಬರಬಹುದು! ದೇವರೇ ಬಲ್ಲ!!

ಒಟ್ಟಿನಲ್ಲಿ, ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ಪಾರಂಪರಿಕ ಕಟ್ಟಡವೆಂದು ಜೀರ್ಣೋದ್ಧಾರ ಮಾಡಿದರೆ ಅದನ್ನು ಖಂಡಿತವಾಗಿ ವಾಣಿಜ್ಯ ಉದ್ಯಮದ ಉದ್ದೇಶಕ್ಕಾಗಿ ಉಪಯೋಗಿಸಲೇಬಾರದು. ಹಾಗೇನಾದರೂ ಜನರ ಬಳಕೆಗೆ ಮುಕ್ತಗೊಳಿಸಿದರೆ ಮುಂದೊಂದು ದಿನ ಅಪಾಯ ತಪ್ಪಿದ್ದಲ್ಲ.

(ಏ.16ರ '**ಮೈಸೂರು ಮಹಾನಗರ ಪಾಲಿಕೆ: ನೀವು ಈ ಮುಂಗಾರು ವಿಪತ್ತು ನಿರ್ವಹಣೆಗೆ ಸಜ್ಜಾಗಿದ್ದೀರಾ?**' ಭೂಮಂತ್ರ ಅಂಕಣವನ್ನು ಓದಿ)

email: voice@starofmysore.com

ನಿಮ್ಮ ಪತ್ರಗಳು

ವಾಹನ ವಿಮೆ ಬಗ್ಗೆ ಅರಿವು ಅಗತ್ಯ

ಮಾನ್ಯರೆ,

ಸಮಾಜದ ಪ್ರಮುಖ ಅಗತ್ಯತೆಗಳಲ್ಲಿ ವಾಹನ ಹೊಂದಿರುವುದು ಕೂಡ ಒಂದಾಗಿದೆ. ವಾಹನಗಳು ಸಮಾಜದಲ್ಲಿ ಜನರ ಆರ್ಥಿಕ ಸ್ಥಿತಿಯ ಅನುಗುಣವಾಗಿ ಇರುತ್ತವೆ. ಕೆಲವು ಕಾರು, ಮತ್ತೆ ಹಲವಾರು ಬೈಕ್ ಹೊಂದಿರುತ್ತಾರೆ ಹಾಗೂ ಕೆಲವು ಮಂದಿ ವಾಹನಗಳನ್ನು ತಮ್ಮ ವ್ಯವಹಾರ ಭಾಗವಾಗಿ ಹೊಂದಿರುವುದು ಸರ್ವೆಸಾಮಾನ್ಯವಾಗಿದೆ. ಮೇಲಿನ ಎಲ್ಲಾ ಜನರು ವಿಮೆಯನ್ನು ಆರ್‌ಟಿಓ ಮತ್ತು ಪೊಲೀಸರಿಗೆ ತೋರಿಸಲು ಮಾತ್ರ ಅಂದುಕೊಂಡಿರುವುದು ತಪ್ಪು ಕಲ್ಪನೆಯಾಗಿದೆ.

ನಾವೆಲ್ಲರೂ ಪ್ರತಿನಿತ್ಯ ವಾಹನ ಅಪಘಾತಗಳ ಬಗ್ಗೆ ನೋಡಿದ್ದೇವೆ ಹಾಗೂ ಮಾಧ್ಯಮಗಳ ಮೂಲಕ ಕೇಳಿದ್ದೇವೆ ಹಾಗೂ ನಮ್ಮವರು ದೂರವಾದಾಗ ನೋವು ಅನುಭವಿಸುವುದು ಸಾಮಾನ್ಯವಾಗಿದೆ. ವಿಮೆಯಲ್ಲಿ ಎರಡು ರೀತಿಯ ವಿಮೆಗಳು ಇರುತ್ತದೆ. ಪ್ಯಾಕೇಜ್ ಪಾಲಿಸಿಯಲ್ಲಿ ವಾಹನ ಮತ್ತು ಪರ್ಸನ್‌ಗೂ ಕೂಡ ವಿಮೆ ಇರುತ್ತದೆ. ಲಿಬಾಲಿಟಿ ಪಾಲಿಸಿಯಲ್ಲಿ ಪರ್ಸನ್‌ಗೆ ಮಾತ್ರ ವಿಮೆಯಿರುತ್ತದೆ. ಈ ಎರಡು ಭಾಗದ ಪಾಲಿಸಿಗಳಲ್ಲಿ ಪಿಎ ಎಂಬ ಕವರ್ ಹೊಂದಿದೆಯೇ ಎಂದು ಗಮನಿಸುವುದು ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಇದು ಅಪಘಾತದಲ್ಲಿ ಮರಣ ಹೊಂದಿದ ಜನರ ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ. ಕೆಲವು ಆನ್‌ಲೈನ್ ಪಾಲಿಸಿಗಳಲ್ಲಿ ಈ ಕವರ್ ಅನ್ನು ಹೊಂದಿರುವುದಿಲ್ಲ. ಇದರಿಂದ ಅಂತಹ ಪಾಲಿಸಿಗಳಿಗೆ ಯಾವುದೇ ಮಹತ್ವ ಇರುವುದಿಲ್ಲ. ಆದ್ದರಿಂದ ಪಾಲಿಸಿಗಳನ್ನು ಹತ್ತಿರದ ಆಫೀಸುಗಳಲ್ಲಿ ಮತ್ತು ಏಜೆಂಟ್‌ಗಳ ಹತ್ತಿರ ಪಡೆಯುವುದು ಸೂಕ್ತವಾಗಿರುತ್ತದೆ. ಕಡಿಮೆ ಮೊತ್ತದ ಪಾಲಿಸಿಗಳಲ್ಲಿ ಕವರೇಜ್ ಕಡಿಮೆ ಇರುತ್ತವೆ ಎಂಬ ಅರಿವು ನಮಗಿರಬೇಕು. ವಾಹನ ವಿಮೆ ಪಾಲಿಸಿ ಪಡೆಯೋಣ ಜೀವನ ಭದ್ರತೆ ಹೊಂದೋಣ.

–ಬಸವರಾಜಪ್ಪ ಹೆಚ್, ಹಾಡ್ಯ, ಕೆ.ಆರ್.ನಗರ ತಾ.

ವಿದ್ಯುತ್ ಕಂಬ ದುರಸ್ತಿಪಡಿಸಲು ಮನವಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಕಾಡಂಚಿನ ನವಿಲೂರು ಗ್ರಾಮದ ಪ್ರಮುಖ ಬೀದಿಯಲ್ಲಿ ಗೋವಿಂದೇಗೌಡ ಎಂಬುವರ ಮನೆಯ ಪಕ್ಕದಲ್ಲಿರುವ ವಿದ್ಯುತ್ ಕಂಬವು ಈಗಾಗಲೇ ನೆಲಕ್ಕೆ ಬೀಳುವ ಅಪಾಯದಲ್ಲಿದ್ದು, ಯಾವ ಕ್ಷಣದಲ್ಲಾದರೂ ಬೀಳಬಹುದು. ಈ ಬೀದಿಯಲ್ಲಿ ಚಿಕ್ಕ ಪುಟ್ಟ ಮಕ್ಕಳು ಹಾಗೂ ಶಾಲಾ ವಿದ್ಯಾರ್ಥಿಗಳು ಹೆಚ್ಚಾಗಿ ಓಡಾಡುತ್ತಾರೆ. ಈ ಭಾಗದಲ್ಲಿ ದನಕರುಗಳು ಹೆಚ್ಚು ಇರುವುದರಿಂದ ಅವುಗಳು ಕಂಬಕ್ಕೆ ತಮ್ಮ ಮೈಯನ್ನು ಉಜ್ಜುತ್ತವೆ. ಆ ಸಂದರ್ಭದಲ್ಲಿ ಕಂಬವು ಅಲುಗಾಡುವುದರಿಂದ ಅಪಾಯ ಸಂಭವಿಸಬಹುದು. ಇದರ ಬಗ್ಗೆ ವಿದ್ಯುತ್ ಇಲಾಖೆಗೆ ಕಂಬ ಬದಲಿಸುವಂತೆ ಹಲವಾರು ಬಾರಿ ಮನವಿ ಮಾಡಿದರೂ ಇತ್ತ ಗಮನ ಹರಿಸುತ್ತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ವಿದ್ಯುತ್ ಕಂಬ ಸರಿಪಡಿಸಿ ಮುಂದಾಗುವ ಅನಾಹುತ ತಪ್ಪಿಸಬೇಕೆಂದು ಮನವಿ.

– ನವಿಲೂರು ಗ್ರಾಮಸ್ಥರು, ಪಿರಿಯಾಪಟ್ಟಣ ತಾ.

ಮಾರುಕಟ್ಟೆ ಕಟ್ಟಡ ನೆಲಸಮ ಸರಿಯಲ್ಲ

ಮಾನ್ಯರೆ,

ಮೈಸೂರಿನ ದೇವರಾಜ ಮಾರುಕಟ್ಟೆ ನೆಲಸಮ ಮಾಡುವ ವಿಚಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಈ ದೇವರಾಜ ಮಾರುಕಟ್ಟೆ ವಿಚಾರ ಇಂದು ನಿನ್ನೆಯದಲ್ಲ. ಆಗಾಗ ಈ ವಿಚಾರ ಪ್ರಸ್ತಾಪ ಮಾಡುತ್ತಿರುವವರ ಒಂದು ದೊಡ್ಡ ಗುಂಪೇ ಇದೆ. ಈ ವಿಚಾರದಲ್ಲಿ ರಾಜ ವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಭಿಪ್ರಾಯ ಖಂಡಿತ ಸರಿಯಾಗಿಯೇ ಇದೆ.

ಅಷ್ಟಕ್ಕೂ ಈ ಕಟ್ಟಡವನ್ನು ಕೆಡವಿಹಾಕುವಷ್ಟು ಶಿಥಿಲವಾಗಿದೆಯೇ ಎಂಬುದೇ ಜನ ಸಾಮಾನ್ಯನ ಪ್ರಶ್ನೆ. ಇದೇ ವಿಚಾರದಲ್ಲಿ ಮಹಾರಾಜ ಯದುವೀರ್ ಅವರು ಸುಪ್ರಸಿದ್ಧ ಮೈಸೂರು ಅರಮನೆಗೆ ಈಗಾಗಲೇ ಒಂದು ನೂರು ವರ್ಷ ವಾಗಿದೆ ಎಂದು ಸುಪ್ರಸಿದ್ಧ ಮೈಸೂರು ಅರಮನೆಯನ್ನು ಕೆಡವಲಾಗುತ್ತದೆಯೇ? ಎಂದು ಸರಿಯಾಗಿಯೇ ಕೇಳಿದ್ದಾರೆ. ಈ ವಿಚಾರ ಮತ್ತೆ ಮುನ್ನೆಲೆಗೆ ಬರುವುದಕ್ಕೆ ಕಾರಣ ಕಂಟ್ರಾಕ್ಟರ್‌ಗಳ ಲಾಬಿ ಎನಿಸುತ್ತದೆ. ಅವಶ್ಯಕತೆ ಇದ್ದಲ್ಲಿ ಕೆಲವು ಕಡೆ ರಿಪೇರಿ ಮಾಡಿಸಲಿ. ಇಡೀ ಕಟ್ಟಡಕ್ಕೆ ಸುಣ್ಣ ಬಣ್ಣ ಮಾಡಿಸಲು ' ಟೆಂಡರ್ ' ಕರೆಯಲಿ.

–ಬೇಲೂರು ದ. ಶಂ. ಪ್ರಕಾಶ್, ಹೊಸ ಬಂಡಿಕೇರಿ, ಮೈಸೂರು

ಇನ್ನು ಮುಂದೆ ಪಾರಂಪರಿಕ ಶೈಲಿಗೆ ಪ್ರೋತ್ಸಾಹಿಸಿ

ಮಾನ್ಯರೆ,

ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ಕೆಲಸ ಆಗಬೇಕು. ಯಾಕೆಂದರೆ ಈ ಪಾರಂಪರಿಕ ಕಟ್ಟಡಗಳು ಮೈಸೂರಿಗೆ ಮೆರಗನ್ನು ನೀಡುತ್ತವೆ. ಆದರೆ ಅದೇ ಸಂದರ್ಭದಲ್ಲಿ ಈ ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು ಜನರ ಪ್ರಾಣಕ್ಕೆ ಕುಂದು ಬರುವ ರೀತಿಯಲ್ಲಿ ಇದ್ದರೆ ಅದನ್ನು ನೆಲಸಮ ಮಾಡಿ ಮತ್ತೆ ಅದೇ ರೀತಿಯಲ್ಲಿ ಹೊಸದಾಗಿ ನಿರ್ಮಿಸುವ ಸಂಬಂಧ ವಿಚಾರ ಮಾಡಬಹುದು.

ಅದೇ ರೀತಿ ಮೈಸೂರಿನಲ್ಲಿ ಹೊಸದಾಗಿ ಮನೆ ಮತ್ತು ಇತರ ಸಂಕೀರ್ಣಗಳನ್ನು ನಿರ್ಮಿಸುವ ಜನರಿಗೆ ಪಾರಂಪರಿಕ ರೀತಿಯಲ್ಲಿ ಕಟ್ಟಡವನ್ನು ಕಟ್ಟುವ ವಿಚಾರ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದರೆ ಅಂಥವರಿಗೆ ವಿಶೇಷ ರಿಯಾಯಿತಿ ಮತ್ತು ವಿಶೇಷ ಸವಲತ್ತುಗಳನ್ನು ಕೊಡುವ ವ್ಯವಸ್ಥೆ ಮಾಡಿದರೆ ಮೈಸೂರಿನ ಪಾರಂಪರಿಕತೆಯನ್ನು ಉಳಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಮುಡಾ ಮತ್ತು ಕಾರ್ಪೊರೇಷನ್ ಎರಡೂ ವಿಚಾರ ಮಾಡಬೇಕಾಗಿದೆ.

–ಡಾ ನಾರಾಯಣ ಹೆಗಡೆ. ಮೈಸೂರು

ದ್ವಿಚಕ್ರ ವಾಹನ ಸವಾರರ ಪುಂಡಾಟಕ್ಕೆ ಬ್ರೇಕ್ ಹಾಕಿ

ಮಾನ್ಯರೆ,

ಮೈಸೂರಲ್ಲಿ ದ್ವಿಚಕ್ರ ವಾಹನಗಳಲ್ಲಿ ಪುಂಡಾಟ, ನಿಯಮ ಉಲ್ಲಂಘಿಸುವ ಪ್ರಕರಣಗಳು ಜಾಸ್ತಿ ಆಗುತ್ತಿವೆ. ಮೂವರು ಕುಳಿತು, ಸಿಗ್ನಲ್ ಲೈಟ್‌ಗಳನ್ನು ಲೆಕ್ಕಿಸದೇ ವೇಗವಾಗಿ ಓಡಿಸುವುದು, ಇತರ ವಾಹನ ಸವಾರರಿಗೆ ಆಘಾತ ಉಂಟು ಮಾಡುವ ಅತೀ ವೇಗ, ಗಾಬರಿ ಹುಟ್ಟಿಸುವಂತಹ ಶಬ್ಧ, ಹೆಲ್ಮೆಟ್ ಅಂತೂ ಇಲ್ಲವೇ ಇಲ್ಲ. ಇದರಿಂದ ಅಮಾಯಕ ವಾಹನ ಸವಾರರು ಪ್ರತಿನಿತ್ಯ ಹಿಂಸೆ ಅನುಭವಿಸಬೇಕಾಗಿ ಬಂದಿದೆ. ಇಷ್ಟಕ್ಕೆಲ್ಲಾ ಕಾರಣ ಸಂಚಾರಿ ಪೊಲೀಸರು. ಕಂಡೂ ಕಾಣದಂತೆ ನಿಂತಿರುತ್ತಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತಾದರೆ ಇಂತಹ ಪುಂಡರು ಬುದ್ಧಿ ಕಲಿಯುತ್ತಿದ್ದರು.

–ನಾಗೇಶ್, ಕುವೆಂಪುನಗರ, ಮೈಸೂರು.

ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಆಯ್ತು...

ನಮ್ಮ ಮುಂದಿನ ಗುರಿ ಮಥುರಾದಲ್ಲಿ ಶ್ರೀಕೃಷ್ಣ ಮಂದಿರ, ಕಾಶಿಯಲ್ಲಿ ವಿಶ್ವನಾಥ ಮಂದಿರ ವಿವಾದ ಇತ್ಯರ್ಥ

- ಬಿಜೆಪಿ ಹಿರಿಯ ನಾಯಕರೂ ಆದ ರಾಜ್ಯಸಭಾ ಸದಸ್ಯ ಸುಬ್ರಹ್ಮಣಿಯನ್ ಸ್ವಾಮಿ
- ಎಲ್ಲಾ ಭಾರತೀಯರ ಡಿಎನ್ಎ ಒಂದೆ; ಇಂಗ್ಲಿಷ್‌ಗೆ ಪರ್ಯಾಯ ಸಂಸ್ಕೃತ
- ದೇಶದಲ್ಲಿ ಶೇ.೮೦ರಷ್ಟು ಹಿಂದೂಗಳಿದ್ದಾರೆ; ೨೦೫೦ಕ್ಕೆ ಭಾರತಕ್ಕೆ ಮೊದಲ ಸ್ಥಾನ



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಹಿಂದೂ ಫೋರಂ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ಡಾ.ಸುಬ್ರಹ್ಮಣಿಯನ್ ಸ್ವಾಮಿ ವಿಶೇಷ ಉಪನ್ಯಾಸ ನೀಡಿದರು.

ಕಾಡಿನ ಸಿಂಹದ ಹಾಗೆ ವರ್ತಿಸಬೇಕು... ❞

ನಾವಿಂದು ಚೀನಾವನ್ನು ಎದುರಿಸಬೇಕಾಗಿದೆ. ಚೀನಾವನ್ನು ಸೋಲಿಸುವವರೆಗೂ ಭಾರತ ಸೂಪರ್ ಪವರ್ ಆಗಲು ಸಾಧ್ಯವೇ ಇಲ್ಲ. 2020ರಲ್ಲಿ ಚೀನಾದವರು ದೇಶದ 200 ಕಿ.ಮೀ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದರು. ಭಾರತ–ಚೀನಾ ಗಡಿಭಾಗದ ಲಡಾಖ್ ಪೂರ್ವಭಾಗದಲ್ಲಿರುವ ಗಾಲ್ವಾನ್ ನದಿ ಕಣಿವೆಯಲ್ಲಿ ಕಾದಾಟದ ಬಳಿಕ ಚೀನಾ ಆಕ್ರಮಿತ ಪ್ರದೇಶವನ್ನು ವಾಪಸ್ ಪಡೆಯಲಾಗಿದೆ. ಕಾದಾಟದಲ್ಲಿ 100ಕ್ಕೂ ಹೆಚ್ಚು ಚೀನಾ ಸೈನಿಕರು ಸಾವನ್ನಪ್ಪಿದ್ದರೆ, ಸುಮಾರು 20 ಮಂದಿ ಭಾರತೀಯ ಸೈನಿಕರು ಹುತಾತ್ಮರಾದರು. ಚೀನಾ ಎದುರು ಗೆಲ್ಲಬೇಕಾದರೆ ಭಾರತೀಯರು ಸರ್ಕಸ್‌ನ ಸಿಂಹದಂತಲ್ಲ, ಕಾಡಿನ ಸಿಂಹದಂತೆ ವರ್ತಿಸಬೇಕಿದೆ.

– ಡಾ.ಸುಬ್ರಹ್ಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ

ಮೈಸೂರು, ಏ.23(ಎಂಕೆ)– ಶ್ರೀ ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ 'ಶ್ರೀ ರಾಮ ಮಂದಿರ' ನಿರ್ಮಾಣವಾಗುತ್ತಿದೆ. ಇನ್ನು ಮಥುರಾದಲ್ಲಿ 'ಶ್ರೀಕೃಷ್ಣ ಮಂದಿರ' ಹಾಗೂ ಕಾಶಿಯಲ್ಲಿ 'ಕಾಶಿ ವಿಶ್ವನಾಥ ಮಂದಿರ'ದ ವಿವಾದ ಇತ್ಯರ್ಥ ಮಾಡುವುದು ನಮ್ಮ ಮುಂದಿನ ಗುರಿಯಾಗಿದೆ ಎಂದು ರಾಜ್ಯಸಭಾ ಸದಸ್ಯ ಡಾ.ಸುಬ್ರಹ್ಮಣಿಯನ್ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಮೈಸೂರು ಹಿಂದೂ ಫೋರಂ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಶ್ರೀರಾಮಮಂದಿರ ನಿರ್ಮಾಣಕ್ಕೆ ಮುಂದಾದರೆ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದ 370ನೇ ವಿಧಿ ರದ್ದಾದರೆ ದೇಶದಲ್ಲಿ ದೊಡ್ಡಮಟ್ಟದ ಕೋಮುಗಲಭೆ ಉಂಟಾಗುತ್ತದೆ ಎಂದು ಕೆಲವರು ಹೆದರಿಸುತ್ತಿದ್ದರು. ಆದರೆ ಒಂದೇ ಒಂದು ಗುಂಡು ಹಾರದ ಹಾಗೆ, ಒಂದು ತೊಟ್ಟು ರಕ್ತ ಚೆಲ್ಲಲು ಬಿಡದೆ ಶಾಂತ ರೀತಿಯಲ್ಲಿ ರಾಮಮಂದಿರವನ್ನು ಕಟ್ಟುತ್ತಿದ್ದೇವೆ. ಹಾಗೆಯೇ ನಮ್ಮ ಮುಂದಿನ ಗುರಿ ಶ್ರೀಕೃಷ್ಣ ಜನ್ಮಭೂಮಿ ಹಾಗೂ ಕಾಶಿ. ಇವುಗಳನ್ನು ಸಹ ಶಾಂತಿಯುತವಾಗಿ ನೆರವೇರಿಸುತ್ತೇವೆ ಎಂದು ಹೇಳಿದರು.

370ನೇ ವಿಧಿ ರದ್ದಾದ ಬಳಿಕ ಜಮ್ಮು ಮತ್ತು ಕಾಶ್ಮೀರ, ದೇಶದಲ್ಲಿ ಒಂದಾಗಿವೆ. ಅಲ್ಲಿಯೂ ಶಾಂತಿ–ಸುವ್ಯವಸ್ಥೆ ನೆಲೆಸುವಂತಾಗಿದ್ದು, ಕೆಲ ದಿನಗಳ ಹಿಂದೆಯಷ್ಟೇ ನಾನು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿ, ಬಹಿರಂಗ ಸಮಾವೇಶ ನಡೆಸಿದ್ದೇನೆ. ಭಾರತೀಯ ಸೇನೆಯಿಂದ ನಿವೃತ್ತರಾದವರನ್ನು ಮತ್ತೆ ಸೇನೆಗೆ ಸೇರಿಸಿಕೊಂಡು ಅವರಿಗೆ ಸಂಬಳ ನೀಡಿ, 5 ವರ್ಷಗಳ ಕಾಲ ಕಾಶ್ಮೀರಿ ಪಂಡಿತರಿಗೆ ಸೂಕ್ತ ಭದ್ರತೆ ಕಲ್ಪಿಸಿದರೆ, ಅವರು ಕೂಡ ತಮ್ಮ ಸ್ವ–ಸ್ಥಳಕ್ಕೆ ಮರಳುತ್ತಾರೆ ಎಂದು ಅಭಿಪ್ರಾಯಪಟ್ಟರು.

ಎಲ್ಲಾ ಭಾರತೀಯರ ಡಿಎನ್ಎ ಒಂದೇ: ದೇಶದಲ್ಲಿರುವ ಹಿಂದೂ ಮತ್ತು ಮುಸ್ಲಿಮರೂ ಸೇರಿದಂತೆ ಎಲ್ಲ ಭಾರತೀಯರ ಡಿಎನ್ಎ ಒಂದೇ ಆಗಿವೆ. ಹೈದರಬಾದಿನ ಮೈಕ್ರೋಬಯಾಲಜಿ ಪ್ರಯೋಗಾಲಯದಲ್ಲಿ ಇದು ಸಾಬೀತಾಗಿದೆ. ಹಿಂದೂಗಳು ಹೊರಗಿನಿಂದ ಬಂದವರಲ್ಲ. ಭೂಮಿ ಹುಟ್ಟಿದಾಗಿನಿಂದಲೂ ಅವರು ಭಾರತದಲ್ಲೇ ಇರುವವರು ಎಂದು ಹೇಳಿದರು.

ಆರ್ಯರು ಮತ್ತು ದ್ರಾವಿಡರು ಎಂಬುದು ಜನಾಂಗಗಳಲ್ಲ. ದಕ್ಷಿಣ ಭಾರತದಲ್ಲಿದ್ದವರನ್ನು ದ್ರಾವಿಡರು ಹಾಗೂ ಉತ್ತಮ ನಡವಳಿಕೆ ಇದ್ದವರನ್ನು ಆರ್ಯರು ಎನ್ನಲಾಯಿತು. ಇವೆರಡೂ ನಿರ್ದಿಷ್ಟವಾದ ಜನಾಂಗಗಳಲ್ಲ. ಕೆಲ ಧರ್ಮಗಳು ದೇಶಕ್ಕೆ ಬಂದಿದ್ದರೂ ಎಂದೂ ಹಿಂದೂಗಳು ಅವರಿಗೆ ಕಿರುಕುಳ ನೀಡಿಲ್ಲ. ಇರಾನ್ ದೇಶದಿಂದ ಇಸ್ಲಾಂ ಧರ್ಮ ಬಂದರೆ ಯೂರೋಪ್ ದೇಶಗಳಿಂದ ಕ್ರೈಸ್ತರು ಬಂದಿದ್ದಾರೆ. ಪರ್ಷಿಯಾ ದೇಶದಿಂದ ಬಂದ ಪಾರ್ಸಿ(ಜೊರೊಸ್ಟ್ರೀಯನ್)ಗಳನ್ನು ಸಮಾನತೆಯಿಂದ ಕಂಡಿದ್ದೇವೆ. ಭದ್ರತೆಯನ್ನು ನೀಡಿದ್ದೇವೆ ಎಂದು ತಿಳಿಸಿದರು.

ಇಂಗ್ಲಿಷ್‌ಗೆ ಪರ್ಯಾಯವಾಗಿ ಸಂಸ್ಕೃತ: ಸಂಸ್ಕೃತ ಭಾಷೆಯನ್ನು ಪ್ರಪಂಚವೇ ಒಪ್ಪಿಕೊಂಡಿದೆ. ಇಂಗ್ಲಿಷ್‌ಗೆ ಪರ್ಯಾಯವಾಗಿ ಸಂಸ್ಕೃತವನ್ನು ಮಾತನಾಡುವ ಕಾಲವು ಸನ್ನಿಹಿತವಾಗಿದೆ. ಬ್ರಿಟಿಷರು ಭಾರತೀಯರ ಬ್ರೇನ್‌ವಾಷ್ ಮಾಡಿದ್ದರಿಂದ ಇಂಗ್ಲಿಷ್ ಪ್ರವರ್ಧಮಾನಕ್ಕೆ ಬಂತು. ಈಗ ವೈಜ್ಞಾನಿಕ ಸಂಶೋಧನೆಗಳು ಸಂಸ್ಕೃತದ ಮಹತ್ವವನ್ನು ಎತ್ತಿ ಹಿಡಿದಿವೆ. ನಾಸಾ ಸಂಸ್ಥೆ ನಡೆಸಿದ ಅಧ್ಯಯನ ಒಂದರಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಕಂಪ್ಯೂಟರ್‌ಗೆ ಸುಲಭವಾಗಿ ಅರ್ಥವಾಗುವ ಉತ್ತಮ ಭಾಷೆ ಸಂಸ್ಕೃತ ಎಂದು ಹೇಳಲಾಗಿದೆ. ಭವಿಷ್ಯದಲ್ಲಿ ಇದೇ ಭಾಷೆಯ ಮೂಲಕವೇ ಕೃತಕ ಬುದ್ಧಿಮತ್ತೆ ಕಾರ್ಯನಿರ್ವಹಿಸಲಿದೆ ಎಂದು ಡಾ. ಸುಬ್ರಹ್ಮಣಿಯನ್ ಸ್ವಾಮಿ ಹೇಳಿದರು.

ದೇಶದಲ್ಲಿ ಶೇ.80ರಷ್ಟು ಹಿಂದೂಗಳು: ವಿಜಯನಗರದ ಅರಸರು, ರಾಣಿಚೆನ್ನಮ್ಮ ಸೇರಿದಂತೆ ಹಿಂದಿನ ಹಿಂದೂ ರಾಜರು ಎಂದಿಗೂ ಹೊರಗಿನವರ ಆಕ್ರಮಣ ಸಹಿಸಿಕೊಂಡವರಲ್ಲ. ಹಾಗಾಗಿಯೇ ಭಾರತದಲ್ಲಿ ಇಂದಿಗೂ ಶೇ.80ರಷ್ಟು ಹಿಂದೂಗಳಿದ್ದಾರೆ. ಆದರೆ, ಪರ್ಷಿಯಾ, ಮೆಸಪಟೋಮಿಯಾ ಸೇರಿದಂತೆ ಬೇರೆ ಎಲ್ಲ ದೇಶಗಳೂ ತಮ್ಮ ಸ್ಥಳೀಯ ಸಂಸ್ಕೃತಿಯನ್ನು ಕಳೆದುಕೊಂಡಿವೆ ಎಂದರು.

2050ಕ್ಕೆ ಮೊದಲ ಸ್ಥಾನ: ಅಮೆರಿಕಾ ಹಾಗೂ ಚೀನಾ ನಂತರದ ಸ್ಥಾನದಲ್ಲಿ ದೇಶದ ಜಿಡಿಪಿ (ಒಟ್ಟು ದೇಶೀಯ ಉತ್ಪನ್ನ) ಇದ್ದು, ಮುಂದಿನ 10 ವರ್ಷಗಳಲ್ಲಿ ಚೀನಾ ಹಾಗೂ 2050ರ ಹೊತ್ತಿಗೆ ಅಮೆರಿಕಾ ಮೀರಿಸಿ ಜಿಡಿಪಿಯಲ್ಲಿ ವಿಶ್ವದಲ್ಲಿಯೇ ಭಾರತ ಮೊದಲ ಸ್ಥಾನ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: 01ಎಕ್ಸ್‌ಇಎನ್–ಸಿಡಬ್ಲ್ಯೂಎಸ್–ಎಂವೈಎಸ್‌ಎಸ್–ಝೋನಲ್22–23 ದಿನಾಂಕ: 20.04.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ	ಅಂದಾಜು ವೆಚ್ಚ
ಮೈಸೂರು ದಕ್ಷಿಣದ ಅಶೋಕಪುರಂ ಕಾರ್ಯಾಗಾರದಲ್ಲಿ 01.07.2022 ರಿಂದ 30.06.2023 ರವರೆಗಿನ ಅವಧಿಗೆ ಕಾಮಗಾರಿಗಳ ಅನುಷ್ಠಾನ ಮತ್ತು ಸಾಮಗ್ರಿಗಳ ಪೂರೈಕೆಗಾಗಿ ವಲಯವಾರು ಟೆಂಡರ್.	Rs. 2,65,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.05.2022 ಸಮಯ: 15:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಎಕ್ಸಿಕ್ಯೂಟಿವ್ ಇಂಜಿನಿಯರ್, ಕ್ಯಾರೇಜ್ ರಿಪೇರಿ ಕಾರ್ಯಾಗಾರ ಮೈಸೂರು
ಪಿಯುಬಿ/48/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23
S.W.Railways SWRRLY SWRRLY

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಸ್ಮರಣೆ


ಕನ್ನಡದ 'ಚಿರತಾರೆ' ಡಾ.ರಾಜ್‌ಕುಮಾರ್

ಇಂದು ಡಾ. ರಾಜ್‌ಕುಮಾರ್ ಹುಟ್ಟುಹಬ್ಬ. ಇದರ ಅಂಗವಾಗಿ ರಾಜ್ಯಾದ್ಯಂತ ಅವರ ಅಭಿಮಾನಿ ದೇವರುಗಳು ನಾನಾ ಜನಪರ, ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಮೈಸೂರಿನಲ್ಲೂ ಸಹ ಅಭಿಮಾನಿಗಳು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಿಯೂ ಮೆರೆದ ತಮಿಳರ ಆರಾಧ್ಯ ದೈವ ನಟ ಚಕ್ರವರ್ತಿ ಎಂ.ಜಿ. ರಾಮಚಂದ್ರನ್ ಅವರು 'ರಿಕ್ಷಾ ಕಾರನ್' ಚಿತ್ರದಲ್ಲಿ ಅಭಿನಯಿಸಿದ್ದ ಕಾಲವದು. ಆ ಸಂದರ್ಭದಲ್ಲಿ ಅವರಿಗೆ ಅಲ್ಲಿನ ಪ್ರತಿಷ್ಠಿತ "ಭರತ್ ಪ್ರಶಸ್ತಿ" ಬಂದಿತ್ತು. ಆ ಪ್ರಶಸ್ತಿಯನ್ನು ಕನ್ನಡದ ನಟಸಾರ್ವಭೌಮ ರಾಜ್‌ಕುಮಾರ್ ಅವರಿಂದಲೇ ಸ್ವೀಕರಿಸಬೇಕೆಂಬ ಮಹದಾಸೆ ಎಂ.ಜಿ.ಆರ್. ಅವರದು. ಯಾರು ಪ್ರಶಸ್ತಿ ನೀಡುತ್ತಾರೆಂಬುದನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೆ, ಮಾಧ್ಯಮಕ್ಕೂ ಗುಟ್ಟು ಬಿಟ್ಟುಕೊಡದೆ ಎಂ.ಜಿ.ಆರ್. ಅಣತಿಯಂತೆ ಸಮಾರಂಭದ ವ್ಯವಸ್ಥೆಯಾಗಿತ್ತು. ತಮಿಳುನಾಡಿನಲ್ಲಿ ಒಂದು ರೀತಿಯಲ್ಲಿ ಎಂ.ಜಿ.ಆರ್. ಯುಗವೇ ಇದ್ದಂಥ ಆ ಕಾಲದಲ್ಲಿ ಎಂ.ಜಿ.ಆರ್. ಗೆ ಪ್ರಶಸ್ತಿ ನೀಡುವ ಸಮಾರಂಭವೆಂದರೆ ಕೇಳಬೇಕೆ? ಅಭಿಮಾನಿ ಜನಸಾಗರ ಭೋರ್ಗರೆದು ಬಂದಿತ್ತು. ಜೊತೆಗೆ ದಕ್ಷಿಣ ಭಾರತದ ಸೂಪರ್‌ಸ್ಟಾರ್‌ಗಳು ಸೇರಿದಂತೆ ಭಾರತೀಯ ಚಿತ್ರರಂಗದ ಅತಿರಥ ಮಹಾರಥರೆಲ್ಲರೂ ಬಂದಿದ್ದರು.

ಸಮಾರಂಭ ಆರಂಭವಾಗುವ ಹೊತ್ತಿಗೆ ಸ್ವತಃ ಎಂ.ಜಿ.ಆರ್. ಅವರೇ ರಾಜ್‌ಕುಮಾರ್ ಅವರಿಗೆ ಫೋನ್ ಮಾಡಿ 'ತಂಬಿ ನೀನೇ ಬಂದು ನನಗೆ 'ಭರತ್ ಪ್ರಶಸ್ತಿ' ಕೊಡಬೇಕು' ಎಂದು ಅಭಿಮಾನದಿಂದ ಕೇಳಿಕೊಂಡರಂತೆ. ಆದರೆ, ರಾಜ್‌ಕುಮಾರ್ ಅವರಿಗೆ ಕಾರ್ಯಕ್ರಮಕ್ಕೆ ಹಾಜರಾಗಲಾರದಂತಹ ಪರಿಸ್ಥಿತಿ. ಹಾಗಾಗಿ ಎಂ.ಜಿ.ಆರ್. ಅವರಿಗೆ ತಮ್ಮ ಪರಿಸ್ಥಿತಿಯನ್ನು ರಾಜ್‌ಕುಮಾರ್ ಅವರು ಹೇಳಿದರಂತೆ. ಆದರೂ ಎಂ.ಜಿ.ಆರ್. ಒಪ್ಪದೆ "ಒಂದೈದು ನಿಮಿಷ ಬಂದು ಹೋಗಿ, ನೀವು ಕೂರಲೇ ಬೇಡಿ, ಬರೋಕ್ಕಾಗಲ್ಲ ಅಂತ ಮಾತ್ರ ಹೇಳಬೇಡಿ, ಖಂಡಿತ ನೀವು ಬರಲೇಬೇಕು ತಂಬಿ" ಎಂದರಂತೆ. ಆಗ ವಿಧಿಯಿಲ್ಲದೆ ಕುಳಿತುಕೊಳ್ಳಲು ಆಗದಂತಹ ನೋವಿನ ಪರಿಸ್ಥಿತಿಯಲ್ಲಿಯೂ ರಾಜ್‌ಕುಮಾರ್ ಅವರು ಸಮಾರಂಭಕ್ಕೆ ಹೋದಾಗ ಎಂ.ಜಿ.ಆರ್. ಅವರೇ ಬಂದು ರಾಜ್‌ಕುಮಾರ್ ಅವರ ಕಾರಿನ ಬಾಗಿಲನ್ನು ತೆಗೆದು ಅಲ್ಲಿಂದಲೇ ರಾಜ್‌ಕುಮಾರ್ ನಡೆಯುವ ಹಾದಿಗೆ ಸ್ವತಃ ಎಂ.ಜಿ.ಆರ್. ಅವರೇ ಹೂ ಹಾಸುತ್ತಾ ವೇದಿಕೆಗೆ ಕರೆದೊಯ್ದಿದ್ದರಂತೆ. ಕನ್ನಡದ ಅಣ್ಣ ವೇದಿಕೆ ಏರುತ್ತಿದ್ದಂತೆಯೇ ಇಡೀ ಕಾರ್ಯಕ್ರಮದಲ್ಲಿದ್ದವರ ಕಿವಿ ಗಡಚಿಕ್ಕುವಂತೆ ಕರತಾಡನದೊಡನೆ ಕಾರ್ಯಕ್ರಮ ಶುರುವಾಯಿತಂತೆ. ಅನಿವಾರ್ಯ ಪರಿಸ್ಥಿತಿಯಲ್ಲೂ ನನಗೋಸ್ಕರ ಅವರು ಬಂದಿದ್ದಾರೆ. ಆದ್ದರಿಂದ ರಾಜ್‌ಕುಮಾರ್ ಅವರು ನನಗೆ ಅವಾರ್ಡ್ ಕೊಟ್ಟು ಹೊರಡುತ್ತಾರೆ. ನಂತರ ಉಳಿದ ಕಾರ್ಯಕ್ರಮ ನಡೆಯುತ್ತದೆ" ಎಂದು ಸ್ವತಃ ಎಂ.ಜಿ.ಆರ್. ಅವರೇ ಮೈಕ್‌ನಲ್ಲಿ ಅನೌನ್ಸ್ ಮಾಡಿ ನಂತರ ರಾಜ್‌ಕುಮಾರ್ ಹಸ್ತದಿಂದ ಪ್ರಶಸ್ತಿ ಪಡೆದು ಮತ್ತೆ ಅವರನ್ನು ಕಾರಿನ ತನಕ ತಾವೇ ಬಿಟ್ಟು ಬಂದು ಆ ಮೇಲೆ ಕಾರ್ಯಕ್ರಮಕ್ಕೆ ವೇದಿಕೆ ಹತ್ತಿದ್ದರಂತೆ.

ನಮ್ಮ ಕನ್ನಡ ಕಂಠೀರವ ಡಾ. ರಾಜ್‌ಕುಮಾರ್ ಎಂಥಾ ಮೇರು ಕಲಾವಿದರೆಂಬುದಕ್ಕೆ ಮತ್ತು ಅವರ ಮೇರು ಸದೃಶ ವ್ಯಕ್ತಿತ್ವಕ್ಕೆ ಇದೊಂದು ಘಟನೆಯೇ ಸಾಕು. ಇಂಥ ಸಹಸ್ರಾರು ಘಟನೆಗಳು ಡಾ. ರಾಜ್ ಅವರ ಬದುಕಿನಲ್ಲಿ ತುಂಬಿವೆ. ಇಡೀ ತಮಿಳುನಾಡನ್ನು ತನ್ನ ತೋರು



ಬೆರಳಿನಲ್ಲಿಟ್ಟುಕೊಂಡಂತೆ ಅಗಾಧವಾಗಿ ಬೆಳೆದು ನಿಂತು ತಮಿಳರಿಂದ ಪೂಜಿಸಲ್ಪಡುತ್ತಿದ್ದ ಡಾ. ಎಂ.ಜಿ. ರಾಮಚಂದ್ರನ್ ಅವರಂಥ ಮಹಾನ್ ಕಲಾವಿದರು ಡಾ. ರಾಜ್‌ಕುಮಾರ್ ಅವರಿಗೆ ಶಿರ ಬಾಗಿ ಈ ಮಟ್ಟದ ಗೌರವ ಸಲ್ಲಿಸುತ್ತಿದ್ದರೆಂದರೆ ಅದು ಕನ್ನಡದ ಭಾಗ್ಯವೇ ಸರಿ. ಡಾ. ರಾಜ್ ಮೂಲಕ ವಿಶ್ವದಾದ್ಯಂತ ಇಂಥ ಅನೇಕ ಗೌರವಗಳು ಕನ್ನಡಕ್ಕೆ ದಕ್ಕಿವೆ. ತನ್ಮೂಲಕ ಕರ್ನಾಟಕದ ಘನತೆ ಹೆಚ್ಚಿಸಿವೆ. ಅಂತೆಯೇ ಡಾ. ರಾಜ್ ಅವರಿಂದಾಗಿ ಅವರು ಜನ್ಮತಾಳಿದ ಗಾಜನೂರು ಗ್ರಾಮ, ಅವರ ಜನ್ಮ ದಿನಾಂಕವಾದ ಸಾವಿರದ ಒಂಭೈನೂರ ಇಪ್ಪತೊಂಬತ್ತು ಏಪ್ರಿಲ್ ಇಪ್ಪತ್ತನಾಲ್ಕು, ಅವರಿಗೆ ಜನ್ಮ ನೀಡಿದ ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳು, ಅವರ ಕೈಹಿಡಿದ ಪಾರ್ವತಮ್ಮ ರಾಜ್‌ಕುಮಾರ್, ಒಡಹುಟ್ಟಿದ ಸಹೋದರ ವರದಪ್ಪ, ಸಹೋದರಿ ಶಾರದಮ್ಮ ... ಹೀಗೆ ಡಾ. ರಾಜ್ ಹುಟ್ಟಿದ ಸ್ಥಳ, ದಿನಾಂಕ, ವರ್ಷ, ಹುಟ್ಟಿಗೆ ಕಾರಣಕರ್ತರಾದ ತಂದೆ-ತಾಯಿಗಳು ಮತ್ತು ಒಡಹುಟ್ಟಿದವರು ಹಾಗೂ ಹೆಂಡತಿ ಮಕ್ಕಳೆಲ್ಲರಿಗೂ ವಿಶೇಷ ಮಹತ್ವ ದೊರೆತಿದೆ. ಎಲ್ಲಕ್ಕಿಂತ ಮಿಗಿಲಾಗಿ ಡಾ. ರಾಜ್ ಅವರಿಂದ ಇಡೀ ಕನ್ನಡನಾಡಿನ ಹಿರಿಮೆ ಹೆಚ್ಚಿದೆ ಎಂದರೆ ಖಂಡಿತ ಉತ್ಪ್ರೇಕ್ಷೆಯಾಗಲಾರದು. ಡಾ.ರಾಜ್ ರಂಗೈಕ್ಯರಾದ 2006 ಏಪ್ರಿಲ್ 12 ಸಹ ಎಂದೂ ಮರೆಯದ ನೋವಿನ ದಿನವಾಗಿ ಕನ್ನಡಿಗರೆದೆಯಲ್ಲಿ ಉಳಿದಿದೆ.

ಇದು ಡಾ. ರಾಜ್‌ಕುಮಾರ್ ಬಗೆಗಿನ ಗೌರವದ ವಿಷಯವಾಯಿತು. ಇನ್ನು ಮಾನವೀಯತೆಯ ವಿಷಯಕ್ಕೆ ಬಂದರೆ ಒಮ್ಮೆ ಡಾ. ಎಂ.ಜಿ.ಆರ್. ಅವರು ಆಸ್ಪತ್ರೆಯಲ್ಲಿದ್ದಾಗ ಅವರ ಉಳಿವಿಗಾಗಿ ಡಾ. ರಾಜ್ ಅವರು ಪ್ರಾರ್ಥನೆಗೈದು ನಂಜನಗೂಡಿನ ನಂಜುಂಡೇಶ್ವರಸ್ವಾಮಿಯ ಸನ್ನಿಧಿ ಯಲ್ಲಿ ತೀರಾ ಸಾಮಾನ್ಯ ವ್ಯಕ್ತಿಯಂತೆ ಉರುಳುಸೇವೆ ಮಾಡಿದ್ದರಂತೆ.

ಆಗ ಡಾ.ರಾಜ್ ಅವರ ಪ್ರಾರ್ಥನೆಯ ಫಲವೋ ಎಂಬಂತೆ ಡಾ. ಎಂ.ಜಿ.ಆರ್. ಅವರು ಪೂರ್ಣ ಗುಣಮುಖರಾದರಂತೆ. ಆ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಜರುಗಿದ ಬೃಹತ್ ಜನಸ್ತೋಮದ ಸಮಾರಂಭದಲ್ಲಿ ಭಾಗವಹಿಸಿದ್ದ ಡಾ. ಎಂ.ಜಿ.ಆರ್. ಅವರು ಡಾ. ರಾಜ್ ಅವರನ್ನು ಕುರಿತು "ನಾನಿಂದು ನನ್ನ ತಂಬಿಯಿಂದ ಬದುಕಿ ಬಂದಿದ್ದೇನೆ" ಎಂದು ಇಡೀ ತಮಿಳುನಾಡು ಮೊಳಗುವಂತೆ ಕೂಗಿ ಹೇಳಿದ್ದರಂತೆ. ತನಗಾಗಿ ಮಿಡಿದ ಡಾ. ರಾಜ್‌ರ ಮಾನವೀಯ ಹೃದಯಕ್ಕೆ ಸಾರ್ವತ್ರಿಕವಾಗಿ ಡಾ.ಎಂ.ಜಿ.ಆರ್. ಈ ರೀತಿ ಕೃತಜ್ಞತೆ ಸಲ್ಲಿಸಿದ್ದರಂತೆ.

ಡಾ.ರಾಜ್‌ಕುಮಾರ್ ಅವರು ಸ್ನೇಹ, ಪ್ರೀತಿ, ವಿಶ್ವಾಸದ ವಿಷಯದಲ್ಲಿ ಎಂದೂ ಕೂಡ ಭಾಷಾಂಧತೆ ಮತ್ತು ವೃತ್ತಿ ಮತ್ಸರತೆ ಸೇರಿದಂತೆ ಯಾವುದೇ ರೀತಿಯ ತಾರತಮ್ಯತೆ, ದ್ವೇಷಾಸೂಯೆ ಬಾರದಂತೆ ಬದುಕಿದವರು. ಈ ಗುಣವೇ ಡಾ. ಎಂ.ಜಿ.ಆರ್. ಅವರಂತಹವರು ಡಾ. ರಾಜ್ ಅವರನ್ನು ಈ ರೀತಿ ತೀರಾ ಮನಸ್ಸಿಗೆ ಹಚ್ಚಿಕೊಳ್ಳಲು ಸಾಧ್ಯವಾದದ್ದು. ಹಾಗಾಗಿ ಆ ರಾಜ್ಯ-ಈ ರಾಜ್ಯ, ಆ ಪ್ರದೇಶ-ಈ ಪ್ರದೇಶ ಎಂಬ ಭೇದ-ಭಾವವಿರದೆ ದೊಡ್ಡ ತಾರೆಗಳಿಂದ ಹಿಡಿದು ಸಣ್ಣಪುಟ್ಟ ಕಲಾವಿದರುಗಳ ತನಕ ಭಾರತೀಯ ಚಿತ್ರರಂಗದ ಬಹುಪಾಲು ಮಂದಿ ಡಾ.ರಾಜ್‌ರ ಮನಸ್ಸಿನ ಸಂಬಂಧಿಗಳಾಗಿದ್ದರು. ಅದು ಅಮಿತಾಬ್ ಬಚ್ಚನ್, ರಾಜ್‌ಕಪೂರ್ ಇರಬಹುದು, ಕಮಲಹಾಸನ್, ಶಿವಾಜಿ ಗಣೇಶನ್ ಆಗಿರಬಹುದು, ಮೋಹನ್‌ಲಾಲ್, ಮುಮ್ಮಟಿ, ಅಕ್ಕಿನೇನಿ ನಾಗೇಶ್ವರರಾವ್ ಇರಲಿ, ರಜನಿಕಾಂತ್, ಎನ್.ಟಿ.ಆರ್. ಆಗಿರಲಿ ಎಲ್ಲರಿಗೂ ಡಾ. ರಾಜ್ ಅಂದರೆ ಅಪರಿಮಿತ ಅಭಿಮಾನವಿತ್ತು.

ಇದೆಲ್ಲ ಸಾಧ್ಯವಾದದ್ದು ಡಾ.ರಾಜ್ ಅವರ ಮಹದದ್ಭುತ ಅಭಿನಯ ಕಲೆಯಿಂದಲೇ. 1952ರಲ್ಲಿ 'ಶ್ರೀನಿವಾಸ ಕಲ್ಯಾಣ' ಚಿತ್ರಕ್ಕಾಗಿ ಸಪ್ತಋಷಿಗಳಲ್ಲೊಬ್ಬರಾಗಿ ಡಾ. ರಾಜ್ ಬಣ್ಣ ಹಚ್ಚಿದ್ದರಾದರೂ ಕನ್ನಡಕ್ಕೆ ಮೊದಲಿಗೆ ರಾಷ್ಟ್ರ ಪ್ರಶಸ್ತಿ ತಂದುಕೊಟ್ಟ 'ಬೇಡರ ಕಣ್ಣಪ್ಪ' ಚಿತ್ರದಿಂದ 1954ರಲ್ಲಿ ಇವರು ನಾಯಕ ನಟರಾಗಿ ಬೆಳ್ಳಿತೆರೆ ಪ್ರವೇಶಿಸಿದ್ದರು. ಹೆಚ್.ಎಲ್.ಎನ್. ಸಿಂಹ ಅವರಿಂದ ರಂಗನಟ ಮುತ್ತುರಾಜ್ ಬೆಳ್ಳಿತೆರೆಗೆ ರಾಜ್‌ಕುಮಾರ್ ಆಗಿ 'ಬೇಡರ ಕಣ್ಣಪ್ಪ' ನಿಂದ ಆರಂಭವಾದ ಇವರ ನಟನೆಯ ಚಿತ್ರಯಾತ್ರೆ "ಶಬ್ಧವೇದಿ"ಯ ತನಕ ನೂರೆಂಟು ಚಿತ್ರಗಳವರೆಗೆ ಯಶಸ್ವಿಯಾಗಿ ಸಾಗಿ ಬಂದಿದ್ದು ಇಲ್ಲಿ ಪ್ರತಿಯೊಂದು ಚಿತ್ರಗಳೂ ಅಮೂಲ್ಯ ರತ್ನಗಳೇ ಆಗಿ ಕನ್ನಡ ಚಿತ್ರರಂಗ ಪ್ರಜ್ವಲಿಸುವಂತೆ ಮಾಡಿವೆ.

ಸಿದ್ದಾರ್ಥನಗರದ ವಿನಯ ಮಾರ್ಗ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಏ.23(ಪಿಎಂ)- ಮೈಸೂರಿನ ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಸಿದ್ದಾರ್ಥ ನಗರದ ವಿನಯ ಮಾರ್ಗವು ಸಂಪೂರ್ಣ ಗುಂಡಿಮಯವಾಗಿದ್ದು, ಇದನು ಶೀಘ್ರ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಮಾರ್ಗದಲ್ಲಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು ಹಾಗೂ ಸ್ಥಳೀಯ ನಿವಾಸಿಗಳು, ಕಾರೊಂದರ ಎದುರು ಬೈಕ್ ಅನ್ನು ಮಲಗಿಸಿ ಅಪಘಾತ ಸಂಭವಿಸಿದಂತೆ ಅಣಕು ಪ್ರದರ್ಶನ ಮಾಡಿ, ಕೂಡಲೇ ರಸ್ತೆ ದುರಸ್ತಿ ಕಾಮಗಾರಿ ಕೈಗೊಳ್ಳುವಂತೆ ಒತ್ತಾಯಿಸಿದರು.

ವಿನಯ ಮಾರ್ಗ ಸಂಪೂರ್ಣ ಗುಂಡಿ ಮಯವಾಗಿದ್ದು, ವಾಹನ ಸವಾರರು, ಪಾದಚಾರಿ ವೃದ್ಧರು, ಮಹಿಳೆಯರು ಬಿದ್ದು ಹಲವಾರು ಅನಾಹುತ ಸಂಭವಿಸಿವೆ. ಆದರೂ ಪಾಲಿಕೆ, ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು.

ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಶ್ರೀಧರ್, ಪಾಲಿಕೆ ಸದಸ್ಯ ಸತ್ಯರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕೋ-ಆಪ ರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷೆ ರಾಜೇಶ್ವರಿ, ಮುಖಂಡರಾದ ರಾಧಾಮಣಿ, ಶಿವ ಮಲ್ಲಪ್ಪ, ಪ್ರದೀಪ್‌ಕುಮಾರ್, ಸೋಮು, ರವಿ, ಪ್ರಭಾಕರ್, ಗಣೇಶ್‌ಮೂರ್ತಿ, ಮಹದೇವಶೆಟ್ಟಿ, ರಮೇಶ್, ಶಿಂಷಾ ದಿನೇಶ್, ನಂಜುಂಡ, ನಂದನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ವಿಶ್ವ ಮಲೇರಿಯಾ ದಿನ

ಮೈಸೂರು, ಏ. 23- ಸಾರ್ವಜನಿಕರಿಗೆ ಮಲೇರಿಯಾ ನಿಯಂತ್ರಣದ ಬಗ್ಗೆ ಆರೋಗ್ಯ ಅರಿವು ಮೂಡಿಸುವ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೈಸೂರು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ವತಿಯಿಂದ ಏ. 25 ರಂದು ಬೆಳಗ್ಗೆ 10 ಗಂಟೆಗೆ ಕುರುಬಾರಹಳ್ಳಿ ಸರ್ಕಲ್‌ನಲ್ಲಿರುವ ಹೆಚ್‌ಹೆಚ್‌ಎಂಬಿಜಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ವಿಶ್ವ ಮಲೇರಿಯಾ ದಿನದ ಪ್ರಯುಕ್ತ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಂದ ಜಾಥಾ ಹಮ್ಮಿಕೊಳ್ಳಲಾಗಿದೆ.

ಆರೈಕೆ ಆರೋಗ್ಯ ಶಿಬಿರ

ಮೈಸೂರು, ಏ. 23- ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ. 25 ರಿಂದ ಮೇ 21 ರವರೆಗೆ ಆರೈಕೆ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಶಿಬಿರವು ಬೆಳಗ್ಗೆ 9.30 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 7012244606, 9742955822 ಸಂಪರ್ಕಿಸಬಹುದು.



ಮೈಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕ ಕಾಮನಕೆರೆಹುಂಡಿ ಹೆಚ್.ಪ್ರಕಾಶ್ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ಆಚರಿಸಿದರು. ಈ ವೇಳೆ ಹಿರಿಯ ಮುಖಂಡ ನಾರಾಯಣಪ್ಪ ಗ್ರಾಪಂ ಸದಸ್ಯರಾದ ಕೆ.ಜೆ. ಮಾದೇಶ್, ತಾಪಂ ಸದಸ್ಯ ರೇವಣ್ಣ, ಗ್ರಾಪಂ ಉಪಾಧ್ಯಕ್ಷ ಮಾದೇಶ್, ಯುವ ಮುಖಂಡ ಶಿವರಾಜ್, ಪ್ರವೀಣ, ಜಿಟಿ.ದೇವೇಗೌಡ ಅಭಿಮಾನಿ ಸಂಘದ ಅಧ್ಯಕ್ಷ ಕಾಮನಕೆರೆ ಹುಂಡಿ ಹೆಚ್.ಗಿರೀಶ್ ಗೌಡ ಉಪಸ್ಥಿತರಿದ್ದಾರೆ.

ಹೈದರಾಬಾದ್ ವಿರುದ್ಧ ಆರ್‌ಸಿಬಿಗೆ ಹೀನಾಯ ಸೋಲು

ಮುಂಬೈ, ಏ.23- ಬ್ಯಾಟ್ಸ್‌ಮನ್‌ಗಳ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 9 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿದೆ. ಇಲ್ಲಿನ ಬ್ರಬೋರ್ನ್ ಮೈದಾನದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳು ಎಸ್‌ಆರ್‌ಹೆಚ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ ಪೆವಿಲಿಯನ್ ಪರೇಡ್ ನಡೆಸಿದರು. ತಂಡದ ಪರ ಗ್ಲೆನ್ ಮ್ಯಾಕ್ಸ್‌ವೆಲ್ 12, ಸುಯಶ್ ಪ್ರಭುದೇಸಾಯಿ 15ರನ್ ಗಳಿಸಿದ್ದು ಬಿಟ್ಟರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಪರದಾಡಿದರು. ಅಂತಿಮವಾಗಿ ಆರ್‌ಸಿಬಿ 16.1 ಓವರ್‌ಗಳಲ್ಲಿ 68 ರನ್ ಗಳಿಗೆ ಆಲೌಟಾಯಿತು. ಎಸ್‌ಆರ್‌ಹೆಚ್ ಪರ ಟಿ.ನಟರಾಜನ್, ಮಾರ್ಕೊ ಜಾನ್ಸೆನ್ ತಲಾ 3, ಜಗದೀಶ ಸುಚಿತ್ 2, ಉಮ್ರಾನ್ ಮಲಿಕ್, ಭುವನೇಶ್ವರ್ ಕುಮಾರ್ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.



ನಂತರ 69 ರನ್‌ಗಳ ಸಾಧಾರಣ ಮೊತ್ತ ಬೆನ್ನತ್ತಿದ ಹೈದಾರಾಬಾದ್ ಕೇವಲ 8 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 72 ರನ್ ಗಳಿಸುವ ಮೂಲಕ ಗೆಲುವಿನ ದಡ ಸೇರಿತು. ಮೊದಲ ವಿಕೆಟ್‌ಗೆ ಅಭಿಷೇಕ್ ಶರ್ಮಾ ಹಾಗೂ ಕೇನ್ ವಿಲಿಯಮ್ಸನ್ 64 ರನ್‌ಗಳ ಜೊತೆಯಾಟ ನೀಡಿ ತಂಡದ ಗೆಲುವನ್ನು ಸುಲಭಗೊಳಿಸಿದರು. ಅಭಿಷೇಕ್ ಶರ್ಮಾ 47, ವಿಲಿಯಮ್ಸನ್ 17, ರಾಹುಲ್ ತ್ರಿಪಾಠಿ 7 ರನ್ ಗಳಿಸಿದರು. ಆರ್‌ಸಿಬಿ ಪರ ಹರ್ಷಲ್ ಪಟೇಲ್ 1 ವಿಕೆಟ್ ಕಬಳಿಸಿದರು. ಮಾರ್ಕೊ ಜಾನ್ಸೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೆಕೆಆರ್ ವಿರುದ್ಧ ಗುಜರಾತ್‌ಗೆ ರೋಚಕ ಗೆಲುವು

ಮುಂಬೈ, ಏ.23- ನಾಯಕ ಹಾರ್ದಿಕ್ ಪಾಂಡ್ಯ ಅವರ ಅರ್ಧಶತಕ ಹಾಗೂ ತಂಡದ ಸಾಂಘಿಕ ಹೋರಾಟದ ನೆರವಿನಿಂದ ಕೋಲ್ಕತ್ತಾ ನೈಟ್ ರೈಡಸ್ ವಿರುದ್ಧ ಗುಜರಾತ್ ಟೈಟನ್ಸ್ 8 ರನ್‌ಗಳ ರೋಚಕ ಗೆಲುವು ದಾಖಲಿಸಿದೆ.



ಇಲ್ಲಿನ ಡಾ.ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಆರಂಭದಲ್ಲೇ 7 ರನ್ ಗಳಿಸಿದ್ದ ಶುಭಮನ್‌ಗಿಲ್ ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ವಿಕೆಟ್ ಕೀಪರ್ ವೃದ್ಧಿಮನ್ ಸಾಹಾ ಜೊತೆಯಾದ ನಾಯಕ ಹಾರ್ದಿಕ್ ಪಾಂಡ್ಯ 2ನೇ ವಿಕೆಟ್‌ಗೆ 75ರನ್ ಜೊತೆಯಾಟವಾಡಿದರು. ಈ ವೇಳೆ ಸಾಹಾ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಡೇವಿಡ್ ಮಿಲ್ಲರ್ 27, ರಾಹುಲ್ ತಿವಾಟಿಯಾ 17ರನ್ ಗಳಿಸಿ ನಿರಾಸೆ ಮೂಡಿಸಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದ ನಾಯಕ ಹಾರ್ದಿಕ್ ಪಾಂಡ್ಯ 49 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 67 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮವಾಗಿ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 156ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು. ಕೆಕೆಆರ್ ಪರ ಬೌಲಿಂಗ್‌ನಲ್ಲಿ ಆ್ಯಂಡ್ರೆ ರಸೆಲ್ 4, ಸೌಥಿ 3, ಉಮೇಶ್ ಯಾದವ್ ಹಾಗೂ ಶಿವಂಮಾವಿ ತಲಾ ಒಂದೊಂದು ವಿಕೆಟ್ ಪಡೆದರು. ಸ್ಪರ್ಧಾತ್ಮಕ ಮೊತ್ತ ಬೆನ್ನಟ್ಟಿದ ಕೆಕೆಆರ್ ಆರಂಭ ಉತ್ತಮವಾಗಿರಲಿಲ್ಲ. 34 ರನ್ ಗಳಿಸುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡಿತು. ಸ್ಯಾಮ್ ಬಿಲ್ಲಿಂಗ್ಸ್ 4, ಸುನೀಲ್ ನರೇನ್ 5, ನಿತೀಶ್ ರಾಣಾ 2 ಹಾಗೂ ನಾಯಕ ಶ್ರೇಯಸ್ ಅಯ್ಯರ್ 12 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರೆ, ಉತ್ತಮವಾಗಿ ಆಡುತ್ತಿದ್ದ ರಿಂಕು ಸಿಂಗ್ 35 ರನ್ ಗಳಿಸಿ ಔಟ್ ಆಗುವುದರೊಂದಿಗೆ 75ರನ್‌ಗೆ ಅರ್ಧ ತಂಡ ಪೆವಿಲಿಯನ್‌ಗೆ ಮರಳಿತು.

ವೆಂಕಟೇಶ್ ಅಯ್ಯರ್ 17 ರನ್ ಗಳಿಸಿ ಔಟಾಗುವ ಮೂಲಕ ಕಳಪೆ ಬ್ಯಾಟಿಂಗ್ ಫಾರ್ಮ್ ಮುಂದುವರಿಸಿದರು. ಈ ನಡುವೆ ಕ್ರೀಸಿಗಿಳಿದ ಆ್ಯಂಡ್ರೆ ರಸೆಲ್ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ತಂಡಕ್ಕೆ ಗೆಲುವಿನ ಆಸೆ ಮೂಡಿಸಿದರಾದರೂ, ಅಂತಿಮ ಓವರ್‌ನಲ್ಲಿ ವಿಕೆಟ್ ಒಪ್ಪಿಸುವುದರೊಂದಿಗೆ ಕೆಕೆಆರ್ ಗೆಲುವಿನ ಕನಸು ಕಮರಿತು. 25 ಎಸೆತ ಎದುರಿಸಿದ ರಸೆಲ್ 6 ಸಿಕ್ಸರ್ ಹಾಗೂ ಒಂದು ಬೌಂಡರಿ ನೆರವಿನಿಂದ 48 ರನ್ ಗಳಿಸಿದರು. ಉಮೇಶ್ ಯಾದವ್ 15ರನ್ ಗಳಿಸಿ ಔಟಾಗದೆ ಉಳಿದರು. ಕೆಕೆಆರ್ ಪರ ಮೊಹಮ್ಮದ್ ಶಮಿ, ಯಶ್ ದಯಾಲ್ ಹಾಗೂ ರಶೀದ್ ಖಾನ್ ತಲಾ 2 ವಿಕೆಟ್ ಪಡೆದರು. ರಶೀದ್ ಖಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರಲ್ಲಿ ಭ್ರೂಣಶಾಸ್ತ್ರಜ್ಞರ 'ಎಂಬ್ರಿಯೋ ಮಿಲನ-2022'



ಮೈಸೂರು, ಏ.23- ಅಖಿತ ಭಾರತ ಉದಯೋನ್ಮುಖ ಭ್ರೂಣಶಾಸ್ತ್ರಜ್ಞರ ಸಮಿತಿಯ ಮೊಟ್ಟ ಮೊದಲ 'ಎಂಬ್ರಿಯೋ ಮಿಲನ' ಕಾರ್ಯಕ್ರಮ ಮೈಸೂರಿನಲ್ಲಿ ಶನಿವಾರ ನೆರವೇರಿತು.

ಮೈಸೂರು ವಿದ್ಯಾರಣ್ಯಪುರಂನ ನಂಜನಗೂಡು ರಸ್ತೆಯಲ್ಲಿರುವ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್(ಐಐಎಆರ್‌ಟಿಆರ್‌ಸಿ) ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಎಸ್.ಎಸ್. ಮಾಲಿನಿ ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರ ನಾರಾಯಣ್, ಬೆಂಗಳೂರಿನ ಜೆನಿಯಾ ಫರ್ಟಿಲಿಟಿ ಸೆಂಟರ್‌ನ ತಜ್ಞೆ ಡಾ.ದಿವ್ಯಶ್ರೀ, ಮಂಗಳೂರಿನ ಸಂತತಿ ಐವಿಎಫ್ ಸೆಂಟರ್‌ನ ಹಿರಿಯ ಎಂಬ್ರಾಯಿಲಾಜಿಸ್ಟ್ ಸ್ವಾಮಿನಾಥನ್ ದಕ್ಷಿಣಾಮೂರ್ತಿ ಐಐಎಆರ್‌ಟಿಆರ್ ಸೆಂಟರ್‌ನ ಡಾ. ಶಿಲ್ಪ ಸಂತೃಪ್ತ್ ಮತ್ತು ಡಾ.ಎಂ.ಎಸ್. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮ ಹಿರಿಯ ಮತ್ತು ಉದಯೋನ್ಮುಖ ಎಂಬ್ರಾಯಿಲಾಜಿಸ್ಟ್‌ಗಳ ಸಮಾಗಮದೊಂದಿಗೆ ಪರಸ್ಪರ ವಿಷಯ ಜ್ಞಾನ ಹಾಗೂ ವೃತ್ತಿ ಅನುಭವ ಹಂಚಿಕೊಳ್ಳಲು ವೇದಿಕೆ ಕಲ್ಪಿಸಿತ್ತು. ದೇಶದ ವಿವಿಧೆಡೆಯಿಂದ 250 ಕ್ಕೂ ಹೆಚ್ಚು ಭ್ರೂಣಶಾಸ್ತ್ರಜ್ಞರು ಭಾಗವಹಿಸಿದ್ದರು.

ಇದೇ ವೇಳೆ ಅಂತರ ಕಾಲೇಜು ಪೋಸ್ಟರ್ ಮತ್ತು ಪೇಪರ್ ಪ್ರಸೆಂಟೇಷನ್, ಕ್ವಿಜ್ ಮತ್ತು ಪಿಕ್ ಅಂಡ್ ಸ್ಪೀಕ್ ಇನ್ನಿತರ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಆಸ್ಪತ್ರೆಯ ಓಬಿಜಿ ವಿಭಾಗದ ಮುಖ್ಯಸ್ಥೆ ಡಾ.ಜಯಶ್ರೀ, ಮಂಡ್ಯ ಮಿಮ್ಸ್ ಓಬಿಜಿ ವಿಭಾಗದ ಡಾ.ಮನೋಹರ್ ಮತ್ತು ಬೆಂಗಳೂರು ವಿವಿ ಜೀವನ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ರವಿಕುಮಾರ್ ಸೇರಿದಂತೆ ಅನೇಕ ತಜ್ಞರು ಪಾಲ್ಗೊಂಡಿದ್ದರು. ಕಾರ್ಯಕ್ರಮ ಆಯೋಜನಾ ಸಮಿತಿಯ ಹಿರಿಯ ಎಂಬ್ರಾಯಿಲಾಜಿಸ್ಟ್ ಸಂಕೇತ್ ಧುಮಲ್ ಸಾತಿಯಾ, ಹೇಮಂತ್ ಕುಮಾರ್, ಟಿ.ಎಸ್.ಅಭಿಷೇಕ್ ಹಾಗೂ ಮಿರ್ ಸಮೀಮ್ ರಾಜಾ ಉಪಸ್ಥಿತರಿದ್ದರು.

179 ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ

ವಿಜಯನಗರ ಠಾಣೆಗೆ ಬಿ.ಎಸ್.ರವಿಶಂಕರ್, ಸರಸ್ವತಿಪುರಂಗೆ ಸಿ.ಎಂ.ರವೀಂದ್ರ

ಬೆಂಗಳೂರು, ಏ.23-ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯಲ್ಲಿ ಭರ್ಜರಿ ಸರ್ಜರಿ ಮಾಡಿದ್ದು, 179 ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿದೆ.

ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿದ್ದ ಬಿ.ಎಸ್.ರವಿಶಂಕರ್ ಅವರನ್ನು ವಿಜಯನಗರ ಠಾಣೆಗೆ, ರಾಜ್ಯ ಗುಪ್ತ ವಾರ್ತೆಯಲ್ಲಿ ಸಿ.ಎಂ.ರವೀಂದ್ರ ಅವರನ್ನು ಸರಸ್ವತಿಪುರಂ ಠಾಣೆಗೆ, ರಾಜ್ಯ ಗುಪ್ತ ವಾರ್ತೆಗೆ ವರ್ಗಾವಣೆ ಆದೇಶದಲ್ಲಿದ್ದ ಜಿ.ಶೇಖರ್ ಅವರನ್ನು ಮೈಸೂರು ಸಿಸಿಬಿಗೆ, ಐಎಸ್‌ಡಿಗೆ ವರ್ಗಾವಣೆ ಆದೇಶದಲ್ಲಿದ್ದ ವಿ.ಡಿ.ಮಮತಾ ಅವರನ್ನು ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ, ಅಲ್ಲಿದ್ದ ಕೆ.ಜೀವನ್ ಅವರನ್ನು ಮಂಗಳೂರಿನ ಡಿ.ಸಿ.ಆರ್.ಇ.ಗೆ, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿದ್ದ ಎಲ್.ಶ್ರೀನಿವಾಸ್ ಅವರನ್ನು ಹುಣಸೂರು ನಗರ ಠಾಣೆಗೆ, ಅಲ್ಲಿದ್ದ ಸಿ.ವಿ.ರವಿ ಅವರನ್ನು ಮೈಸೂರು ರೈಲ್ವೆ ಪೊಲೀಸ್ ಠಾಣೆಗೆ, ಕೊಡಗಿನ ವಿರಾಜಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಡಿ.ಎಸ್.ಶ್ರೀಧರ್ ಅವರನ್ನು ಮಂಡ್ಯ ಜಿಲ್ಲೆ ಹಲಗೂರು ವೃತ್ತಕ್ಕೆ, ಮಂಡ್ಯ ವೃತ್ತದಲ್ಲಿದ್ದ ಬಿ.ಆರ್.ಗೌಡ ಅವರನ್ನು ಬೆಂಗಳೂರು ನಗರ ಸಿಸಿಬಿಗೆ, ಸಿಐಡಿಯಲ್ಲಿದ್ದ ಹೆಚ್.ಆರ್.ಸಿದ್ದಪ್ಪ ಅವರನ್ನು ಮಂಡ್ಯ ಗ್ರಾಮಾಂತರ ಠಾಣೆಗೆ, ಅಲ್ಲಿದ್ದ ಆನಂದೇಗೌಡ ಅವರನ್ನು ರಾಜ್ಯ ಗುಪ್ತ ವಾರ್ತೆಗೆ, ಹಾಸನ ಚೆಸ್ಕಾಂನಲ್ಲಿದ್ದ ಬಿ.ಎಸ್.ಶಿವರುದ್ರ ಅವರನ್ನು ಎ.ಎನ್.ಎಫ್.ಗೆ, ಎಸಿಬಿಯಲ್ಲಿದ್ದ ಎಸ್.ಎಂ.ವೀಣಾ ಅವರನ್ನು ಹಾಸನ ಚೆಸ್ಕಾಂಗೆ, ಎಸಿಬಿಯಲ್ಲಿದ್ದ ಸಿ.ಕಿರಣ್ ಕುಮಾರ್ ಅವರನ್ನು ಗುಂಡ್ಲುಪೇಟೆ ವೃತ್ತಕ್ಕೆ, ಅಲ್ಲಿದ್ದ ಎಂ.ಲಕ್ಷ್ಮೀಕಾಂತ ಅವರನ್ನು ರಾಜ್ಯ ಗುಪ್ತ ವಾರ್ತೆಗೆ, ಸಿಐಡಿಯಲ್ಲಿದ್ದ ವೈ.ಮುದ್ದುರಾಜು ಅವರನ್ನು ಗುಂಡ್ಲುಪೇಟೆ ಠಾಣೆಗೆ, ಅಲ್ಲಿದ್ದ ಎಸ್.ಮಹದೇವಸ್ವಾಮಿಯವರನ್ನು ರಾಜ್ಯ ಗುಪ್ತ ವಾರ್ತೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

PUBLIC NOTICE

This is to inform that my clients are intending to purchase, Schedule Property from its owner Smt. Pramila R wife of Sri. Nagaraj.N and if any person(s) having any claim or right in respect of the said schedule property by way of inheritance, minor claim, share, sale, mortgage, lease, lien, gift, WILL, possession or encumbrance whatsoever over the Schedule Property may forward hi/her/their objection to the undersigned in writing to the address given below and also requested to email at ajithadvocate@gmail.com within 10 (Ten) days from the date of publication of this notice of such claim, along with supporting documents failing which it will be deemed that there are no claims, right, title or interest by anybody and my clients will proceed with the completion of sale transaction presuming that there are no objection and will get register the absolute sale deed of the Schedule Property in their names.

SCHEDULE PROPERTY

All that piece and parcel of the immovable property being Residential Site bearing No. 139, 4th Stage, KHB Colony, Kuvempu Nagar, Mysuru, measuring East to West : 25 Feet and North to South : 40 Feet in all measuring 1000 Sq.ft., together with building standing thereon measuring 600 Sq.ft., and bounded on the

East By : House No. 208/C LIG
West By : House No. 140 LIG
North By: Road
South By: House No. 116 LIG

Sd/- AJITH MATHEWS
M.A., LL.M., LL.B.,DCABA., PGDPM & PGDIR, Advocate
Parayil House No. 553 D8/674
Havanur Extn, 6th Main 6th Cross,
Nagasandra Post, Hessarghatta Road,
Bengaluru-560 0073. Ph: 9740319251
Email: ajithadvocate@gmail.com
Place: Mysuru
Date:

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಕೃಷ್ಣವೇಣಿ ಹೆಚ್.ಆರ್. ರವರು ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು, ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಕುವೆಂಪುನಗರ, ಮಾರುತಿ ದೇವಸ್ಥಾನದ ರಸ್ತೆ, ಮನೆ ನಂ. 49/ಎ ರಲ್ಲಿ ವಾಸವಾಗಿರುವ ಶ್ರೀ ಅಣ್ಣೇಗೌಡ ರವರ ಮಗನಾದ ಸುಮಾರು 42 ವರ್ಷದ ಶ್ರೀ ಹೆಚ್.ಎ. ವಿನೋದ್‌ಕುಮಾರ್‌ರವರಿಂದ ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು, ಈ ಪ್ರಕಟಣೆಯಾದ ಹದಿನೈದು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಹದಿನೈದು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಹದಿನೈದು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮದಲ್ಲಿ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ) ಮೈಸೂರು ಇವರು ಅಭಿವೃದ್ಧಿಪಡಿಸಿ ನಿರ್ಮಿಸಿರುವ ಬಡಾವಣೆಯಲ್ಲಿರುವ ನಿವೇಶನ ನಂಬರ್ 151 ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ 150 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 152 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ 164. ಈ ಮಧ್ಯೆ ಇರುವ ಅಳತೆ ಪೂರ್ವ ಪಶ್ಚಿಮ 18.00 ಮೀಟರ್‌ಗಳು ದಕ್ಷಿಣೋತ್ತರ 12.00 ಮೀಟರ್‌ಗಳು ಒಟ್ಟು 216.0 ಚದರ ಮೀಟರ್ ಗಳುಳ್ಳ ಪೂರ್ತಾ ಖಾಲಿ ನಿವೇಶನ.

ಸಹಿ/- (ಹೆಚ್.ಕೆ. ರವಿ), ವಕೀಲರು
ನಂ. 1230/ಎ, 2ನೇ ಕ್ರಾಸ್
(ಕೃಷ್ಣಮೂರ್ತಿಪುರಂ ರಾಮ ಮಂದಿರದ ಹಿಂಭಾಗ), ಚಾಮರಾಜ ಮೊಹಲ್ಲ,
ಮೈಸೂರು-570 004. ಮೊ: 9945245893
ದಿನಾಂಕ: 23.4.2022

ದೇಶದಲ್ಲಿ ಮತ್ತೆ ಕೊರೊನಾ ಹೆಚ್ಚಳ

ಬುಧವಾರ ಎಲ್ಲಾ ಸಿಎಂಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಭೆ

ನವದೆಹಲಿ, ಏ. 23– ದೇಶದಲ್ಲಿ ಮತ್ತೆ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಪರಿಸ್ಥಿತಿ ಕುರಿತು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸಿಎಂಗಳ ಮಹತ್ವದ ಸಭೆ ನಡೆಸಲಿದ್ದಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಯಲಿರುವ ಈ ಸಭೆಯಲ್ಲಿ ದೇಶದ ಕೊರೊನಾ ಪರಿಸ್ಥಿತಿ ಕುರಿತು ಪ್ರಧಾನಿ ಮೋದಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಿದ್ದಾರೆ ಎಂದು ಅಧಿಕೃತ ಮೂಲಗಳು ಮಾಹಿತಿ ನೀಡಿವೆ. ಪ್ರಧಾನಿ ಮೋದಿ ನೇತೃತ್ವದ ಸಭೆಯಲ್ಲಿ ಇತ್ತೀಚೆಗೆ ಉದ್ಭವವಾಗಿರುವ ಹೊಸ ಸಮಸ್ಯೆಗಳ ಕುರಿತು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಕೂಡ ಮಾಹಿತಿ ನೀಡಲಿದ್ದಾರೆ. ದೇಶದಲ್ಲಿ ಕೊರೋನಾ ಪ್ರಕರಣಗಳು ಮತ್ತೊಮ್ಮೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಈ ಸಭೆ ನಡೆಯುತ್ತಿದೆ. ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ಕಳೆದ 24 ಗಂಟೆಯಲ್ಲಿ ದೇಶದಲ್ಲಿ 2,527 ಹೊಸ ಕೊರೋನಾ ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಭಾರತದಲ್ಲಿ ಒಟ್ಟು ಸಾಂಕ್ರಾಮಿಕ ಪ್ರಕರಣಗಳ ಸಂಖ್ಯೆ 4,30,54,952 ಕ್ಕೆ ಏರಿದೆ.

ಮೈಸೂರು ಮಿತ್ರ ಭಾನುವಾರ 24 ಏಪ್ರಿಲ್ 2022

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಮಂಡ್ಯ,ಏ.23(ಮೋಹನ್‌ರಾಜ್)– ಮಂಡ್ಯ ನಗರಸಭೆ ನಿಧಿಯಿಂದ ನಗರದ ವಿನೋಭಾ ರಸ್ತೆಗೆ 27 ಲಕ್ಷ ರೂ. ಹಾಗೂ ವಿದ್ಯಾನಗರ ಪಾರ್ಕ್‌ನ ಪೂರ್ವ ಭಾಗದ ರಸ್ತೆಗೆ 19 ಲಕ್ಷ ರೂ. ಸೇರಿದಂತೆ ಒಟ್ಟು 41 ಲಕ್ಷ ರೂ. ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಂ.ಶ್ರೀನಿವಾಸ್ ಹಾಗೂ ನಗರಸಭಾಧ್ಯಕ್ಷ ಹೆಚ್.ಎಸ್.ಮಂಜು ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ನಗರಸಭಾಧ್ಯಕ್ಷ ಹೆಚ್.ಎಸ್.ಮಂಜು, ಮಂಡ್ಯವನ್ನು 3 ತಿಂಗಳಲ್ಲಿ ಸುಂದರ ನಗರವನ್ನಾಗಿ ನಿರ್ಮಿಸುವ ಕನಸು ಕಂಡಿದ್ದೇವೆ. ಈಗಾಗಲೇ ಸರ್ಕಾರಕ್ಕೆ ನಾವು ನಗರೋತ್ಥಾನ ಯೋಜನೆ–4ರಡಿ 40 ಕೋಟಿ ರೂ. ಅನುದಾನಕ್ಕೆ ಕ್ರಿಯಾಯೋಜನೆ ಸಲ್ಲಿಸಲಾಗಿದೆ ಮೂರು ತಿಂಗಳಲ್ಲಿ ಅನುದಾನ ಬರುವ ಸಂಭವವಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಸಾರ್ವಜನಿಕರು ಓಡಾಡಲು ಅನುಕೂಲವಾಗುವ ನಿಟ್ಟಿನಲ್ಲಿ ರಸ್ತೆ ನಿರ್ಮಿಸಲು ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ಈಗಾಗಲೇ ಮುಖ್ಯರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾರ್ಯಕ್ರಮ ರೂಪಿಸಿದ್ದೇವೆ. ಒಟ್ಟಾರೆ ಈ ಕಾಮಗಾರಿಗಳು ನಾಳೆಯಿಂದಲೇ ಪ್ರಾರಂಭವಾಗಲಿದೆ ಎಂದರು.

ನಗರಸಭಾ ಸದಸ್ಯರಾದ ಶಿವಪ್ರಸಾದ್, ಎಂ.ಪಿ.ಅರುಣ್‌ಕುಮಾರ್, ಗೀತಾ, ಮೂಡ ಮಾಜಿ ಅಧ್ಯಕ್ಷ ಕೆ.ಎಸ್.ದೊರೆಸ್ವಾಮಿ, ಬಿಜೆಪಿ ಮುಖಂಡ ಡಾ.ಸಿದ್ದರಾಮಯ್ಯ, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಹೆಚ್.ಪಿ.ಮಹೇಶ್, ನಗರ ಸಭಾ ಎಇಇ ರವಿಕುಮಾರ್ ಇತರರು ಇದ್ದರು.

ಪಾಂಡವಪುರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವ

ವಿಜೃಂಭಿಸಿದ ಬೃಹತ್ ಶೋಭಾಯಾತ್ರೆ

ಪಾಂಡವಪುರ,ಏ.23–ಪಟ್ಟಣದಲ್ಲಿ ಶ್ರೀರಾಮ ನವಮಿ ಉತ್ಸವ ಸಮಿತಿ, ಹಿಂದೂಪರ ಸಂಘಟನೆಗಳು ಹಾಗೂ ಬಿಜೆಪಿಯಿಂದ ಶನಿವಾರ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವ ಹಾಗೂ ಬೃಹತ್ ಶೋಭಾಯಾತ್ರೆ ವಿಜೃಂಭಣೆಯಿಂದ ಜರುಗಿತು.

ಪಟ್ಟಣದ ಐದು ದೀಪವೃತ್ತದಿಂದ ಹೊರಟ ಶೋಭಾಯಾತ್ರೆಗೆ ಮುಖಂಡರು ಚಾಲನೆ ನೀಡಿದರು. ಶ್ರೀರಾಮಮೂರ್ತಿ ಇರುವಂತಹ ಶೋಭಾಯಾತ್ರೆ ವಿವಿಧ ಕಲಾ ತಂಡಗಳ ಜೊತೆಗೆ ಹೊರಟು ಪಟ್ಟಣದ ವಿವಿಧ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಸಮಾಪ್ತಿಗೊಂಡಿತು.

ಮೊಳಗಿದ ಜೈಶ್ರೀರಾಮ್ ಘೋಷಣೆ: ಶೋಭಾಯಾತ್ರೆಯಲ್ಲಿ ಡೊಳ್ಳುಕುಣಿತ, ನಂದಿ ಕುಣಿತ ವಿಶೇಷವಾಗಿ ಚೆಂಡೆಮೇಳ ವಾದ್ಯ ಕಲಾತಂಡಗಳು ಭಾಗವಹಿಸಿದ್ದವು. ಮೆರವಣಿಗೆ ಯುದ್ದಕ್ಕೂ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಕೇಸರಿ ಶಲ್ಯ ಧರಿಸಿ ಜೈಶ್ರೀರಾಮ್, ಜೈಶ್ರೀರಾಮ್ ಘೋಷಣೆಗಳನ್ನು ಮೊಳಗಿಸುತ್ತಾ ಕಲಾ ತಂಡಗಳೊಂದಿಗೆ



ಹೆಜ್ಜೆ ಹಾಕಿ ಸಂಭ್ರಮಿಸಿದರು. ಯುವಕರೊಂದಿಗೆ ಶೋಭಾಯಾತ್ರೆ ನೇತೃತ್ವ ವಹಿಸಿದ್ದ ಬಿಜೆಪಿ ಮುಖಂಡ ಡಾ.ಎನ್.ಎಸ್. ಇಂದ್ರೇಶ್ ಕೂಡ ಹೆಜ್ಜೆ ಹಾಕಿದರು.

ಬಿಗಿ ಬಂದೋಬಸ್ತ್: ಹಿಂದೂಪರ ಸಂಘಟನೆಗಳು ನಡೆಸಿದ ಶೋಭಾಯಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಶೋಭಾಯಾತ್ರೆ ಸುಗಮವಾಗಿ ನಡೆಯಲು ಅನುವುಮಾಡಿಕೊಟ್ಟರು. ಪಟ್ಟಣದ ಐದು ದೀಪವೃತ್ತದಿಂದ ಹೊರಟ ಮೆರವಣಿಗೆಯೂ ಸುಮಾರು ಎರಡೂವರೆ ಗಂಟೆಗೂ ಅಧಿಕ ಕಾಲ ಪಟ್ಟಣದಲ್ಲಿ ಸಂಚರಿಸಿತು.

ಮಜ್ಜಿಗೆ, ಪಾನಕ, ಕೋಸಂಬರಿ ವಿತರಣೆ: ಶೋಭಾಯಾತ್ರೆಯ ಹಿನ್ನೆಲೆಯಲ್ಲಿ ಪಟ್ಟಣದ ಹಲವೆಡೆ ದಾನಿಗಳು ಭಕ್ತರು ಹಾಗೂ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು.

ರಂಗೋಲಿ, ವೇಷಭೂಷಣ ಸ್ಪರ್ಧೆ: ಶ್ರೀರಾಮನ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಆಯೋಜಿಸ ಲಾಗಿತ್ತು. ಸುಮಾರು 122 ಮಂದಿ ಮಹಿಳೆಯರು ವಿವಿಧ ಬಗೆಯ ರಂಗೋಲಿ ಬಿಡಿಸಿ ಗಮನ ಸೆಳೆದರು. ಅದೇ ವೇದಿಕೆಯಲ್ಲಿ ಮಕ್ಕಳ ವೇಷಭೂಷಣ ಸ್ಪರ್ಧೆಯೂ ನಡೆಯಿತು. ಚಿಣ್ಣರು ಶ್ರೀರಾಮ, ಹನುಮ ಸೇರಿದಂತೆ ವಿವಿಧ ಬಗೆಯ ವೇಷಗಳನ್ನು ಧರಿಸಿ ಮೆಚ್ಚುಗೆ ಗಳಿಸಿದರು.

ಬಡಗೂಡಮ್ಮದೇವಿ ಅದ್ದೂರಿ ಜಾತ್ರಾ ಮಹೋತ್ಸವ

ನಾಗಮಂಗಲ,ಏ.23(ಮಹೇಶ್)–ಕೋವಿಡ್–19 ಹಿನ್ನೆಲೆ ಎರಡು ವರ್ಷಗಳಿಂದ ನಡೆಯದ ಗ್ರಾಮದೇವತೆ ಬಡಗೂಡಮ್ಮ ದೇವಿಯ ಜಾತ್ರಾಮಹೋತ್ಸವ ಇಂದು ಅದ್ದೂರಿಯಾಗಿ ನೆರವೇರಿತು.

ರಥೋತ್ಸವದ ಮುನ್ನಾದಿನ ಬದರಿ ಕೊಪ್ಪಲು ಗ್ರಾಮದ ಕೆರೆ ಬಂಡಿ ವಂಶಸ್ಥರಾದ ರಾಮಯ್ಯ, ತಿಮ್ಮಯ್ಯ, ರಂಗಸ್ವಾಮಿ, ರಂಗಸ್ವಾಮಿ ಉ॥ ಸಣ್ಣಮರಿ ಕುಟುಂಬದವರು ಪಟ್ಟಣದ ದೇವಾಲಯದಲ್ಲಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿದರು. ನಂತರ ಊರಿನ ಬಂದಮ್ಮ ದೇವಿಗೆ ಅನ್ನ, ಮುದ್ದೆ, ಸಾಂಬಾರು ಹಾಗೂ ಪಾಯಸ ತಳಿಗೆ ಮಾಡಿ ಪೂಜೆ ಸಲ್ಲಿಸಲಾಯಿತು. ಇಂದು ರಥದಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಉತ್ಸವಮೂರ್ತಿ ಪಟ್ಟಣದಿಂದ ಹೊರಟು ಮೆರವಣಿಗೆ ಮೂಲಕ ಟಿ.ಬಿ.ಬಡಾವಣೆಯಲ್ಲಿರುವ ಬಡಗೂಡಮ್ಮ ದೇವರ ಮುಂಭಾಗ ಬಂದ ನಂತರ ಕೊಂಡಕ್ಕೆ ಪೂಜೆ ಸಲ್ಲಿಸಿ ಅಗ್ನಿಸ್ಪರ್ಶ ಮಾಡಲಾಯಿತು. ಭಕ್ತರು ಕೊಂಡ ಹಾಯ್ದು ಭಕ್ತಿ ಸಮರ್ಪಿಸಿದರು. ಬಡಗೂಡಮ್ಮ ದೇವಿಯ ತವರುಮನೆ ಉಪ್ಪಾರಹಳ್ಳಿ ಗ್ರಾಮಸ್ಥರು ತಂಬಿಟ್ಟು ಆರತಿ ಪೂಜೆ ಸಲ್ಲಿಸಿದರು.



ಈ ಜಾತ್ರಾ ಮಹೋತ್ಸವದಲ್ಲಿ ಉಪ್ಪಾರಹಳ್ಳಿ ಯಜಮಾನ ನರಸಿಂಹಮೂರ್ತಿ, ಚಿಕ್ಕ ಯಜಮಾನ ರಾಜಮುಡಿ, ಗ್ರಾಮಸ್ಥರಾದ ಅಶೋಕ್, ಸತೀಶ್, ಎಸ್.ನಾರಾಯಣ್, ಶಶಿಕುಮಾರ್, ಆಂಜನೇಯ ಸ್ವಾಮಿ ದೇಗುಲ ಅರ್ಚಕ ಶಾಮಣ್ಣ, ಬಂದಮ್ಮ ದೇವಿ ದೇಗುಲ ಅರ್ಚಕ ಸುರೇಶ್, ಪಟ್ಟಣದ ಮೀಸೆ ಕೆಂಪಣ್ಣ, ಮುದ್ದೆಗೌಡನ ಕೊಪ್ಪಲು ರಾಜಶೇಖರ, ಸುತ್ತಮುತ್ತಲಿನ ಗ್ರಾಮಸ್ಥರಿದ್ದರು.

ಭಾರೀ ಮಳೆಗೆ ಮನೆಗಳು ಜಖಂ

ಮಂಡ್ಯ,ಏ.23(ಮೋಹನ್‌ರಾಜ್)–ತಾಲೂಕಿನ ಬಸರಾಳು ಹೋಬಳಿಯ ದೊಡ್ಡಗರುಡನಹಳ್ಳಿ ಹಾಗೂ ಬೆಸ್ತರಕೊಪ್ಪಲು ಸೇರಿದಂತೆ ಸುತ್ತಮುತ್ತ ಗ್ರಾಮದಲ್ಲಿ ಬಿರುಗಾಳಿ ಸಹಿತ ಮಳೆಗೆ ಹಲವು ಮನೆಗಳು ಜಖಂಗೊಂಡಿವೆ.

ತಮ್ಮಣ್ಣ ಶೆಟ್ಟಿ ಅವರ ಮನೆಯ ಮೇಲೆ ತೆಂಗಿನ ಮರ ಬಿದ್ದು ಮನೆಯ ಮೇಲ್ಛಾವಣಿ ಕುಸಿದಿದ್ದು, ಗಂಜಿಶೆಟ್ಟಿ ಅವರ ಮನೆಯೂ ಸಹ ಜಖಂಗೊಂಡಿದೆ.

ದೊಡ್ಡಗರುಡನಹಳ್ಳಿ ಗ್ರಾಮದ ತಾಪಂ ಮಾಜಿ ಸದಸ್ಯೆ ಮಂಜುಳಾ ಆನಂದ್ ಅವರ ಮನೆಯ ಮೇಲಿನ ಹೆಂಚುಗಳು ಬಿರುಗಾಳಿಗೆ ಒಡೆದು ಹೋಗಿ ಲಕ್ಷಾಂತರ ರೂ. ನಷ್ಟವಾಗಿದೆ. ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕವಿಕಾವ್ಯ ಮೇಳಕ್ಕೆ ಕವನ ಆಹ್ವಾನ

ಮಂಡ್ಯ,ಏ.23(ಮೋಹನ್‌ರಾಜ್)–ಡಾ.ಜೀ.ಶಂ.ಪ ಸಾಹಿತ್ಯ ವೇದಿಕೆ, ಶ್ರೀನಾಲ್ವಡಿ ಕೃಷ್ಣರಾಜಒಡೆಯರ್ ಯುವಸೇನೆ ವತಿಯಿಂದ ಜೂ.4ರಂದು ರಾಜಋಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೇಗೌಡ ಅವರ ಗೌರವಾರ್ಥ 28ನೇ ರಾಜ್ಯ ಮಟ್ಟದ ಕವಿ ಕಾವ್ಯ ಮೇಳವನ್ನು ಮಂಡ್ಯ ನಗರದಲ್ಲಿ ನಡೆಸಲು ನಿರ್ಧರಿಸಿದ್ದು, ಆಸಕ್ತರಿಂದ ಎರಡು ಕವನಗಳನ್ನು ಆಹ್ವಾನಿಸಲಾಗಿದೆ. ನೂರು ಕವಿಗಳನ್ನು ಆಯ್ಕೆ ಮಾಡಿ ಕವಿಗೋಷ್ಠಿಗೆ ಅವಕಾಶ ನೀಡಲಾಗುವುದು. ಅತ್ಯುತ್ತಮ ಹತ್ತು ಕವಿಗಳಿಗೆ ರಾಜ್ಯಮಟ್ಟದ 'ಕಾವ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನೂರು ಕವಿತೆಯ ಕವಿಯನ್ನು ಕವಿ ಕಾವ್ಯ ಮೇಳದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಮಾಡಲಾಗುವುದು. ಇದೇ ಸಂದರ್ಭದಲ್ಲಿ ತಲಾ ಐದು ಮಂದಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪ್ರಶಸ್ತಿ ನೀಡಿ, ಗೌರವಿಸಲಾಗುವುದು.

ಆಸಕ್ತರು 20 ಸಾಲಿನ ಎರಡು ಕವನಗಳನ್ನು ಮೇ2ರೊಳಗೆ ಎರಡು ಫೋಟೋ, ಕಿರುಪರಿಚಯದೊಂದಿಗೆ ಎಸ್.ಕೃಷ್ಣಸ್ವರ್ಣಸಂದ್ರ ಅಧ್ಯಕ್ಷರು, ಡಾ.ಜೀ.ಶಂ.ಪ ಸಾಹಿತ್ಯ ವೇದಿಕೆ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2. ವ್ಯಾಟ್ಸಪ್ ಮೂಲಕ ನೋಂದಣಿಗಾಗಿ ಮೊ–9448424380 ಸಂಪರ್ಕಿಸಲು ಕೋರಲಾಗಿದೆ.

ಸೋಮವಾರಪೇಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವ

ಜಿಲ್ಲಾ ಸಹಕಾರ ಬ್ಯಾಂಕ್‌ಗಳನ್ನು ಮುಚ್ಚುವುದಿಲ್ಲ

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್



ಸೋಮವಾರಪೇಟೆ, ಏ.23–ಜಿಲ್ಲಾ ಸಹಕಾರ ಬ್ಯಾಂಕ್‌ಗಳನ್ನು ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಒಕ್ಕಲಿಗರ ಸಮುದಾಯ ಭವನದಲ್ಲಿ ಶನಿವಾರ ಆಯೋಜಿಸಿದ್ದ ಸೋಮವಾರಪೇಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ 21 ಜಿಲ್ಲಾ ಸಹಕಾರ ಬ್ಯಾಂಕ್‌ಗಳನ್ನು ಅಪೆಕ್ಸ್ ಬ್ಯಾಂಕ್‌ನೊಂದಿಗೆ ವಿಲೀನ ಮಾಡುವ ವಿಷಯ ಸದ್ಯಕ್ಕಿಲ್ಲ. ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಸೂಚನೆಯಂತೆ ಸಭೆಯಲ್ಲಿ ಚರ್ಚೆ ಮಾಡಿರುವುದು ನಿಜ. ಕೇರಳ ಸೇರಿದಂತೆ ಕೆಲ ರಾಜ್ಯಗಳಲ್ಲಿ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳ ವಿಲೀನ ನಡೆದಿದೆ. ಆ ರಾಜ್ಯಗಳಿಗೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ವರದಿ ತರಿಸಿ, ಶಾಸಕಾಂಗ ಸಭೆಯಲ್ಲಿ ಚರ್ಚೆ ನಡೆಸಿ ಕ್ರಮಕೈಗೊಳ್ಳಲಾಗುತ್ತದೆ. ನಾನು ಸಹಕಾರ ಸಚಿವನಾಗಿರುವ ತನಕ ವಿಲೀನಕ್ಕೆ ಆಸ್ಪದ ನೀಡುವುದಿಲ್ಲ ಎಂದು ಭರವಸೆ ನೀಡಿದರು.

ರಾಜ್ಯದ ಬೆರಳೆಣಿಕೆಯ ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿಯವರೇ ಅಕ್ರಮಗಳಲ್ಲಿ ತೊಡಗಿರುವ ಬಗ್ಗೆ ದೂರುಗಳು ಬರುತ್ತಿದ್ದು, ಈ ಹಿನ್ನೆಲೆಯಲ್ಲಿ ಜನರು ಠೇವಣಿ ಇಡಲು ಮುಂದೆ ಬರುತ್ತಿಲ್ಲ.ಅಂತಹ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳುವುದರೊಂದಿಗೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಕಠಿಣ ಕಾನೂನು ಕ್ರಮ ಜಾರಿಗೆ ತರಬೇಕಿದೆ ಎಂದರು.

ಕೊಡಗು ಜಿಲ್ಲೆಗೆ ಇಲ್ಲಿನವರೇ ಸಚಿವರಾಗಬೇಕು. ಕಂದಾಯ, ಅರಣ್ಯ ಇಲಾಖೆ ಸೇರಿದಂತೆ ಇಲ್ಲಿನ ಜ್ವಲಂತ ಸಮಸ್ಯೆಗಳ ಪರಿಹಾರ ಆಗಬೇಕಾದರೆ ಸ್ಥಳೀಯ ಶಾಸಕರುಗಳೇ ಸಚಿವರಾಗಬೇಕು. ಹೊರ ಜಿಲ್ಲೆಯವರಿಗೆ ಇಲ್ಲಿನ ಸಮಸ್ಯೆ ಹಾಗು ಕಾನೂನುಗಳ ಪರಿಜ್ಞಾನ ಅಷ್ಟಾಗಿ ಇರುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡ ರೈತರು ಸಕಾಲದಲ್ಲಿ ಸಾಲ ಮರು ಪಾವತಿಸಿದರೆ ಮಾತ್ರ ಬ್ಯಾಂಕ್ ಏಳಿಗೆ ಸಾಧ್ಯ ಎಂದರು.

ಶತಮಾನೋತ್ಸವ ಸವಿನೆನಪಿಗಾಗಿ ಹೊರತರಲಾದ ಸ್ಮರಣ ಸಂಚಿಕೆಯ ಬಿಡುಗಡೆ ಮಾಡಿದ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಹಿರಿಯ ಸಹಕಾರಿಗಳು ಹಾಕಿಕೊಟ್ಟ ಮೇಲ್ಪಂಕ್ತಿಯಿಂದಾಗಿ ಚಿಕ್ಕ ಜಿಲ್ಲೆಯಾದರೂ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಎರಡನೇ ಸ್ಥಾನ ಪಡೆದಿರುವುದು ಹೆಗ್ಗಳಿಕೆ ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ವಿಧಾನಪರಿಷತ್ ಸದಸ್ಯರಾದ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಹುಲ್ಲೂರಿಕೊಪ್ಪ ಮಾದಪ್ಪ ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ,ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ,ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಮನು ಮುತ್ತಪ್ಪ, ಸಹಕಾರ ಸಂಘಗಳ ಜಂಟಿ ನಿರ್ದೇಶಕ ಡಾ.ಜಿ.ಉಮೇಶ್ ಮತ್ತಿತರರು ಇದ್ದರು.

ಜಿಲ್ಲಾಮಟ್ಟದ ದೊಡ್ಡವೀರ ರಾಜೇಂದ್ರ ಒಡೆಯರ್ ಕ್ರೀಡಾಕೂಟಕ್ಕೆ ಚಾಲನೆ

ಕುಶಾಲನಗರ,ಏ.23– ಅಖಿಲ ಭಾರತ ವೀರಶೈವ ಮಹಾಸಭಾ ಕೊಡಗು ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಮಟ್ಟದ ವೀರಶೈವ ಲಿಂಗಾಯತ ದೊಡ್ಡವೀರ ರಾಜೇಂದ್ರ ಒಡೆಯರ್ ಕ್ರೀಡಾಕೂಟ ಶನಿವಾರ ಹೆಬ್ಬಾಲೆಯ ಸಂಯುಕ್ತ ಪದವಿಪೂರ್ವ ಕಾಲೇಜು ಮೈದಾನದಲ್ಲಿ ನಡೆಯಿತು.

ಕ್ರೀಡಾಕೂಟ ಉದ್ಘಾಟಿಸಿದ ಮಹಾಸಭಾದ ಜಿಲ್ಲಾಧ್ಯಕ್ಷ ಎಚ್.ವಿ.ಶಿವಪ್ಪ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹ ನೀಡಬೇಕು. ಪ್ರತಿ ಮನೆಗಳಲ್ಲಿ ಕ್ರೀಡಾ ಸಾಧಕರನ್ನು ಬೆಳೆಸಬೇಕು ಎಂದರು.

ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಗೆ ಚಾಲನೆ ನೀಡಿದ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಸಮುದಾಯದಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಇಂತಹ ಕ್ರೀಡಾಕೂಟಗಳು ಉತ್ತಮ ವೇದಿಕೆಯಾಗಿವೆ ಎಂದರು.



ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಸ್.ಮಹೇಶ್ ಮಾತನಾಡಿ, ಕ್ರೀಡಾಪಟುಗಳು ಕ್ರೀಡಾ ಮನೋಭಾವದಿಂದ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಮೊದಲಿಗೆ ಹೆಬ್ಬಾಲೆ ಬನಶಂಕರಿ ಅಮ್ಮನವರ ದೇವಸ್ಥಾನದಿಂದ ಬೈಕ್ ರಾಲಿ ಮೂಲಕ ಕಾಲೇಜು ಮೈದಾನಕ್ಕೆ ಕ್ರೀಡಾಜ್ಯೋತಿ ತರಲಾಯಿತು. ನಂತರ ಗುಂಪು ಆಟಗಳಾದ ಕ್ರಿಕೆಟ್, ಹಗ್ಗಜಗ್ಗಾಟ, ಥ್ರೋಬಾಲ್, ಶಟಲ್ ಬಾಲಕ ಬಾಲಕಿಯರಿಗೆ ವೈಯಕ್ತಿಕ ಸ್ಪರ್ಧೆಗಳಾದ ಕಾಳು ಹೆಕ್ಕುವುದು, ಕಪ್ಪೆ ಕುಪ್ಪಳಿಸುವುದು, ಓಟದ ಸ್ಪರ್ಧೆಗಳು ಮತ್ತಿತರ ಸ್ಪರ್ಧೆಗಳು, ಪುರುಷ ಮತ್ತು ಮಹಿಳೆಯರಿಗೆ ವೈಯಕ್ತಿಕ ಸ್ಪರ್ಧೆಗಳಾದ ನಿಧಾನ ಬೈಕ್ ಚಾಲನೆ, ಭಾರದ ಗುಂಡು ಎಸೆತ, ರಂಗೋಲಿ, ಓಟ ಮತ್ತಿತರ ಸ್ಪರ್ಧೆಗಳು ನಡೆಸಲಾಯಿತು. ತೀರ್ಪುಗಾರರಾಗಿ ತಾಲೂಕು ದೈಹಿಕ ಶಿಕ್ಷಣ ಅಧೀಕ್ಷಕ ಡಾ.ಸದಾಶಿವಯ್ಯ ಎಸ್.ಪಲ್ಲೇದ್ ನೇತೃತ್ವದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾದ ಭೋಜೇಗೌಡ, ನೀಲಪ್ಪ, ಆಶಾ, ಸಂತೋಷ್ ಕಾರ್ಯನಿರ್ವಹಿಸಿದರು.

ಈ ಸಂದರ್ಭ ಮಹಾಸಭಾದ ಕೊಡಗು ಜಿಲ್ಲಾ ಸಮಿತಿ ಉಪಾಧ್ಯಕ್ಷ ಜಿ.ಎಂ.ಕಾಂತರಾಜು, ಎಸ್.ಎಸ್.ಸುರೇಶ್, ಪ್ರಧಾನ ಕಾರ್ಯದರ್ಶಿ ಶಾಂಭ ಶಿವಮೂರ್ತಿ, ಕೋಶಾಧ್ಯಕ್ಷ ಎಚ್.ಪಿ.ಉದಯಕುಮಾರ್, ಕ್ರೀಡಾ ಸಮಿತಿ ಅಧ್ಯಕ್ಷ ಮೋಕ್ಷಿಕ್ ರಾಜ್, ಕ್ರೀಡಾ ಸಂಯೋಜಕ ಆದರ್ಶ್, ಕಮಲಾ ಇತರರಿದ್ದರು.

ಏ.26 ರಂದು: ಜಿಲ್ಲಾ ಯುವ ಘಟಕ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ಹಾನಗಲ್ಲು ಶ್ರೀ ಕುಮಾರಸ್ವಾಮಿಗಳ ಮತ್ತು ಡಾ.ಶ್ರೀ ಶ್ರೀ ಶಿವಕುಮಾರಸ್ವಾಮಿ ಜಯಂತಿ ಮತ್ತು ಧಾರ್ಮಿಕ ಸಭೆ ಕುಶಾಲನಗರದ ರೈತ ಸಹಕಾರ ಭವನದಲ್ಲಿ ನಡೆಯಲಿದೆ.

ಪ್ರಾಣಿ ಎಂದು ತಪ್ಪಾಗಿ ಹಾರಿಸಿದ ಗುಂಡಿಗೆ ಸಹಬೇಟೆಗಾರ ಬಲಿ

ಇಬ್ಬರು ಬೇಟೆಗಾರರು ಪೊಲೀಸರಿಗೆ ಶರಣು

ವಿರಾಜಪೇಟೆ, ಏ.23–ಬೇಟೆಗಾಗಿ ಆರಣ್ಯಕ್ಕೆ ತೆರಳಿ ಮೂವರಲ್ಲಿ ಓರ್ವ ಪ್ರಾಣಿ ಎಂದು ತಪ್ಪಾಗಿ ತಿಳಿದು ಹಾರಿಸಿದ ಗುಂಡಿಗೆ ಸಹಬೇಟೆಗಾರ ಬಲಿಯಾದ ಘಟನೆ ಇಲ್ಲಿಗೆ ಸಮೀಪದ ಹೆಗ್ಗಳ ರಾಮನಗರ ಗ್ರಾಮದ ಸಮೀಪವಿರುವ ಅರಣ್ಯದಲ್ಲಿ ನಡೆದಿದೆ.



ಎ.ಹಮೀದ್

ಬೇಟೆಗಾಗಿ ಕಳೆದ ರಾತ್ರಿ ಕೊಟ್ಟೋಳಿಯ ಎ.ಹಮೀದ್, ಬೇಟೋಳಿಯ ರಫೀಕ್ ಮತ್ತು ಅಶ್ರಫ್ ಅರಣ್ಯಕ್ಕೆ ತೆರಳಿದ್ದರು. ಪ್ರಾಣಿಗಾಗಿ ರಫೀಕ್ ಮತ್ತು ಅಶ್ರಫ್ ಹೊಂಚು ಹಾಕಿ ಕುಳಿತ್ತಿದ್ದಾಗ ಗಿಡಗಳು ಅಲುಗಾಡಿವೆ. ಯಾವುದೋ ಪ್ರಾಣಿಯ ಚಲನೆಯಿಂದ ಗಿಡಗಳು ಅಲುಗಾಡುತ್ತಿವೆ ಎಂದು ಭಾವಿಸಿದ ಇವರು, ಅತ್ತ ಗುಂಡು ಹಾರಿಸಿದ್ದಾರೆ. ಆದರೆ ಅಲ್ಲಿ ಹಮೀದ್ ಇದ್ದುದರಿಂದ ಆತನಿಗೆ ಗುಂಡು ತಗುಲಿ ಗಾಯಗೊಂಡಿದ್ದು, ಇವರಿಬ್ಬರು ಆತನನ್ನು ವಾಹನದಲ್ಲಿ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯೆ ಹಮೀದ್ ಸಾವನ್ನಪ್ಪಿದ್ದಾನೆ.

ರಫೀಕ್ ಮತ್ತು ಅಶ್ರಫ್ ಪೊಲೀಸರಿಗೆ ಶರಣಾಗಿದ್ದು, ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಅಯ್ಯಪ್ಪ, ಮಡಿಕೇರಿ ಡಿವೈಎಸ್ಪಿ ಗಜೇಂದ್ರ ಪ್ರಸಾದ್, ವಿರಾಜಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್, ವಿರಾಜಪೇಟೆ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸಿದ್ದಲಿಂಗ ಬಿ.ಬಾನಸೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲಾ ಕೇಂದ್ರದಲ್ಲಿ ಅಲೆಮಾರಿ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸಲು ಮನವಿ

ಚಾಮರಾಜನಗರ,ಏ.23– ಜಿಲ್ಲಾ ವ್ಯಾಪ್ತಿಯಲ್ಲಿರುವ ಅಲೆಮಾರಿಗಳಿಗೆ ಸಂಘಟನೆ ಮತ್ತು ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಅನುಕೂಲವಾಗುವಂತೆ ಜಿಲ್ಲಾಧಿಕಾರಿಗಳು ಅಲೆಮಾರಿಗಳ ಸಮುದಾಯ ಭವನ ನಿರ್ಮಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಪರಿಶಿಷ್ಟ ಜಾತಿ ಅರೆ ಅಲೆಮಾರಿ ಅಭಿವೃದ್ಧಿ ಕೋಶದ ನಾಮ ನಿರ್ದೇಶಕರು ಹಾಗೂ ಸಂಘಟನೆಯ ಜಿಲ್ಲಾಧ್ಯಕ್ಷ ಕೆರಹಳ್ಳಿ ರಾಜೇಂದ್ರಕುಮಾರ್ ಮನವಿ ಸಲ್ಲಿಸಿದರು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಅರೆ ಅಲೆಮಾರಿ, ಅಲೆಮಾರಿ ಸಮುದಾಯಗಳ ಪ್ರಗತಿ ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಗೆ ಸಂಘಟನೆಯ ನಿರ್ದೇಶಕರು ಮನವಿ ಸಲ್ಲಿಸಿ, ಅಲೆಮಾರಿ ಮತ್ತು ಅರೆ ಅಲೆಮಾರಿಗಳ ಜನಾಂಗಗಳ ಪ್ರಗತಿಗಾಗಿ ವಿವಿಧ ಸಾಲ ಸೌಲಭ್ಯಗಳು, ವಸತಿ ಹಾಗೂ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿ ಅವರನ್ನು ಸಮಾಜದ ಮುಖ್ಯವಾಹಿನಿ ತರಬೇಕು ಎಂದು ಮನವಿ ಮಾಡಿಕೊಂಡರು. ಇದಕ್ಕೂ ಮೊದಲು ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ



ಸೋಮಲ್ ಮಾತನಾಡಿ, ವಿವಿಧ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಪರಿಶಿಷ್ಟ ಜಾತಿ, ಅರೆ ಅಲೆಮಾರಿ ಮತ್ತು ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳು ಅನುಷ್ಠಾನ ಮತ್ತು ಪ್ರಗತಿ ಬಗ್ಗೆ ಚರ್ಚೆ ನಡೆಸಿ, ವಸತಿ, ಗುಂಪುಸಾಲ, ವೈಯಕ್ತಿಕ ಸಾಲ, ಹೈನುಗಾರಿಕೆ ಹಾಗೂ ಕುಲ ಕಸುಬುಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ವಿವಿಧ ಸಾಲ ಸೌಲಭ್ಯ ನೀಡಿ, ಅವರು ಸಹ ಮುಖ್ಯವಾಹಿನಿ ಬರುವಂತೆ ಮಾಡಬೇಕು. ಅವರು ವಾಸಿಸುವ ಪ್ರದೇಶಗಳಲ್ಲಿಯೇ ಆಯಾ ಗ್ರಾಪಂ ವ್ಯಾಪ್ತಿಯಲ್ಲಿ ನಿವೇಶನ ನೀಡಿ, ಮನೆಗಳನ್ನು ನಿರ್ಮಿಸಿಕೊಡಲು ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಸಮುದಾಯದ 80 ಮಂದಿ ಫಲಾನುಭವಿಗಳಿಗೆ 46.56 ಲಕ್ಷ ರೂ. ಸಾಲ ವಿತರಣೆಗೆ ಅನುಮೋದನೆ ಪಡೆದುಕೊಳ್ಳಲಾಯಿತು. ಸಭೆಯಲ್ಲಿ ಸಮಿತಿ ನಾಮ ನಿರ್ದೇಶಕರಾದ ಶಿವಕುಮಾರ್, ಸಿದ್ದಾಪ್ಪಾಜಿ, ಲೀಲಾವತಿ, ಅಲೆಮಾರಿ ಅಭಿವೃದ್ಧಿ ಕೋಶದ ಜಿಲ್ಲಾಧ್ಯಕ್ಷ ರಾಜೇಂದ್ರಕುಮಾರ್, ಕೌಶಲ್ಯ ಅಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದ ಸದ್ಬಳಕೆಗೆ ಸಲಹೆ

ಬೇಗೂರು, ಏ.23(ಕಿರಣ್)– 'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ' ಕಾರ್ಯಕ್ರಮ ಆಯೋಜಿಸುವ ಮೂಲಕ ಗ್ರಾಮೀಣ ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತಿದ್ದು, ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಗ್ರೇಡ್–2 ತಹಸೀಲ್ದಾರ್ ಜಯಪ್ರಕಾಶ್ ಹೇಳಿದರು.

ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಹೆಗ್ಗಡಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕರು ತಮ್ಮ ಕುಂದು–ಕೊರತೆಗಳು ಹಾಗೂ ಯಾವುದೇ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅರ್ಜಿ ಸಲ್ಲಿಸಿದರೆ ಪರಿಹಾರ ಕೊಡಿಸಲಾಗುವುದು ಎಂದರು.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಸಾರಿಗೆ ಸಂಸ್ಥೆಯು ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ



ಬಸ್‌ಗಳನ್ನು ಕಡಿತ ಮಾಡಿದ್ದರಿಂದ ಶಾಲಾ–ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಹಿಂದಿನಂತೆಯೇ ಬಸ್ ಸೌಲಭ್ಯ ಕಲ್ಪಿಸಬೇಕು. ಗ್ರಾಮ ಪಂಚಾಯಿತಿಯಲ್ಲಿ ಸಕಾಲದಲ್ಲಿ ನಿವೇಶನಗಳ ಇ–ಸ್ವತ್ತು ಮಾಡುತ್ತಿಲ್ಲ ಸೇರಿದಂತೆ ಹಲವು ದೂರುಗಳು ಕೇಳಿಬಂದವು. ಮಾಸಿಕ ವೇತನ, ಪೌತಿಖಾತೆ ಬದಲಾವಣೆ ಮುಂತಾದ 83 ಅರ್ಜಿಗಳ ಸ್ವೀಕಾರ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಸೌಭಾಗ್ಯಮ್ಮ, ತಾಪಂ ಇಓ ಅರಸು, ಬೇಗೂರು ನಾಡ ಕಚೇರಿಯ ಉಪತಹಸೀಲ್ದಾರ್ ಉಮಾ, ಕಂದಾಯಾಧಿಕಾರಿ ರಾಜಕುಮಾರ್, ರವಿ, ಗ್ರಾಮ ಲೆಕ್ಕಾಧಿಕಾರಿ ಮಹದೇವಪ್ಪ, ಮಂಜು, ಬಿಇಓ ಎಸ್.ಸಿ.ಶಿವಮೂರ್ತಿ, ಮುಖ್ಯ ಶಿಕ್ಷಕ ಕೆ.ಎನ್.ಶಿವಸ್ವಾಮಿ ಸೇರಿದಂತೆ ಹಲವರು ಇದ್ದರು.

ಉತ್ತಂಬಳ್ಳಿ ಸಿದ್ದರಾಜು ಮೇಲೆ ಹಲ್ಲೆ ಪ್ರಕರಣ

ಶಾಸಕ ಮಹೇಶ್, ಅವರ ಗನ್‌ಮ್ಯಾನ್ ವಿಚಾರಣೆಗೊಳಪಡಿಸಿ

ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಜಯಣ್ಣ ಆಗ್ರಹ

ಕೊಳ್ಳೇಗಾಲ, ಏ.23(ನಾಗೇಂದ್ರಸ್ವಾಮಿ)– ಉತ್ತಂಬಳ್ಳಿ ಸಿದ್ದರಾಜು ಮೇಲೆ ಪೊಲೀಸರು ಹಲ್ಲೆ ನಡೆಸಿದ ಪ್ರಕರಣದಲ್ಲಿ ಶಾಸಕ ಮಹೇಶ್ ಅವರು ದ್ವಂದ್ವ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಪ್ರಕರಣ ಸಂಬಂಧ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಹಾಗೂ ಎಸ್. ಜಯಣ್ಣ ಆಗ್ರಹಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಾಯಕ ಬಡವನೊಬ್ಬನಿಗೆ ನ್ಯಾಯ ಒದಗಿಸಬೇಕಾದ ಶಾಸಕರು ಆತನನ್ನು ಪೊಲೀಸರಿಗೊಪ್ಪಿಸಿದ್ದು ಸರಿಯಲ್ಲ. ಹಾಗಾಗಿ, ಈ ಪ್ರಕರಣ ನಿಷ್ಪಕ್ಷಪಾತ ತನಿಖೆಯಾಗಬೇಕು. ಪ್ರಕರಣದಲ್ಲಿ ಶಾಸಕರ ಹೇಳಿಕೆಗಳನ್ನು ಆಧರಿಸಿ ಅವರನ್ನು ಹಾಗೂ ಅವರ ಅಂಗರಕ್ಷನನ್ನು ವಿಚಾರಣೆಗೊಳಪಡಿಸಬೇಕು ಎಂದ ಅವರು, ಪ್ರಕರಣದ ತನಿಖೆ ದಿಕ್ಕು ತಪ್ಪಿದರೆ



ಪ್ರಗತಿಪರ ಸಂಘಟನೆಗಳು ಕೈಗೊಳ್ಳುವ ಪ್ರತಿಭಟನೆಗಳಿಗೆ ನಾವು ಬೆಂಬಲ ಸೂಚಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಉತ್ತಂಬಳ್ಳಿ ಘಟನೆ ಬಗ್ಗೆ ಶಾಸಕರ ಹೇಳಿಕೆ ಸಮಂಜಸವಾಗಿಲ್ಲ. ಒಬ್ಬ ಜನಪ್ರತಿನಿಧಿಯಾದವರಿಗೆ ಇದು ಸೂಕ್ತವಲ್ಲ. ಈಗಾಗಲೇ ಗಾಯಾಳು ಸಿದ್ದರಾಜುವಿಗೆ ಆಮಿಷ ತೋರಲಾಗುತ್ತಿದೆ. ಆತನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವಂತೆ ಒತ್ತಡ ಹೇರಲಾಗುತ್ತಿದೆ. ಇವೆಲ್ಲಾ ಯಾರ ವಿರುದ್ಧ ಆರೋಪಗಳು ಕೇಳಿ ಬಂದಿದೆಯೊ ಅವರೇ ಮಾಡಿಸುತ್ತಿದ್ದಾರೆ. ಹಾಗಾಗಿ, ಪ್ರಕರಣದಲ್ಲಿ ಪೊಲೀಸ್ ಇಲಾಖೆ ಪಾರದರ್ಶಕ ತನಿಖೆ ಕೈಗೊಳ್ಳಬೇಕಿದೆ. ಗಾಯಾಳು ಸಿದ್ದರಾಜು, ಅಂಗರಕ್ಷಕ ಮತ್ತು ಶಾಸಕರ ಹೇಳಿಕೆಗಳನ್ನು ಆಧರಿಸಿ ಅವರನ್ನು ವಿಚಾರಿಸಬೇಕು ಎಂದರು.

ಮಾಜಿ ಶಾಸಕ ಎಸ್.ಜಯಣ್ಣ ಮಾತನಾಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಘಟನೆ ನಡೆದು 8 ದಿನವಾದರೂ ಯಾವುದೇ ಕ್ರಮವಾಗಿಲ್ಲ. ಪ್ರಕರಣದಲ್ಲಿ ಪೊಲೀಸರು ಪಾರದರ್ಶಕ ತನಿಖೆ ನಡೆಸುವ ನಂಬಿಕೆ ನಮ್ಮೆಲ್ಲರಿಗಿದೆ ಎಂದ ಅವರು, ಪ್ರಕರಣದ ಕುರಿತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತರಲಾಗಿದೆ. ಅವರೂ ಸಹ ಪ್ರಕರಣ ಪಾರದರ್ಶಕ ತನಿಖೆ ನಡೆಸಲಿ ಎಂದು ಆಗ್ರಹಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಪ್ರಭಾರಿ ಅಧ್ಯಕ್ಷೆ ಸುಶೀಲಾ ಶಾಂತರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಮಂಜುನಾಥ್, ಶಾಂತರಾಜು, ಶಿವು, ಶಾಂತು, ರವಿಕುಮಾರ್, ಅಕ್ಮಲ್‌ಪಾಷಾ, ಕಿಜರ್‌ಪಾಷಾ, ಬಸವರಾಜು ಇನ್ನಿತರರು ಇದ್ದರು.

ಇಂದು ಡಾ.ರಾಜ್ ಜನ್ಮದಿನ

ಚಾಮರಾಜನಗರ, ಏ.23– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಕನ್ನಡದ ಮೇರುನಟ, ಪದ್ಮಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಡಾ.ರಾಜ್‌ಕುಮಾರ್ ಅವರ ಜನ್ಮದಿನ ಆಚರಣೆಯನ್ನು ಏ.24ರಂದು ಬೆಳಗ್ಗೆ 11ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಡಾ.ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಜನ್ಮದಿನವನ್ನು ಆಚರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಬಸವ ಜಯಂತಿ ಆಚರಣೆ ಪೂರ್ವಭಾವಿ ಸಭೆ

ಚಾಮರಾಜನಗರ, ಏ.23– ಜಿಲ್ಲಾಡಳಿತದ ವತಿಯಿಂದ ಬಸವ ಜಯಂತಿ ಆಚರಿಸುವ ಸಂಬಂಧ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಏ.25ರಂದು ಮಧ್ಯಾಹ್ನ 4 ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ. ಸಭೆಗೆ ಎಲ್ಲಾ ಸಂಘಟನೆಗಳು ಹಾಗೂ ಸಮುದಾಯದ ಮುಖಂಡರು ಹಾಜರಾಗಿ ಜಯಂತಿ ಆಚರಣೆ ಸಂಬಂಧ ಸಲಹೆ, ಸಹಕಾರ ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಹೆಚ್.ಚನ್ನಪ್ಪ ಪ್ರಕಟಣೆಯಲ್ಲಿ ಕೋರಿದ್ದಾರೆ.

40 ಪರ್ಸೆಂಟ್ ಅಲ್ಲ 65 ಪರ್ಸೆಂಟ್ ಕಮಿಷನ್ ಸರ್ಕಾರ



ಬೀದರ್, ಏ.23– ಪಿಎಸ್ಐ ನೇಮಕಾತಿ ಅಷ್ಟೇ ಅಲ್ಲ ಹಾಲು ಒಕ್ಕೂಟದ ನೇಮಕಾತಿಯಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಒಂದು ಸೀಟಿಗೆ 25 ಲಕ್ಷ ಹಣ ಪಡೆಯುತ್ತಿದ್ದಾರ. ಮೊದಲೇ ಹಣ ಕೊಟ್ಟು ಸೀಟು ಖರೀದಿಸುತ್ತಿದ್ದಾರೆ ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಇನ್ನು ಕೆಪಿಎಸ್‌ಸಿ ನೇಮಕಾತಿಯಲ್ಲೂ ಕಾಂಚಾಣ ಜೋರಾಗಿಯೇ ಸದ್ದು ಮಾಡುತ್ತಿದೆ. ಒಂದು ಸೀಟಿಗೆ 1 ಕೋಟಿ ಮಾರುತ್ತಿದ್ದಾರೆ. ನನ್ನ ಬಳಿಯೂ ಅಭ್ಯರ್ಥಿಗಳು ಬಂದಿದ್ದರು. ನನ್ನ ಬಳಿ ಇದೆಲ್ಲಾ ನಡೆಯಲ್ಲ ಎಂದು ಹೇಳಿ ಕಳುಹಿಸಿದೆ. ಬಿಜೆಪಿ ಸರ್ಕಾರ 40 ಪರ್ಸೆಂಟ್ ಸರ್ಕಾರ ಅಲ್ಲ, 65 ಪರ್ಸೆಂಟ್ ಸರ್ಕಾರವಾಗಿದೆ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಮೂರನೇ ಪುಟದಿಂದ

ಪುಟಗಳೇ ಮಾಯ

ಕಚೇರಿ ಅಭಿಲೇಖಾಲಯದಲ್ಲಿರುವ ಸಾವಿರಾರು ಕಡತಗಳನ್ನು ಪರಿಶೀಲಿಸಲು ಮುಡಾ ಕಾರ್ಯದರ್ಶಿ ವೆಂಕಟರಾಜು ನೇತೃತ್ವದಲ್ಲಿ ತಂಡ ರಚಿಸಿದ್ದಾರೆ.

ರಜಾ ದಿನವೇ ಕಾರ್ಯಾಚರಣೆ: ಭಾರೀ ಅವ್ಯವಹಾರ ಪತ್ತೆ ಮಾಡಲು ವೆಂಕಟರಾಜು ನೇತೃತ್ವದ ವಿಶೇಷ ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ನಿವೇಶನ ಶಾಖೆ, ಇ–ಖಾತಾ ಶಾಖೆಯ ಸುಮಾರು 20ಕ್ಕೂ ಹೆಚ್ಚು ಮಂದಿ ಅಧಿಕಾರಿಗಳು 4ನೇ ಶನಿವಾರದ ರಜಾ ದಿನವೂ ಪತ್ತೆ ಕಾರ್ಯಾಚರಣೆ ಆರಂಭಿಸಿದ್ದಾರೆ. ವಿವಿಧ ಬಡಾವಣೆಯ ನಿವೇಶನ ಹಂಚಿಕೆ ಮಾಡಿರುವ ಮೂಲ ಕಡತಗಳ ಪ್ರತಿಯೊಂದು ಪುಟಗಳನ್ನೂ ಪರಿಶೀಲಿಸುತ್ತಿರುವ ಅಧಿಕಾರಿಗಳು, ದಾಖಲೆಗಳ ಪುಟ ಸಂಖ್ಯೆ, ಹಣ ಪಾವತಿಸಿರುವ ಚಲನ್, ಹಂಚಿಕೆ ಪತ್ರ, ಕ್ರಯ ಪತ್ರ, ಸ್ವಾಧೀನ ಪತ್ರ, ಖಾತಾ ಪತ್ರ, ಕ್ರಯ ವರ್ಗಾವಣೆ ಪತ್ರ, ಟೈಟಲ್ ಡೀಡ್, ಇಸಿ ಸೇರಿದಂತೆ ಎಲ್ಲಾ ದಾಖಲಾತಿಗಳ ಮಾಹಿತಿಗಳನ್ನು ಪ್ರತ್ಯೇಕ ಲೆಡ್ಜರ್‌ಗಳಲ್ಲಿ ನಮೂದಿಸುತ್ತಿದ್ದಾರೆ.

ದಾಖಲಾತಿಗಳ ನಾಶ: ವಿವಿಧ ಪ್ರತಿಷ್ಠಿತ ಬಡಾವಣೆಗಳನ್ನೇ ಗುರಿಯಾಗಿಸಿಕೊಂಡು ಭಾರೀ ಬೆಲೆಬಾಳುವ ದೊಡ್ಡ ದೊಡ್ಡ ನಿವೇಶನಗಳ ಮೂಲ ಕಡತ (Original File)ಗಳಿಂದ ಪ್ರಮುಖ ಮಾಹಿತಿಗಳಿರುವ ಹಾಳೆಗಳನ್ನೇ ಕಿತ್ತಿರುವುದು, ಆ ಸ್ಥಳಕ್ಕೆ ಬೇರೊಬ್ಬ ವ್ಯಕ್ತಿಯ ಹೆಸರಿನ ನಕಲಿ ದಾಖಲೆಗಳನ್ನು ಸೇರಿಸಿರುವುದು ಪರಿಶೀಲನೆ ವೇಳೆ ಕಂಡುಬಂದಿದೆ.

600 ನಿವೇಶನಗಳ ದಾಖಲೆ ನಾಪತ್ತೆ ಮುಡಾದಿಂದ ರಚಿಸಿರುವ ವಿವಿಧ ಬಡಾವಣೆಗಳ 600 ನಿವೇಶನಗಳ ಹಂಚಿಕೆ ಮಾಡಿರುವ ಬಗ್ಗೆ ಇದ್ದ 300 ಕಡತಗಳಿಂದ ದಾಖಲೆ ಪತ್ರಗಳನ್ನು ನಾಪತ್ತೆ ಮಾಡಲಾಗಿದ್ದು, ಫೈಲ್ ಮತ್ತು ಲೆಡ್ಜರ್‌ಗಳಲ್ಲಿರುವ ದಾಖಲೆಗಳಿಗೆ ಒಂದಕ್ಕೊಂದು ತಾಳೆಯಾಗದಿರುವುದು ಪರಿಶೀಲನೆ ವೇಳೆ ಕಂಡುಬರುತ್ತಿದೆ.

ನೂರಾರು ಕೋಟಿ ರೂ ಅವ್ಯವಹಾರ: ಮೂಲ ದಾಖಲೆಗಳನ್ನು ನಾಶ ಮಾಡಿ, ಅದರ ಸ್ಥಳದಲ್ಲಿ ನಕಲಿ ದಾಖಲೆಗಳನ್ನು ಸೇರಿಸಿ, ಬ್ಯಾಂಕ್ ಚಲನ್‌ಗಳನ್ನೂ ನಕಲಿ ಮಾಡಿ ನೂರಾರು ಕೋಟಿ ರೂ.ಗಳ ನಿವೇಶನಗಳನ್ನು ಪರಭಾರೆ ಮಾಡಿ ಭಾರೀ ಅವ್ಯವಹಾರ ಮಾಡಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಅಧಿಕಾರಿ, ಸಿಬ್ಬಂದಿ ಶಾಮೀಲು: ಈ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಡಾದ ಕೆಲ ಅಧಿಕಾರಿಗಳು, ಸಿಬ್ಬಂದಿ ಶಾಮೀಲಾಗಿರುವ ಬಲವಾದ ಶಂಕೆ ವ್ಯಕ್ತವಾಗಿದ್ದು, ಅಭಿಲೇಖಾಲಯದಿಂದ ಕಡತ ತೆಗೆದು ಅದರಲ್ಲಿನ ದಾಖಲೆಗಳ ಪುಟಗಳನ್ನು ತೆಗೆದು ಅಕ್ರಮ ನಡೆಸಲು ಬೇರೆಯವರಿಂದ ಸಾಧ್ಯವಾಗುವುದಿಲ್ಲ ಎಂಬುದೂ ಖಾತರಿಯಾಗಿದೆ. ಪ್ರಾಧಿಕಾರದಲ್ಲಿ ಕೆಲಸ ಮಾಡುತ್ತಿದ್ದು, ಈಗ ಸ್ವಯಂ ನಿವೃತ್ತಿ ಪಡೆದಿರುವ ಕೆಲವರು ಈ ಅವ್ಯವಹಾರ ದಂಧೆಯ ಪ್ರಮುಖ ರೂವಾರಿಗಳೆಂದು ಹೇಳಲಾಗುತ್ತಿದ್ದು, ಅಂತಹವರ ಮಾಹಿತಿ ಕಲೆ ಹಾಕಲು ಈಗಾಗಲೇ ಒಂದು ತಂಡ ಸದ್ದಿಲ್ಲದೇ ಕೆಲಸ ಮಾಡುತ್ತಿದೆ.

ಹಲವು ಕಡತಗಳೇ ಕಣ್ಮರೆ: ಕೇವಲ ದಾಖಲೆ ಪುಟಗಳಷ್ಟೇ ಅಲ್ಲದೆ, ಹಲವು ಬಡಾವಣೆಗಳಲ್ಲಿ ಹಂಚಿಕೆ ಮಾಡಿರುವ ನಿವೇಶನಗಳಿಗೆ ಸಂಬಂಧಿಸಿದ ಮೂಲ ಕಡತಗಳೇ ಕಣ್ಮರೆಯಾಗಿವೆ. ಲೆಡ್ಜರ್‌ಗಳಲ್ಲಿ ನಿವೇಶನಗಳ ಮಾಹಿತಿ ಬರೆಯಲಾಗಿದೆ. ಆದರೆ ಅವುಗಳಿಗೆ ಸಂಬಂಧಿಸಿದ ದಾಖಲೆಗಳಿರುವ ಕಡತಗಳನ್ನು ಕಳವು ಮಾಡಲಾಗಿದೆ. ಕೆಲ ಪ್ರಕರಣಗಳಲ್ಲಿ ಕಡತ ಮತ್ತು ಲೆಡ್ಜರ್ ಎರಡೂ ನಾಪತ್ತೆ ಆಗಿರುವುದು ತಿಳಿದು ಬಂದಿದೆ.

ಇಂಡೆಕ್ಸ್ ಮಾಡುವಾಗ ಪತ್ತೆ: ಮುಡಾದಲ್ಲಿರುವ ನಿವೇಶನಗಳಿಗೆ ಸಂಬಂಧಪಟ್ಟ ಎಲ್ಲಾ ಕಡತಗಳಲ್ಲಿನ ಪ್ರತಿಯೊಂದು ಪುಟಗಳನ್ನೂ ಸ್ಕ್ಯಾನ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಇಂಡೆಕ್ಸ್ ರೂಪದಲ್ಲಿ ಸಂಗ್ರಹಿಸಿಡಲು ಪ್ರಕ್ರಿಯೆ ನಡೆಸಿದಾಗ ದಾಖಲೆಗಳ ಮೂಲ ಪ್ರತಿಗಳು ನಾಪತ್ತೆಯಾಗಿರುವುದು ತಿಳಿಯಿತು. ಅಂತಹ ಫೈಲ್‌ಗಳನ್ನು ಪ್ರತ್ಯೇಕ ಪಟ್ಟಿ ಮಾಡಿ ಗುರುತಿಸಿಕೊಂಡು ಇದೀಗ ಪರಿಶೀಲನಾ ಕಾರ್ಯಾಚರಣೆ ನಡೆಸಲಾಗುತ್ತಿದೆ.

ವಿವಿಧ ಹಂತದಲ್ಲಿ ಅಕ್ರಮ: ಕಳೆದ 25–30 ವರ್ಷಗಳ ಹಿಂದಿನಿಂದಲೂ ಈ ಅವ್ಯವಹಾರ ನಡೆದಿದ್ದು, ವಿವಿಧ ಹಂತದಲ್ಲಿ ಮಧ್ಯವರ್ತಿಗಳೊಂದಿಗೆ ಶಾಮೀಲಾಗಿ ಬೆಲೆ ಬಾಳುವ ನಿವೇಶನಗಳನ್ನು ಪರಭಾರೆ ಮಾಡಿದ್ದು, ಕೋಟ್ಯಾಂತರ ರೂ. ಅವ್ಯವಹಾರ ನಡೆದಿದೆ ಎಂಬುದೂ ಕಡತಗಳ ಪರಿಶೀಲನೆಯಿಂದ ತಿಳಿಯುತ್ತಿದೆ.

ಇಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೂ ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡವು, ನಾಳೆ (ಭಾನುವಾರ)ಯೂ ಮಧ್ಯಾಹ್ನದವರೆಗೆ ಕಾರ್ಯನಿರ್ವಹಿಸಲಿದೆ.

ಹರಾಜಾದ ನಿವೇಶನಗಳ ಕಡತಗಳೂ ಇಲ್ಲ: ಕಳೆದ 30 ವರ್ಷಗಳಿಂದಲೂ ಮುಡಾದಿಂದ ಹರಾಜು ಪ್ರಕ್ರಿಯೆಯಲ್ಲಿ ಮಾರಾಟ ಮಾಡಿದ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಕಡತ ಮತ್ತು ಲೆಡ್ಜರ್‌ಗಳೂ ಕಣ್ಮರೆಯಾಗಿದ್ದು, ಹಣ ಕಟ್ಟಿ ನಿವೇಶನ ಖರೀದಿಸಿದವರ ಬ್ಯಾಂಕ್ ಚಲನ್, ಹಣ ಪಾವತಿಯಾಗಿದೆ ಎಂದು ನಮೂದಿಸಿರುವ ಲೆಕ್ಕ ಶಾಖೆ ಲೆಡ್ಜರ್‌ಗಳನ್ನೂ ಕಳವು ಮಾಡಿರುವುದು ಕಾರ್ಯಾಚರಣೆ ವೇಳೆ ಬೆಳಕಿಗೆ ಬಂದಿದೆ.


ಇದೂವರೆಗೆ ಹೇಗೆ ತಿಳಿಯಲಿಲ್ಲ?: ಹಲವು ವರ್ಷಗಳಿಂದಲೇ ವಿವಿಧ ಹಂತದಲ್ಲಿ ಈ ಖದೀಮ ಕೆಲಸ ನಡೆದಿದೆ ಎಂದು ತಿಳಿದುಬಂದಿದೆ. ಹಾಗಾದರೆ ಹಲವು ಆಯುಕ್ತರು, ಕಾರ್ಯದರ್ಶಿಗಳು, ಅಧ್ಯಕ್ಷರು ಮುಡಾದಲ್ಲಿ ಸೇವೆ ಸಲ್ಲಿಸಿದ್ದರೂ ದಾಖಲೆ ಪತ್ರಗಳು ಕಣ್ಮರೆಯಾಗಿರುವುದು ತಿಳಿಯಲಿಲ್ಲವೇಕೆ? ಹಿಂದೆಯೇ ಪರಿಶೀಲಿಸಿದ್ದರೆ, ಅದರಲ್ಲಿ ಭಾಗಿಯಾಗಿರುವವರನ್ನು ಪತ್ತೆ ಮಾಡಿ ನಿಜ ಬಣ್ಣ ಬಟಾಬಯಲು ಮಾಡಬಹುದಿತ್ತು. ಆ ಬಗ್ಗೆ ಅವರ ಗಮನಕ್ಕೆ ಬರಲಿಲ್ಲವೇ ಅಥವಾ ಗೊತ್ತಿದ್ದೂ ಸುಮ್ಮನಾಗಿದ್ದರೆ ಅಥವಾ ಕೋಟ್ಯಾಂತರ ರೂ. ಹಣ ಪಡೆದು ಈ ಭ್ರಷ್ಟಕೂಪದಲ್ಲಿ ಅವರೂ ಭಾಗಿಯಾಗಿದ್ದರೆ ಎಂಬ ಅನುಮಾನ ಮೂಡತೊಡಗಿದೆ.

ಬಡಾವಣೆ ನಿವೇಶನಗಳದ್ದೇ ಸಿಂಹಪಾಲು

ದಾಖಲೆಗಳನ್ನೇ ತೆಗೆದು ಹಾಕಿ ಆ ಸ್ಥಳದಲ್ಲಿ ಬೇರೆಯವರ ಹೆಸರಿನ ದಾಖಲಾತಿ ಸೃಷ್ಟಿಸಲಾಗಿದೆ. ಮರಣ ಹೊಂದಿದ, ವಿದೇಶದಲ್ಲಿ ನೆಲೆಸಿರುವ, ಮುಡಾದಿಂದ ಕಳುಹಿಸಿದ ಹಿಂಬರಹ, ತಿಳುವಳಿಕೆ ಪತ್ರ ತಲುಪದೇ ಇರುವವರ ನಿವೇಶನಗಳನ್ನೇ ಗುರಿಯಾಗಿರಿಸಿಕೊಂಡು, ಅದೇ ಹೆಸರಿನ ಬೇರೆ ವ್ಯಕ್ತಿಗಳನ್ನು ಕರೆತಂದು ಖಾತಾ ಕಂದಾಯ ಮಾಡಿಸಿಕೊಟ್ಟಿರುವುದು ವಿಜಯನಗರ 2ನೇ ಹಂತದಲ್ಲಿ ಹೆಚ್ಚು ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಅದೇ ರೀತಿ ವಿಜಯನಗರ 1 ಮತ್ತು 3ನೇ ಹಂತ, ದೇವನೂರು 1ನೇ ಹಂತದ ಬಡಾವಣೆಗಳ ದೊಡ್ಡ ದೊಡ್ಡ ವಿಸ್ತೀರ್ಣದ ಸುವಿಶಾಲದ ರಸ್ತೆಯಲ್ಲಿರುವ ನಿವೇಶನಗಳ ಹಂಚಿಕೆ ಫೈಲ್‌ಗಳಿಂದಲೇ ದಾಖಲೆ ಪತ್ರಗಳ ಪುಟಗಳನ್ನು ಕಿತ್ತು ಅಕ್ರಮವಾಗಿ ಬೇರೆಯವರ ಹೆಸರಿಗೆ ದಾಖಲಾತಿ ಮಾಡಿಕೊಟ್ಟಿರುವುದೂ ಬೆಳಕಿಗೆ ಬರುತ್ತಿದೆ. ಈ ಅವ್ಯವಹಾರದಲ್ಲಿ ಹಲವು ಮುಡಾ ಸಿಬ್ಬಂದಿ ಶಾಮೀಲಾಗಿರುವ ದೂರುಗಳಿದ್ದು, ಅವರಲ್ಲಿ ಅನೇಕರು ನಿವೃತ್ತರಾಗಿದ್ದಾರೆ, ಇಲ್ಲವೇ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಇವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದರೆ ನೂರಾರು ಕೋಟಿಯ ಹಗರಣ ಬೆಳಕಿಗೆ ಬರಲಿದೆ.

“ ನಿವೇಶನಗಳ ಲೆಡ್ಜರ್, ಕಡತಗಳನ್ನು ಡಿಜಿಟಲೈಸ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಸಂರಕ್ಷಿಸಲು ಇಂಡೆಕ್ಸ್ ಮಾಡುವಾಗ ದಾಖಲೆ ಪತ್ರಗಳ ಪುಟಗಳೇ ನಾಪತ್ತೆ ಯಾಗಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಅಂತಹ ಕಡತಗಳನ್ನು ಗುರ್ತಿಸಲಾಗಿತ್ತು. ಇದೀಗ ಪ್ರಾಧಿಕಾರದ ರೆಕಾರ್ಡ್ ರೂಂನಲ್ಲಿರುವ ಎಲ್ಲಾ ಮೂಲ ಕಡತ ಮತ್ತು ಲೆಡ್ಜರ್‌ಗಳನ್ನು ಪರಿಶೀಲಿಸಲು ಕಾರ್ಯದರ್ಶಿಗಳ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಅವರು ರಜಾ ದಿನಗಳಲ್ಲಿಯೂ ಕಾರ್ಯಾಚರಣೆ ಆರಂಭಿಸಿದ್ದಾರೆ. ಸುಮಾರು 300 ಹಾಳೆಗಳನ್ನು ತೆಗೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅದರಿಂದ 600 ನಿವೇ ಶನಗಳ ಪ್ರಮುಖ ದಾಖಲೆ ಪತ್ರಗಳು ಕಣ್ಮರೆಯಾದಂತಾಗಿದೆ. ಪರಿಶೀಲನಾ ಕಾರ್ಯ ಮುಗಿದ ಬಳಿಕ ದೊರೆತ ಮಾಹಿತಿ ಆಧರಿಸಿ ಮುಂದಿನ ಕ್ರಮ ಜರುಗಿಸುತ್ತೇವೆ. – **ಡಾ.ಡಿ.ಬಿ.ನಟೇಶ, ಮುಡಾ ಕಮೀಷ್ನರ್**



“ ಈ ಹಿಂದಿನಿಂದಲೂ ದಾಖಲಾತಿಗಳನ್ನು ಸೃಷ್ಟಿಸಿ ನಿವೇಶನಗಳನ್ನು ಬೇರೆಯವರ ಹೆಸರಿಗೆ ಮಾಡಿಸಿ ಖಾತಾ–ಕಂದಾಯ, ಕ್ರಯಪತ್ರ ನೀಡಲಾಗಿದೆ. ಅಂತಹವರಿಗೆ ನಕ್ಷೆಯನ್ನೂ ಅನುಮೋದಿಸಿ ಅವರು ಮನೆಯನ್ನೂ ಕಟ್ಟಿದ್ದಾರೆ. ಕೆಲವರು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿರುವುದೂ ಕಂಡು ಬಂದಿದೆ. ಈ ಅಕ್ರಮದಲ್ಲಿ ಪ್ರಾಧಿಕಾರದ ಕೆಳ ವರ್ಗದ ಸಿಬ್ಬಂದಿ, ಮೇಲ್ವರ್ಗದ ಅಧಿಕಾರಿಗಳೂ ಶಾಮೀಲಾಗಿರುವುದು ಕಂಡು ಬಂದಿದೆ. ನಾನೇ ಇಂತಹ ಹಲವು ಪ್ರಕರಣ ಪತ್ತೆ ಮಾಡಿ ಕ್ರಿಮಿನಲ್ ಕೇಸ್ ಹಾಕಿಸಿದ್ದೇನೆ. ನಕಲಿ ದಾಖಲೆ ಸೃಷ್ಟಿಸಿ ಭಾರೀ ಅಕ್ರಮವೆಸಗಿರುವುದು ಕಡತಗಳನ್ನು ಡಿಜಿಟಲೈಸ್ ಮಾಡುವಾಗ ತಿಳಿದು ಬಂದಿದ್ದರಿಂದ ಈಗ ನಾವು ತೀವ್ರವಾಗಿ ಪರಿಶೀಲಿಸಿ ಅಂತಹ ಪ್ರಕರಣಗಳನ್ನು ಭೇದಿಸಲು ಮುಂದಾಗಿದ್ದೇವೆ. ಆ ಮೂಲಕ ಅವ್ಯವಹಾರಗಳನ್ನು ಬಹಿರಂಗಪಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಸಾರ್ವಜನಿಕರೂ ಸಹ ತಮ್ಮ ನಿವೇಶನ, ಮನೆಗಳ ದಾಖಲೆ ಪತ್ರಗಳನ್ನು ಪರಿಶೀಲಿಸಿ ಮುಡಾ ಕಚೇರಿಯಲ್ಲಿ ಸರಿಯಾಗಿವೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು ಸೂಕ್ತ.
–ಹೆಚ್.ವಿ.ರಾಜೀವ್, ಮುಡಾ ಅಧ್ಯಕ್ಷ



ಮೈಸೂರಲ್ಲಿ ಹನುಮನ ಉತ್ಸವ ; ಭವ್ಯ ಮೆರವಣಿಗೆ

● ಆಂಜನೇಯಸ್ವಾಮಿಯ ಪಂಚಲೋಹದ ಮೂರ್ತಿ ಜೊತೆಗೆ ಮೆರವಣಿಗೆಯಲ್ಲಿ ಸಾಗಿದ ಹನುಮನ ಬೃಹತ್ ಮೂರ್ತಿಗಳು ● ಕೇಸರಿ ಧ್ವಜದಲ್ಲಿ ರಾರಾಜಿಸಿದ ಆಂಜನೇಯಸ್ವಾಮಿಯ ಚಿತ್ರಗಳು



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮೆರವಣಿಗೆಗೆ ಚಾಲನೆ ನೀಡಿದರು.

ಮೈಸೂರು,ಏ.23(ಪಿಎಂ)– ಬೃಹತ್ ಹನುಮನ ಉತ್ಸವ ಮೂರ್ತಿಗಳು... ಕೇಸರಿ ಧ್ವಜದಲ್ಲಿ ರಾರಾಜಿಸಿದ ಆಂಜನೇಯಸ್ವಾಮಿಯ ಚಿತ್ರಗಳು... ಕೇಸರಿ ಪೇಟ ಧರಿಸಿ ಸಾಗಿದ ಭಕ್ತ ಸಮೂಹ... ವಿಜೃಂಭಿಸಿದ ವಿವಿಧ ಜಾನಪದ ಕಲಾತಂಡಗಳ ಸಾಂಸ್ಕೃತಿಕ ಮೆರಗು...

ಹನುಮ ಜಯಂತ್ಯೋತ್ಸವದ ಅಂಗವಾಗಿ ಕರುನಾಡು ವಿಜಯಸೇನೆಯ ರಾಜ್ಯ ಯುವ ಘಟಕದ ವತಿಯಿಂದ ಶನಿವಾರ ಮಹಾರಾಜ ಕಾಲೇಜು ಮೈದಾನದಿಂದ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಹಮ್ಮಿಕೊಂಡಿದ್ದ ಆಂಜನೇಯಸ್ವಾಮಿಯ ಉತ್ಸವ ಮೂರ್ತಿಗಳ ಭವ್ಯ ಮೆರವಣಿಗೆಯ ವಿಶಿಷ್ಟ ಚಿತ್ರಣವಿದು.

ಚಿನ್ನದ ಬಣ್ಣಲೇಪಿತ ಆಂಜನೇಯಸ್ವಾಮಿಯ ಪಂಚಲೋಹದ ಮೂರ್ತಿ ಸೇರಿದಂತೆ ಐದು ಉತ್ಸವ ಮೂರ್ತಿಗಳು ಮೆರವಣಿಗೆಯಲ್ಲಿ ಮುಖ್ಯ ಆಕರ್ಷಣೆಯಾಗಿದ್ದವು. ಪಂಚಲೋಹದ ಮೂರ್ತಿಯು ಭವ್ಯವಾದ ಮಂಟಪದ ಹಿನ್ನೆಲೆಯನ್ನು ಹೊಂದಿದ್ದ ಸಾರೋಟು ವಾಹನದಲ್ಲಿ ಸಾಗಿದರೆ, ಉಳಿದ ಉತ್ಸವ ಮೂರ್ತಿಗಳು ಟ್ರ್ಯಾಕ್ಟರ್‌ಗಳಲ್ಲಿ ಸಾಗುವ ಮೂಲಕ ಅದ್ದೂರಿತನದ ಮೆರಗು ನೀಡಿದವು.

ಹನುಮನ ವಿವಿಧ ಭಾವಭಂಗಿಯ ಬೃಹತ್ ಮೂರ್ತಿಗಳು ಭಕ್ತರ ಉತ್ಸವವನ್ನು ಇಮ್ಮಡಿಗೊಳಿಸಿತ್ತು. ಮಂಗಳವಾದ್ಯದ ನಿನಾದ, ನಗಾರಿ ಮತ್ತು ತಮಟೆ ಸದ್ದು ರೋಮಾಂಚನ ಮೂಡಿಸಿತು. ಗಾರುಡಿ ಬೊಂಬೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಸಾಂಸ್ಕೃತಿಕ ಸಂಭ್ರಮದ ಮೆರಗು ನೀಡಿದವು.

ಮಹಾರಾಜ ಕಾಲೇಜು ಮೈದಾನದಲ್ಲಿ ಪಂಚಲೋಹದ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಮೈಸೂರು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮೆರವಣಿಗೆಗೆ ಚಾಲನೆ ನೀಡಿದರು. ಇದೇ ವೇಳೆ ಸುದ್ದಿಗಾರರೊಂದಿಗೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ವಿಜಯಸೇನೆ ಸಂಘಟನೆಯು ಬೆಂಗಳೂರಿನಲ್ಲಿ ಮುಖ್ಯ ಕಚೇರಿ ಹೊಂದಿದ್ದರೂ ಇಂದು ಸಾಂಸ್ಕೃತಿಕ ನಗರಿಯಲ್ಲಿ ಹನುಮ ಜಯಂತಿ ಅಂಗವಾಗಿ ಭವ್ಯ ಮೆರವಣಿಗೆ ಹಮ್ಮಿಕೊಂಡಿರುವುದು ಸ್ವಾಗತಾರ್ಹ ಎಂದರು.

ಸಂಘಟನೆಯು ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಹನುಮನ ಉತ್ಸವ ಮೂರ್ತಿ ಮೆರವಣಿಗೆ ನಡೆಸುವ ಉದ್ದೇಶ ಹೊಂದಿದೆ. ಅದರ ಮೊದಲ ಕಾರ್ಯಕ್ರಮವೇ ಇಂದಿನ ಮೆರವಣಿಗೆ. ಸಂಘಟನೆ ವತಿಯಿಂದ 500 ಸರ್ಕಾರಿ ಶಾಲೆಗಳಿಗೆ ಬಣ್ಣದ ಭಾಗ್ಯ ಕಲ್ಪಿಸಲಾಗಿದೆ. ಸಮಾಜ ಸೇವಾ ಕಾರ್ಯದಲ್ಲಿ ಜೊತೆಗೆ ಧಾರ್ಮಿಕ ವಿಚಾರಗಳನ್ನು ಮೈಗೂಡಿಸಿಕೊಂಡು ಸಂಘಟನೆ ಮುನ್ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಹೆಚ್.ಎನ್.ದೀಪಕ್ ಮಾತನಾಡಿ, ನಿಷ್ಠೆ, ಭಕ್ತಿ, ಶಕ್ತಿಗೆ ಹೆಸರು ಆಂಜನೇಯ. ಎಲ್ಲಾ ಜಿಲ್ಲೆಗಳಲ್ಲಿ ಯುವ ಸಮುದಾಯವನ್ನು ಒಗ್ಗೂಡಿಸಬೇಕು. ದುಷ್ಟ ಚಟಗಳಿಂದ ಯುವ ಸಮುದಾಯ ದೂರ ಉಳಿಯಬೇಕೆಂದರೆ ಈ ರೀತಿಯ ಕಾರ್ಯಕ್ರಮಗಳು ಅಗತ್ಯ. ಹಾಗಾಗಿ ಯುವ ಜನತೆಯನ್ನು ಸಂಘಟಿಸುವ ನಿಟ್ಟಿನಲ್ಲಿ ಹನುಮ ಜಯಂತಿಯ ಮೆರವಣಿಗೆ ಹಮ್ಮಿಕೊಂಡಿದ್ದು, ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಈ ಮೆರವಣಿಗೆ ನಡೆಸಲು ಉದ್ದೇಶಿಸಿದ್ದೇವೆ. ಮೊದಲ ಮೆರವಣಿಗೆಯನ್ನು ತಾಯಿ ಚಾಮುಂಡೇಶ್ವರಿ ಆಶೀರ್ವಾದದೊಂದಿಗೆ ಮೈಸೂರಿನಲ್ಲಿಂದು ಪ್ರಾರಂಭಿಸಿದ್ದೇವೆ ಎಂದರು.

ನಟ ಧ್ರುವಸರ್ಜಾ ಭಾಗಿ: ಮೆರವಣಿಗೆಯಲ್ಲಿ ಚಿತ್ರನಟ ಧ್ರುವಸರ್ಜಾ ಭಾಗಿಯಾಗಿದ್ದರು. ಮೆರವಣಿಗೆಯು ರಾಮಸ್ವಾಮಿ ವೃತ್ತ ತಲುಪುವ ವೇಳೆಗೆ ಧ್ರುವಸರ್ಜಾ ಆಗಮಿಸಿದರು. ಈ ವೇಳೆ ಪಟಾಕಿ ಸಿಡಿಸಿ, ನಟನಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ಓಪನ್ ಜೀಪ್ ಹೇರಿ ನಿಂತ ಧ್ರುವಸರ್ಜಾ, ಚಾಮರಾಜ ಜೋಡಿ ರಸ್ತೆಯ ಪಾಠಶಾಲಾ ವೃತ್ತದ (ಬಸವೇಶ್ವರ ವೃತ್ತ) ಸಮೀಪದವರೆಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಗನ್‌ಹೌಸ್ ವೃತ್ತ, ಬೆಂಗಳೂರು–ನೀಲಗಿರಿ ರಸ್ತೆ, ಜಯಚಾಮರಾಜ ಒಡೆಯರ್ ವೃತ್ತದ ಮೂಲಕ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ ತಲುಪಿ, ಮೆರವಣಿಗೆ ಮುಕ್ತಾಯಗೊಂಡಿತು. ಬಳಿಕ ಈ ಆವರಣದಲ್ಲಿ ವಿಶಿಷ್ಟ ವಿನ್ಯಾಸದಲ್ಲಿ ನಿರ್ಮಿಸಿದ್ದ ಮಂಟಪದಲ್ಲಿ ಪಂಚಲೋಹದ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ, ಹೆಸರುಬೇಳೆ ಮತ್ತು ಬಾತ್ (ಲಘು ಉಪಹಾರ) ವಿತರಣೆ ಮಾಡಲಾಯಿತು.

ಮೆರವಣಿಗೆ ಸಾಗಿದ ಮಾರ್ಗಗಳಲ್ಲಿ ಅಲ್ಲಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಪೊಲೀಸರು ಮೆರವಣಿಗೆಗೆ ಸೂಕ್ತ ಭದ್ರತೆ ಕಲ್ಪಿಸಿದ್ದರು. ಗುಂಡ್ಲುಪೇಟೆ ಶಾಸಕ ಸಿ.ಎಸ್.ನಿರಂಜನಕುಮಾರ್, ಬಿಜೆಪಿ ಮುಖಂಡ ವೆಂಕಟರಮಣ ದಾಸ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ನಾಮನಿರ್ದೇಶಿತ ಸದಸ್ಯ ಜಗದೀಶ್, ಸಂಘಟನೆಯ ರಾಜ್ಯ ಯುವ ಘಟಕದ ಅಧ್ಯಕ್ಷ ಆರ್.ಎಸ್.ಮಹೇಶ್ ಸೇರಿದಂತೆ ನೂರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.



ಅರ್ಥಶಾಸ್ತ್ರ ಮತ್ತು ಸಹಕಾರಿ ತಜ್ಞರಾದ ಡಾ.ಎಚ್.ಆರ್. ಕೃಷ್ಣಯ್ಯಗೌಡ ಅವರ ಏಳು ಕೃತಿಗಳು ಶನಿವಾರ ಸಂಜೆ ಲೋಕಾರ್ಪಣೆಗೊಂಡಿತು. ಇದೇ ವೇಳೆ ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ.ಕೆ. ಶಿವಚಿತ್ತಪ್ಪ,ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಡಿ.ವಿ. ಗೋಪಾಲಪ್ಪ, ಅರ್ಥಶಾಸ್ತ್ರ ಮತ್ತು ನಿರ್ವಹಣ ಶಾಸ್ತ್ರ ನಿವೃತ್ತ ಪ್ರಾಧ್ಯಾಪಕ ಡಾ.ಬಿ. ಗೋಪಾಲಸಿಂಗ್, ನಿವೃತ್ತ ಪ್ರಾಧ್ಯಾಪಕ ಡಾ.ಎಂ.ಜಿ. ಬಸವರಾಜ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ಕೆ.ಎನ್. ರೂಪ, ಹಾಸನ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಕೆ.ಡಿ. ಮುರಳೀಧರ,ಡಾ.ಜಿ. ರಂಗನಾಥ್, ಎಲ್. ಪ್ರೇಮಕುಮಾರಿ ಹಾಗೂ ಲೇಖಕರಾದ ಡಾ.ಹೆಚ್.ಆರ್. ಕೃಷ್ಣಯ್ಯಗೌಡ ಚಿತ್ರದಲ್ಲಿ ಕಾಣಬಹುದು

ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಉದ್ಘಾಟನೆ



ಮೈಸೂರು,ಏ.23(ಪಿಎಂ)– ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಅನ್ನು ಬೆಂಗಳೂರಿನ ಮಧುರ್ ಫಾರ್ಮಾ ಅಂಡ್ ರಿಸರ್ಚ್ ಲ್ಯಾಬೋರೇಟರೀಸ್ ಪ್ರೈವೆಟ್ ಲಿಮಿಟೆಡ್‌ನ ನಿರ್ದೇಶಕಿ ಡಾ.ಚಿತ್ರ ಫಡ್ನೀಸ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬದುಕಿನಲ್ಲಿ ಎದುರಾಗುವ ಸವಾಲನ್ನು ಅವಕಾಶವಾಗಿ ಬಳಸಿಕೊಂಡು ಸಾಧನೆ ಮಾಡುವುದು ಮುಖ್ಯ. ನನಗಿರುವ ಚರ್ಮದ ಅನಾರೋಗ್ಯದ ಹಿನ್ನೆಲೆಯಲ್ಲಿ ಹಿಂದೆ ಖಿನ್ನತೆಗೆ ಒಳಗಾಗಿದ್ದೆ. ಆದರೆ ಅದನ್ನು ಆತ್ಮವಿಶ್ವಾಸದಿಂದ ಎದುರಿಸಿ, ಚೇತರಿಸಿಕೊಂಡೆ. ಶೇ.100ರಷ್ಟು ಮಹಿಳಾ ಉದ್ಯೋಗಿಗಳೇ ಇರುವಂತೆ ನಮ್ಮ ಫಾರ್ಮಾ ಕಂಪನಿಗೆ ವಿಶಿಷ್ಟ ರೂಪ ಕೊಡಬೇಕೆಂಬ ಆಕಾಂಕ್ಷೆ ಹೊಂದಿದ್ದೆ. ಆದರೆ ಅದು ಕಷ್ಟ ಸಾಧ್ಯ ಎಂದು ತಿಳಿಸಿದರು.

ಕರ್ನಾಟಕ ಬ್ಯಾಂಕ್‌ನ ಮುಖ್ಯ ಕಚೇರಿಯ (ಮಂಗಳೂರು) ಉಪ ಮಹಾಪ್ರಬಂಧಕರಾದ ಸುಮನಾ ಘಾಟೆ ಮಾತನಾಡಿ, ಈ ಟ್ರಸ್ಟ್‌ನ ಸ್ಥಾಪನೆಯ ಹಿಂದಿನ ಉದ್ದೇಶ ಉದಾತ್ತತೆಯಿಂದ ಕೂಡಿದ್ದು, ಚಿತ್ಪಾವನ ಸಮುದಾಯದ ಮಹಿಳೆಯರ ಶ್ರೇಯೋಭಿವೃದ್ಧಿಯ ಮಹಾತ್ವಾಕಾಂಕ್ಷೆ ಹೊಂದಲಾಗಿದೆ. ಆ ಆಶಯ ಈಡೇರಲಿ ಎಂದು ಶುಭ ಕೋರಿದರು.

ಇದೇ ವೇಳೆ ಹೈನುಗಾರಿಕೆ ಕ್ಷೇತ್ರದಲ್ಲಿನ ಸೇವೆ ಮತ್ತು ಸಾಧನೆ ಗುರುತಿಸಿ ಕೆಆರ್ ನಗರದ ಬಳ್ಳೂರು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸಂಸ್ಥಾಪಕ ಕಾರ್ಯದರ್ಶಿ ರತ್ನಾ ನೀಲಕಂಠ ಅಭ್ಯಂಕರ್ ಅವರನ್ನು ಸನ್ಮಾನಿಸಲಾಯಿತು. ಲೇಖಕಿ ಡಾ.ದೀಪಾ ಫಡ್ಕೆ, ಅಖಿಲ ಕರ್ನಾಟಕ ಚಿತ್ಪಾವನ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಬಾಲಚಂದ್ರ ಡೋಂಗ್ರೆ, ಮೈಸೂರು ಘಟಕದ ಗೌರವಾಧ್ಯಕ್ಷ ಶ್ರೀಕರ ಹೆಬ್ಬಾರ್, ಟ್ರಸ್ಟ್ ಅಧ್ಯಕ್ಷೆ ವೀಣಾ ಡೋಂಗ್ರೆ, ಉಪಾಧ್ಯಕ್ಷೆ ವಿಜಯಾ ವಿಷ್ಣು ಭಟ್ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ಗುಡುಗು ಸಹಿತ ಭಾರೀ ಮಳೆ



ಮೈಸೂರು, ಏ.23– ಮೈಸೂರಲ್ಲಿ ಶನಿವಾರ ರಾತ್ರಿ ಗುಡುಗು ಸಹಿತ ಜೋರು ಮಳೆ ಸುರಿಯಿತು.

ಮೂರ್ನಾಲ್ಕು ದಿನ ಬಿಡುವು ನೀಡಿದ್ದ ಮಳೆ ಇಂದು ರಾತ್ರಿ ಸುಮಾರು 10 ಗಂಟೆ ಸುಮಾರಿಗೆ ಮತ್ತೆ ಆರ್ಭಟಿಸಿತು. ಗಾಳಿ, ಗುಡುಗು ಸಹಿತ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದ ತಗ್ಗು ಪ್ರದೇಶ ಜಲಾವೃತವಾಗಿತ್ತು. ಬನ್ನಿಮಂಟಪ ಎಲ್ಐಸಿ ವೃತ್ತದ ಬಳಿ ಮರವೊಂದು ಧರೆಗುರುಳಿದರೆ, ನಾಚನಹಳ್ಳಿ ಪಾಳ್ಯ ಬ್ರಿಡ್ಜ್ ಬಳಿ ಮರದ ಕೊಂಬೆ ಮುರಿದು ಬಿದ್ದಿತ್ತು. ವಿಷಯ ತಿಳಿದ ನಗರ ಪಾಲಿಕೆ ಅಭಯ ತಂಡದ ರಾತ್ರಿ ಪಾಳಿ ಸಿಬ್ಬಂದಿ ಮರ ಹಾಗೂ ಕೊಂಬೆಗಳ ತೆರವು ಕಾರ್ಯಾಚರಣೆ ನಡೆಸಿದರು. ಸದ್ಯ ಮನೆಗಳಿಗೆ ಮಳೆ ನೀರು ನುಗ್ಗಿರುವ ಬಗ್ಗೆ ವರದಿಯಾಗಿಲ್ಲ. ಮೈಸೂರಿನ ಹಲವೆಡೆ ಏ.19ರಂದು ಭಾರೀ ಮಳೆಯಿಂದ ನಾಲ್ಕೈದು ಮರಗಳು ಮುರಿದು ಬಿದ್ದಿದ್ದಲ್ಲದೆ, ಐಶ್ವರ್ಯನಗರ ಸೇರಿದಂತೆ ತಗ್ಗು ಪ್ರದೇಶದ ಹಲವು ಬಡಾವಣೆಗಳು ಜಲಾವೃತವಾಗಿದ್ದವು.

ನಾಳೆ ಮೈಸೂರಲ್ಲಿ ಮುಕ್ತ ವಿವಿ 17ನೇ ಘಟಿಕೋತ್ಸವ

8,338 ಮಂದಿಗೆ ಸ್ನಾತಕ, ಸ್ನಾತಕೋತ್ತರ ಪದವಿ ಪ್ರದಾನ | 48 ಮಂದಿಗೆ ಚಿನ್ನದ ಪದಕ | 38 ಅಭ್ಯರ್ಥಿಗಳಿಗೆ ನಗದು ಬಹುಮಾನ



ಮೈಸೂರು,ಏ.23(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 17ನೇ ಘಟಿಕೋತ್ಸವ ಏ.25ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಒಟ್ಟು 8338 ಮಂದಿಗೆ ವಿವಿಧ ವಿಷಯಗಳಲ್ಲಿ ಸ್ನಾತಕ ಹಾಗೂ ಸ್ನಾತಕ್ಕೋತ್ತರ ಪದವಿ ಪ್ರದಾನ ಮಾಡಲಾಗುವುದು ಎಂದು ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್ ತಿಳಿಸಿದ್ದಾರೆ.

ಮುಕ್ತ ಗಂಗೋತ್ರಿ ಆವರಣದಲ್ಲಿರುವ ಅತಿಥಿ ಗೃಹದ ಸಭಾಂಗಣದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ವರ್ಷದ ನಂತರ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ನಡೆಸಲಾಗುತ್ತಿದೆ. 2018–19 ಮತ್ತು 2020–21ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಾಗಿ ನೋಂದಣಿ ಮಾಡಿಕೊಂಡಿದ್ದ ವಿದ್ಯಾರ್ಥಿಗಳಿಗೆ 17ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು.

ಮುಕ್ತ ವಿವಿ ಆವರಣದಲ್ಲಿರುವ ಘಟಿಕೋತ್ಸವ ಭವನದಲ್ಲಿ ಏ.25ರಂದು ಬೆಳಗ್ಗೆ 11ಕ್ಕೆ ನಡೆಯಲಿರುವ ಘಟಿಕೋತ್ಸವದಲ್ಲಿ ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಲಿದ್ದಾರೆ. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಎ.ಬಿ.ಬಸವರಾಜು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಸಮಕುಲಾಧಿಪತಿಯೂ ಆದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಸಾಲಿನ ಘಟಿಕೋತ್ಸವ 5,066 ಮಹಿಳೆಯರು ಮತ್ತು 3,272 ಪುರುಷರು ಒಳಗೊಂಡಂತೆ 8,338 ಅಭ್ಯರ್ಥಿಗಳಿಗೆ ವಿವಿಧ ಪದವಿಯನ್ನು ಪ್ರದಾನ ಮಾಡಲಾಗುತ್ತದೆ. ಅಲ್ಲದೆ, 48 ಮಂದಿಗೆ ಚಿನ್ನದ ಪದಕ, 38 ಅಭ್ಯರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತಿದೆ. ಈ ಸಾಲಿನಲ್ಲೂ ಪದವಿ ಪಡೆಯುತ್ತಿರುವವರಲ್ಲಿ ಮಹಿಳೆಯರೇ ಮೇಲುಗೈ ಸಾಧಿಸಿದ್ದಾರೆ ಎಂದು ತಿಳಿಸಿದರು.

31 ಸಂಶೋಧನಾ ಅಭ್ಯರ್ಥಿಗಳು ಪಿಹೆಚ್‌ಡಿ ಪದವಿ ಗಳಿಸಿದ್ದು, ಇದರಲ್ಲಿ 20 ಪುರುಷರು, 11 ಮಹಿಳೆಯರಿದ್ದಾರೆ. ಕನ್ನಡದಲ್ಲಿ 11, ಇತಿಹಾಸ, ಕಾನೂನುಶಾಸ್ತ್ರ, ಶಿಕ್ಷಣದಲ್ಲಿ ತಲಾ ಮೂವರು, ಇಂಗ್ಲಿಷ್, ಹಿಂದಿ, ತೆಲುಗು, ರಾಜ್ಯಶಾಸ್ತ್ರ ಸಮಾಜಶಾಸ್ತ್ರ ವಾಣಿಜ್ಯಶಾಸ್ತ್ರ ತಲಾ ಇಬ್ಬರು ಪಿಎಚ್‌ಡಿ ಪದವಿಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಭಾಷಿಕ ವಿಷಯಗಳ ಸ್ನಾತಕೋತ್ತರ ಪದವಿ ಪಡೆಯುವವರಲ್ಲಿ ಕನ್ನಡ ಐಚ್ಛಿಕ ವಿಷಯದ ವಿದ್ಯಾರ್ಥಿಗಳು ಮೊದಲಿಗರು. ಈ ವಿಷಯದಲ್ಲಿ 877 ಮಹಿಳೆಯರು ಸೇರಿದಂತೆ 1,274 ಅಭ್ಯರ್ಥಿಗಳಿಗೆ ಪದವಿ ನೀಡಲಾಗುತ್ತದೆ. ಇಂಗ್ಲಿಷ್‌ನಲ್ಲಿ 138 ಪುರುಷರು, 285 ಮಹಿಳೆಯರು ಸೇರಿದಂತೆ 423, ಹಿಂದಿ ವಿಷಯದಲ್ಲಿ 22 ಪುರುಷರು, 89 ಮಹಿಳೆಯರು ಸೇರಿದಂತೆ 111, ಸಂಸ್ಕೃತ ಭಾಷೆಯಲ್ಲಿ 32 ಪುರುಷರು, 42 ಮಹಿಳೆಯರು ಸೇರಿದಂತೆ 74 ಮತ್ತು ಉರ್ದು ವಿಷಯದಲ್ಲಿ ಇಬ್ಬರು ಪುರುಷರು, 10 ಮಹಿಳೆಯರು ಸೇರಿದಂತೆ 12 ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಗೆ ಅರ್ಹತೆ ಪಡೆದುಕೊಂಡಿದ್ದಾರೆ. ಸ್ನಾತಕ ಪದವಿಯಾದ ಬಿಎಯಲ್ಲಿ 598 ಮಹಿಳೆಯರು ಸೇರಿದಂತೆ 961 ಅಭ್ಯರ್ಥಿಗಳು ಪದವಿ ಪಡೆಯಲಿದ್ದಾರೆ.


ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪತ್ರಿಕೋದ್ಯಮ, ಸಾರ್ವಜನಿಕ ಆಡಳಿತ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಒಳಗೊಂಡ ಸಮಾಜವಿಜ್ಞಾನ ವಿಷಯದಲ್ಲಿ 1,286 ಪುರುಷರು, 1,490 ಮಹಿಳೆಯರು ಸೇರಿದಂತೆ 2776 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಗುತ್ತದೆ. ವಾಣಿಜ್ಯಶಾಸ್ತ್ರ ವಿಷಯದಲ್ಲಿ 435 ಪುರುಷರು, 1,090 ಮಹಿಳೆಯರು ಸೇರಿದಂತೆ 1,525 ಅಭ್ಯರ್ಥಿಗಳಿಗೆ ಎಂ.ಕಾಂ. ಸ್ನಾತಕೋತ್ತರ ಪದವಿ, 17 ಪುರುಷರು, 40 ಮಹಿಳೆಯರು ಸೇರಿದಂತೆ 57 ವಿದ್ಯಾರ್ಥಿಗಳಿಗೆ ಬಿ.ಕಾಂ. ಸ್ನಾತಕ ಪದವಿಯನ್ನು ವಿತರಿಸಲಾಗುತ್ತದೆ.

86 ಪುರುಷರು, 66 ಮಹಿಳೆಯರು ಸೇರಿ 152 ಅಭ್ಯರ್ಥಿಗಳು ಎಂಬಿಎ ಪದವಿಗೆ ಭಾಜನರಾಗಿದ್ದಾರೆ. 241 ಮಹಿಳೆಯರು ಸೇರಿದಂತೆ 467 ಅಭ್ಯರ್ಥಿಗಳು ಬಿಎಡ್ ಪದವಿಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಅಂತೆಯೇ ವಿಜ್ಞಾನ, ಗ್ರಂಥಾಲಯ, ಮಾಹಿತಿ ವಿಜ್ಞಾನ ವಿಷಯದಲ್ಲಿ 238 ಮಹಿಳೆಯರು ಸೇರಿದಂತೆ 506 ಅಭ್ಯರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಲಭಿಸಿದೆ. 6,334 ಮಹಿಳೆಯರು ಸೇರಿದಂತೆ 10,744 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ 8,338 ಜನರು(5,066 ಮಹಿಳೆಯರು) ತೇರ್ಗಡೆಯಾಗಿದ್ದಾರೆ. ಇದರಲ್ಲಿ ಶೇ.73ರಷ್ಟು ಪುರುಷರು, ಶೇ.72ರಷ್ಟು ಮಹಿಳೆಯರು ಉತ್ತೀರ್ಣರಾಗಿದ್ದಾರೆ ಎಂದು ವಿವರಿಸಿದರು. ಸುದ್ಧಿಗೋಷ್ಠಿಯಲ್ಲಿ ಮುಕ್ತ ವಿವಿ ಕುಲಸಚಿವರಾದ ಡಾ.ಕೆ.ಬಿ.ಪ್ರವೀಣ, ಡಾ.ಆರ್. ರಾಜಣ್ಣ ಹಾಗೂ ಇನ್ನಿತರರು ಇದ್ದರು.


ಮುಕ್ತ ವಿವಿಯಿಂದ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್

ಎವಿಎಸ್ ಮೂರ್ತಿ, ಈ.ಎಸ್. ಚಕ್ರವರ್ತಿ, ಆನಂದ್ ಸಂಕೇಶ್ವರ್ ಗೌರವ ಡಾಕ್ಟರೇಟ್‌ಗೆ ಭಾಜನರು

ಮೈಸೂರು,ಏ.23(ಎಂಟಿವೈ)– ಮುಕ್ತ ವಿವಿಯ ಘಟಿಕೋತ್ಸವದಲ್ಲಿ ಆರ್‌ವಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎ.ವಿ.ಎಸ್.ಮೂರ್ತಿ, ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸೇವಾ ಸಂಸ್ಥೆಯ ಉಪಾಧ್ಯಕ್ಷ ಈ.ಎಸ್.ಚಕ್ರವರ್ತಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆನಂದ್ ಸಂಕೇಶ್ವರ್ ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಲಾಗುತ್ತಿದೆ ಎಂದು ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್ ತಿಳಿಸಿದ್ದಾರೆ.



ಎ.ವಿ.ಎಸ್.ಮೂರ್ತಿ,



ಈ.ಎಸ್. ಚಕ್ರವರ್ತಿ



ಆನಂದ್ ಸಂಕೇಶ್ವರ್

17ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಲು ಮುಕ್ತ ವಿವಿಯ ತಜ್ಞರ ಸಮಿತಿ ನಿಯಮಾವಳಿ ಅನುಸರಿಸಿ ಐವರ ಹೆಸರನ್ನು ಪಟ್ಟಿ ಮಾಡಿ ರಾಜ್ಯಪಾಲರಿಗೆ ಕಳುಹಿಸಿತ್ತು. ಆದರೆ ರಾಜ್ಯಪಾಲರು ಮೂವರಿಗೆ ಮಾತ್ರ ಗೌರವ ಡಾಕ್ಟರೇಟ್ ಪದವಿ ನೀಡಲು ಸಮ್ಮತಿಸಿದ್ದಾರೆ ಎಂದರು.

ಏ.25ರಂದು ಬೆಳಗ್ಗೆ 11ಕ್ಕೆ ನಡೆಯಲಿರುವ ಘಟಿಕೋತ್ಸವ ಸಮಾರಂಭದಲ್ಲಿ ಈ ಮೂವರಿಗೆ ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಈ ಪದವಿಯನ್ನು ಪ್ರದಾನ ಮಾಡಲಿದ್ದಾರೆ. ಎ.ವಿ.ಎಸ್.ಮೂರ್ತಿ ಅವರು ಶಿಕ್ಷಣ ತಜ್ಞರು, ಉತ್ತಮ ಆಡಳಿತಗಾರರು. ಆರ್.ವಿ.ವಿಶ್ವವಿದ್ಯಾಲಯದ ಸಮಕುಲಾಧಿಪತಿಯಾಗಿ ಕಾರ್ಯನಿರ್ವಹಿಸಿರುವ ಇವರು, ಅನೇಕ ಶಿಕ್ಷಣ ಸಂಸ್ಥೆಯ ಕುಲಪತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಆರ್‌ವಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ.

ಈ.ಎಸ್.ಚಕ್ರವರ್ತಿ ಕೂಡ ಉತ್ತಮ ಆಡಳಿತಗಾರರು ಮತ್ತು ಶಿಕ್ಷಣತಜ್ಞರು. ಹಾಲಿ ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸೇವಾ ಸಂಸ್ಥೆಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆನಂದ ಸಂಕೇಶ್ವರ್ ಪತ್ರಿಕೋದ್ಯಮ, ಟಿವಿ ಮಾಧ್ಯಮ ಮತ್ತು ಲಾಜಿಸ್ಟಿಕ್ ಸೇವಾ ವಲಯದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಈ ಪದವಿ ಪ್ರದಾನ ಮಾಡಲಾಗುತ್ತಿದ್ದು, ಯುವ ಉದ್ಯಮದಾರರಾಗಿ ಸಾವಿರಾರು ಜನರಿಗೆ ಉದ್ಯೋಗ ಅವಕಾಶ ನೀಡಿ ಸಮಾಜದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಎಂದು ವಿವರಿಸಿದರು.

ಕೂಸಣ್ಣನ ಅಪ್ಪನೊಬ್ಬ ದನಗಾಹಿ. ಊಳಿಗಕ್ಕಾಗಿ ಯಾರೋ ಜಮೀನ್ದಾರರ ಮನೆಯಲ್ಲಿ ಆಳು ಮಗನಾಗಿದ್ದ. ದಿನನಿತ್ಯ ಅವರ ರಾಸುಗಳ ಹೊಡೆದುಕೊಂಡು ಹೋಗಿ ಕಾಡಿನಲ್ಲಿ ಮೇಯಿಸಿಕೊಂಡು ಸಂಜೆ ಕೊಟ್ಟಿಗೆಗೆ ಕರೆತರಬೇಕಿತ್ತು. ಅದು ದಟ್ಟ ಕಾನನವಾದ್ದರಿಂದ ಅಲ್ಲಿ ಹುಲಿಯ ಕಾಟವಿತ್ತು. ದನ ಗಾಹಿಗಳು ಈ ನಿಟ್ಟಿನಲ್ಲಿ ತುಸು ಎಚ್ಚರ ತಪ್ಪಿದರೂ ರಾಸುಗಳು ಹುಲಿಯ ಬಾಯಿಗೆ ಆಹಾರವಾಗುತ್ತಿದ್ದವು. ಹೀಗೆ ರುಚಿ ಕಂಡ ಹುಲಿ ದನಗಾಹಿಗಳ ಲೆಕ್ಕಿಸದೆ ರಾಸುಗಳ ಮೇಲೆ ಎರಿ ಬರಲು, ಈ ದನಗಾಹಿಗಳು ಅಸಹಾಯಕರಾಗಿರುತ್ತಿದ್ದರು.

ಶಬ್ದ ನಿಶ್ಯಬ್ಧವಾದೊಡೆ...!

ಮೈಸೂರು ಮಿತ್ರ 43ನೇ ವರ್ಷ

ಕೂಸಣ್ಣ ಆದಾಗಲೇ ಒಂದು ಆವರ್ತಿ ನಿದ್ದೆ ಮಾಡಿ ಕಣ್ಣು ಬಿಟ್ಟಿದ್ದ. ತೀರ ಕತ್ತಲಿದ್ದ ಕಾರಣ ಅವನ ಕಣ್ಣು ಅದಕ್ಕೆ ಹೊಂದಿಕೊಳ್ಳಲು ಸಮಯವಿಡಿದಿತ್ತು. ಕಣ್ಣುಗಳಲ್ಲಿ ವಯೋಸಹಜ ಪೊರೆ ಆವರಿಸಿದ್ದು, ಬೆಳಗಿನಲ್ಲಿ ಮಂಜು ಮಂಜಾಗಿ ಕಂಡರು ಇರುಳಲ್ಲಿ ಈ ಕಷ್ಟವಿರಲಿಲ್ಲ. ಮಂಚದಿಂದ ಮೆಲ್ಲಗೆ ಎದ್ದು ಕುಳಿತ. ಕೆಮ್ಮು ಅವನ ಆತ್ಮ ಸಂಗಾತಿಯಂತೆ ಬಿಟ್ಟು ಹೋಗದೆ ಬಾಧೆ ಕೊಡುತ್ತಿತ್ತು. ಇದರ ದೆಸೆಯಿಂದ ಮಂಚದ ಪಕ್ಕಕ್ಕೆ ಇರಿಸಿದ್ದ ಚೊಂಬು ಕಾಣಲು ಅದನ್ನು ಎತ್ತಿಕೊಂಡು ಒಣಗಿದ ಗಂಟಲ ತೇವ ಮಾಡಿ ಕೆಮ್ಮಿನಿಂದ ಸುಧಾರಿಸಿಕೊಂಡ. ಇದರಿಂದ ಜೀವಕ್ಕೆ ತುಸು ಸಮಾಧಾನವೆನಿಸಿ ಈಗಷ್ಟೇ ನೀರು ಕುಡಿದ ಕಾರಣ ತಕ್ಷಣ ಮಲಗದೆ ಕುಳಿತಿದ್ದ ಕೂಸಣ್ಣ ಹಾಗೇ ಅತ್ತಿತ್ತ ದೃಷ್ಟಿ ಹರಿಸಿದ. ಯಾವುದೋ ಆಕೃತಿಯೊಂದು ನಿಚ್ಚಳವಾಯಿತು. ಅದನ್ನೆ ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಲು ಆ ಆಕೃತಿ ಕುಳಿತು ತಲೆ ಮೇಲೆ ಕೈ ಹೊತ್ತಿತ್ತು ಕೂಸಣ್ಣನೇ ಮಾತಿಗೆ ಮುಂದಾದ 'ಯಾರು ದೇವ್ರಾಜ್ನ ಕುಂತಿರೋದು?' ಎಂದು ಕೇಳಲು ಅಲ್ಲಿಯ ತನಕ ತಟಸ್ಥವಾಗಿದ್ದ ಆಕೃತಿ ಚಲನೆ ಪಡೆದಂತೆ ಕುಳಿತ ತನ್ನ ಭಂಗಿ ಬದಲಿಸುತ್ತ 'ಹೂ ಕಾಪ್ಪ ಯಾಕೆ ನಿದ್ದೆ ಬಂದಿಲ್ವಾ?' ಎಂದರೆ, ಕೂಸಣ್ಣ ಕೆಮ್ಮುತ್ತ 'ನನ್ನದು ಒಂದು ನಿದ್ದೆ ಆಯ್ತು. ನೀನ್ಯಾಕೆ ಈ ರಾತ್ರೀಲಿ ತಲೆ ಮೇಲೆ ಕೈ ಹೊತ್ತು ಕುಂತಿದ್ಯಾಪ್ಪ' ಎಂದು ಕೇಳಿದ. ದೇವರಾಜನಿಗೆ ಈ ಪ್ರಶ್ನೆಗೆ ತಕ್ಷಣಕ್ಕೆ ಉತ್ತರ ತಿಳಿಯಲಿಲ್ಲವಾದರೂ ಉತ್ತರಿಸದೆ ಇರಬಾರದೆಂಬಂತೆ 'ಯಾಕೋ ನಿದ್ದೆನೇ ಬರವಲ್ಲೊದು' ಎಂದು ಕ್ಷೀಣವಾಗಿ ತನ್ನ ಮನ ಕೊರೆಯುತ್ತಿದ್ದ ಬೇಸರವ ಹೊರದೂಡಿದ. ಕೂಸಣ್ಣನಿಗೆ ಮಗನ ಈ ಧನಿಯ ಅರ್ಥ ತಿಳಿಯಲು 'ಈಚೀಗೆ ಒಳ್ಳೆ ಮಂಕು ಬಡಿದವರ್ಥಂಗೆ ಇರ್ತಿಯಲ್ಲೋ ಏನಾಯ್ತೋ ಮಗಾ' ಎಂದರೆ ದೇವರಾಜ ಅಷ್ಟೇ ಚುಟುಕಾಗಿ 'ಆಗಾಕೆ ಇನ್ನೇನು ಇದ್ದಪ್ಪಾ ಎಲ್ಲಾ ಮುಗಿದ್ಹಂಗೆ. ಕೂಸಣ್ಣ 'ಏನೋ ನಿನ್ನ ಮಾತು' ಎಂದು ಆತಂಕದಲ್ಲಿ ಕೇಳಿದ. ದೇವರಾಜ ಮೌನವಾಗಿ ಯೋಚಿಸಿದವನು 'ಈ ಪೇಪರ್‌ನವ್ರೋ, ಟಿ.ವಿ.ಯವ್ರಲ್ಲಾ ದೊಡ್ಡವರ ಜತೆ ಸೇರ್ಕಂಡು ಬಂದು ನಮ್ಮ ಕ್ವಾರೆಗಳೆಲ್ಲಾ ಮುಚ್ಚಿಸೋವ್ರೆ' ಎಂದು ದೀರ್ಘ ಉಸಿರೆಳೆದು ಬಿಟ್ಟು ನಿರಾಳನಾಗಲು ಪ್ರಯತ್ನಿಸುತ್ತಿದ್ದ.

ಮಗನ ಮಾತುಗಳು ಕೂಸಣ್ಣನ ಕಿವಿಗೆ ಚೆನ್ನಾಗೆ ಕೇಳಿಸಿದವಾದರು ಆ ಕ್ಷಣಕ್ಕೆ ಅವನು ಏನೊಂದು ಪ್ರತಿಕ್ರಿಯಿಸಲಿಲ್ಲ. ಕುಳಿತಲ್ಲೇ ಅವನ ತಲೆಯಲ್ಲಿ ಗೋಜಲಾಗಿ ಹಲವು ಸಂಗತಿಗಳು ಹೊಳೆದವು. ಈ ಊರಿನ ಸುತ್ತಲಿನ ಅವ್ಯಾಹತ ಕಲ್ಲು ಗಣಿಗಾರಿಕೆ ಹಾಗೂ ಅದರ ಅನಾಹುತಗಳು ಇವನಿಗೆ ತಿಳಿಯದ ಸುದ್ದಿಯೇನಲ್ಲ. ಒಂದು ಕಾಲಕ್ಕೆ ಅವನು ನೋಡಿದ್ದ ಕಲ್ಲುಗುಡ್ಡದ ರಾಶಿಗಳೆಲ್ಲವು ಈಗ ಆಳಾದ ಕಣಿವೆಗಳಾಗಿ ಮಾರ್ಪಟ್ಟಿದ್ದವು. ಹಿಂದೆ ಹಗಲಿನಲ್ಲೂ ಇತ್ತ ಕಡೆ ತಲೆ ಹಾಕಲು ಹೆದರುತ್ತಿದ್ದ ಜನಗಳು ಇಂದು ಯಾವ ನಿರ್ಭೀತಿಯಿಲ್ಲದೆ ಅದನ್ನು ಅಗೆದು, ಬಗೆದವರೆ ಅದರ ಹೊಟ್ಟೆಯ ಆಳಕ್ಕೆ ಇಳಿದಿದ್ದರು. ಈಗ ಎಲ್ಲಿ ನೋಡಿದರು ಕಲ್ಲು, ಮಣ್ಣು, ಧೂಳಿನ ರಾಶಿ. ಹೊತ್ತುಗೊತ್ತಿಲ್ಲದೆ ಕಾಯಕವನ್ನೆ ಮಂತ್ರ ಮಾಡಿಕೊಂಡ ಕ್ರಷರ್, ಹಿಟಾಚಿ, ಇತರೆ ಯಂತ್ರಗಳು, ಆಗಾಗ ಡೈನೋಮೈಟ್, ಜಿಲೆಟಿನ್ ಇತರೆ ಸ್ಫೋಟಕಗಳ ಬಳಸಿದ ಎದೆ ಝಲ್ ಎನಿಸುವ ಸದ್ದು.

ಮೈಗೆ ಬೆಂಕಿ ಹಚ್ಚಿಕೊಂಡಂತೆ ಅತ್ತಿಂದಿತ್ತ ಓಡಾಡುತ್ತಿದ್ದ ಟಿಪ್ಪರ್, ಟ್ರಾಕ್ಟರ್‌ಗಳು ಅವು ಸಾಗುತ್ತಿದ್ದ ರಸ್ತೆಗಳಲ್ಲಿ ಏಳುತ್ತಿದ್ದ ಧೂಳು ಮಾಡುವ ಅವಾಂತರ, ಈ ಕಲುಷಿತ ವಾತಾವರಣದಿಂದ ಮಕ್ಕಳು, ವಯಸ್ಸಾದವರಲ್ಲಿ ಕೆಮ್ಮು, ಕಣ್ಣು ಉರಿ ಇತರೆ ದೇಹಾರೋಗ್ಯದ ಸಮಸ್ಯೆಗಳು, ಸ್ಫೋಟಕಗಳು ಸಿಡಿದು ಕಿ.ಮೀ. ತನಕ ಎಬ್ಬಿಸುತ್ತಿದ್ದ ಆರ್ಭಟಕ್ಕೆ ಬಿರುಕು ಗೊಂಡ ಊರಿನ ಕೆಲ ಮನೆಯ ಗೋಡೆಗಳು, ಇದರಿಂದ ಹಣೆ ಚಚ್ಚಿಕೊಂಡು 'ನಮ್ಮ ಮನೆ ಹಾಳು ಮಾಡ್ತಿದ್ದೀರಲ್ಲೋ ಮುಂಡೇ ಮಕ್ಕಳ್' ಎಂಬ ಹೆಂಗಸರ ಆರ್ತನಾದ ಇವೆಲ್ಲವನ್ನು ಕೇಳಿಸಿಕೊಂಡು ಕೂಸಣ್ಣ ಸಾಕಾಗಿದ್ದ. ಇಷ್ಟೆಲ್ಲಾ ಕಂಡು, ಕೇಳಿ ಮಲಗಿದರೆ ರಾತ್ರಿ ನಿದ್ದೆಯಿಲ್ಲ. ಕಾಡುವ ಕೆಮ್ಮು ಒಂದೆಡೆಯಾದರೆ, ಟಿಪ್ಪರ್‌ಗಳ ರಾತ್ರಿ ಪಾಳಿನ ಸದ್ದು ಇನ್ನೊಂದೆಡೆ. ಅವುಗಳ ಓಡಾಟಕ್ಕೆ ಊರಿನ ಡಾಂಬರ್ ರಸ್ತೆ ಪೂರಾ ಮೈ ಸುಲಿದು ಕೊಂಡಿತ್ತು. ಟಿಪ್ಪರ್‌ಗಳ ಭರ್ತಿ ಲೋಡಿಗೆ ಸಣ್ಣ ಹಳ್ಳಗಳೆಲ್ಲ ಹೊಂಡಗಳಾಗಿ ನಿಂತಿದ್ದವು. ಇನ್ನೂ ರಾತ್ರಿಯ ನೀರವ ಮೌನದ ಎದೆ ಸೀಳುವಂತೆ ಈ ಟಿಪ್ಪರ್‌ಗಳು ಹೊರಲಾರದ ಭಾರ ಹೊತ್ತು ಒಂದೊಂದಾಗಿ ಕೂಸಣ್ಣನ ಮನೆಯ ದಾಟುತ್ತಿದ್ದರೆ ಆ ಹಿಂಸೆಗೆ ಕೊನೆಯಿರಲಿಲ್ಲ. ಭರ್ತಿ ಗಾಡಿಗಳದ್ದೂ ಈ ಕತೆಯಾದರೆ ಹಿಂತಿರುಗುವ ಖಾಲಿ ಗಾಡಿಗಳದ್ದು ಇನ್ನೊಂದು ಕತೆ. ಹಳ್ಳಕೊಳ್ಳಗಳಲ್ಲಿ ಹತ್ತಿ, ಇಳಿಯುವಾಗ ಲೋಡಿಲ್ಲದ ದಡಕಪಡಕ ಸದ್ದು ಎಂಥಾ ಯಮ ನಿದ್ದೆಯನ್ನು ಒದ್ದು ಓಡಿಸಿ ಬಿಡುತ್ತಿತ್ತು.

ಇನ್ನೂ ಮಧ್ಯಾಹ್ನ ಮಲಗುವುದೆಂದರೆ ಏನೇನೂ ಚಿಂತೆಯಿಂದ ನಿದ್ದೆ ಕಣ್ಣಿಗೆ ಹತ್ತುತ್ತಿರಲಿಲ್ಲ. ಹಾಗೆ ಕೆಮ್ಮಿಗೆ ಎಷ್ಟೇ ಔಷಧಿ ಉಪಚಾರ ಮಾಡಿದ್ರೂ ಅದು ನಿರಂತರ ಧೂಳಿನ ಪರಿಣಾಮ ಸಂಪೂರ್ಣ ತೊಲಗಿರಲಿಲ್ಲ. ಇದು ಬಹುತೇಕ ಈ ಕ್ವಾರೆಯ ಸುತ್ತಮುತ್ತಲಿನ ಮನೆಗಳ ಹಿರಿಯರು, ಮಕ್ಕಳ ಸಾಮಾನ್ಯ ಬವಣೆಯಾಗಿತ್ತು. ಕೆಲವರಷ್ಟೇ ಇದರ ವಿರುದ್ಧ ಧನಿ ಎರಿಸಿ, ಹೋರಾಟಕ್ಕೆ ಇಳಿದರು ಉಪಯೋಗವಾಗಿರಲಿಲ್ಲ. ಕಾರಣ ಊರಿನಲ್ಲಿ ಹಲವರು ಜೀವನ ನಿರ್ವಹಣೆಯ ಆದಾಯಕ್ಕೆ ಈ ಕ್ವಾರೆಯ ಕೆಲಸಗಳನ್ನೆ ಅವಲಂಬಿಸಿದ್ದರು. ಈ ಕ್ವಾರೆಯ ಮಾಲೀಕರು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ದಕ್ಕಿಸಿಕೊಳ್ಳುವಷ್ಟು ಪಟುಭದ್ರರಾಗಿದ್ದರು. ಕೂಸಣ್ಣನ ಮಗನು ಕ್ವಾರೆಯಲ್ಲಿ ಟಿಪ್ಪರ್ ಓಡಿಸುವ ಡ್ರೈವರ್ ಆಗಿದ್ದ. ಕೂಸಣ್ಣನಿಗೆ ಇದೊಂದು ಸಮಾಧಾನವಿತ್ತು. ಇದ್ದೊಬ್ಬ ಮಗ ಆ ಕ್ವಾರೆಯಲ್ಲೇ ಆಡಿ, ಬೆಳದನಾದರು ತನ್ನಂತೆ ಕೂಲಿ ಕೆಲಸಕ್ಕೆ ಇಳಿಯದೆ ಉಪಾಯವಾಗಿ ಡ್ರೈವಿಂಗ್ ಕಲಿತು ಬದುಕು ಕಂಡುಕೊಂಡಿದ್ದ. ಕೂಸಣ್ಣ ಎಣಿಸಿದಂತೆ ಬಂಡೆ ಒಡೆಯುವುದು, ಕೊರೆಯುವುದು ಅವನ ತಲೆಗೆ ನಿಂತಿತ್ತು ಈಗೆಲ್ಲಾ ಯಂತ್ರಗಳು ಆ ಜಾಗವನ್ನು ಆವರಿಸಿ ತಮ್ಮ ಅಸ್ತಿತ್ವ ಸ್ಥಾಪಿಸಿದ್ದವು. ಈ ಬೆಳವಣಿಗೆಗೆ ಕೂಸಣ್ಣ 'ಈ ನರ ಮನಸ್ನ ಬಾಳಾಟ ನೋಡು ತಾನು ತಂದ ಬಡಿಗೆಲಿ ತಾನೇ ಹೊಡೆತಾ ತಿನ್ನತ್ತಾವ್ನೇ' ಎಂದು ವಿಷಾದ ವ್ಯಕ್ತಪಡಿಸುತ್ತಿದ್ದ.

ಈ ದಿನಗಳ ಕಲ್ಲು ಗಣಿಗಾರಿಕೆಯಿಂದ ಅವನಿಗೆ ಚೂರೂ ಸಮಾಧಾನವಿರಲಿಲ್ಲ. ತಾನು ಇಳಿವಯಸ್ಸಿನಲ್ಲಿ ಕೇಳಬೇಕಾಗಿರುವ ಈ ದೊಡ್ಡ ಸದ್ದು, ಗದ್ದಲಗಳೆಲ್ಲವು ನಿದ್ದೆಯಲ್ಲಿ ಬೆಚ್ಚುವಂತೆ ಮಾಡುವಾಗ ಇದೆಲ್ಲಾ ಎಲ್ಲಿಯಾದರು ಅಡಗಿ ಹೋದರೆ ಸಾಕೆನಿಸಿತ್ತು. ಕೂಸಣ್ಣನ ಪಾಲಿಗೆ ನಿದ್ರೆಯೂ, ನೆಮ್ಮದಿಯೂ ಇಲ್ಲದಂತೆ ಮಾಡಿರುವ ಈ ಕ್ವಾರೆಗಳು ಯಾವುದಾದರು ಜಲಪ್ರಳಯ ಬಂದು ಮುಳಗಿ ಹೋಗಬಾರದೆ ಎನಿಸುವಾಗ ಅವನ ಸ್ವಪ್ನದಲ್ಲಿ ಅಂತಾದ್ದೆ ಕನಸುಗಳು ಬೀಳುತ್ತಿದ್ದವು. ದೂರದ ಕ್ವಾರೆಯೊಂದರಲ್ಲಿ ತೀವ್ರ ಸ್ಫೋಟದಿಂದ ಗುಡ್ಡ ಕುಸಿದು ಕೆಲಸಗಾರರು ಸತ್ತಿದ್ದರ ಪರಿಣಾಮ ಭಾರೀ ಸುದ್ದಿಯಾಗಿ ಅದರ ಹಿನ್ನೆಲೆಯಲ್ಲಿ ಪತ್ರಿಕೆ, ಟಿ.ವಿಯಲ್ಲಿ ಚಾಲ್ತಿಯಲ್ಲಿರುವ ಇತರೆ ಅಕ್ರಮ ಕಲ್ಲು ಗಣಿಗಾರಿಕೆಗಳ ಬಗ್ಗೆ ನಿರಂತರ ವರದಿಗಳು ಬಂದು ಇವುಗಳ ನಿಲ್ಲಿಸುವ ಕುರಿತು ಚರ್ಚೆಗಳು ಶುರುವಾದಾಗ 'ಮೊದ್ಲು ಇದೊಂದು ಮಾಡಿ ಪುಣ್ಯ ಕಟ್ಕೊಳ್ರಪ್ಪಾ ನಾ ನೆಮ್ಮದಿಯಾಗಿ ನಿದ್ದೆ ಮಾಡಿ ಸಾಯ್ತೀನಿ' ಎಂದು ಕೈ ಮುಗಿಯುತ್ತಿದ್ದ.

ಕೂಸಣ್ಣ ದೃಷ್ಟಿಯನ್ನು ಹಾಗೆ ಕುಳಿತಲ್ಲೇ ಮನೆಯ ಗೋಡೆಗಳ ಕಡೆ ಹರಿಸಿದ. ಅಲ್ಲೆಲ್ಲಾ ಬಿರುಕುಗಳು ದೊಡ್ಡದಾಗೆ ಮೂಡಿ ಕೈಗಳಲ್ಲೆ ಮರಳು, ಸಿಮೆಂಟ್ ಕಲಸಿ ಅವುಗಳ ಬಾಯಿಗೆ ತುಂಬಿದ ಕುರುಹುಗಳು ಎದ್ದು ಕಾಣುತ್ತಿತ್ತು. ಅದಕ್ಕೆ ಬಣ್ಣ, ಸುಣ್ಣದ ಪ್ರೋಕ್ಷಣೆಯಾಗದ ಕಾರಣ ಈ ಬಿರುಕುಗಳು ಕೂಸಣ್ಣನಿಗೆ ಪ್ರತಿ ಸಾರಿ ಕಾಣುವಾಗಲೂ ಏನೇನೋ ಅರ್ಥಗಳ ಹೊಳೆಸುತ್ತಿದ್ದವು. ಇನ್ನೂ ಈ ಬಿರುಕಿಗೆ ಮಂಗಳೂರು ಹೆಂಚಿನ ಮನೆಯ ಸೂರುಗಳು ಸಡಿಲಗೊಂಡು ಬೆಳಗಿನ ವೇಳೆ ಬೆಳಕು ಹೆಚ್ಚಾಗೆ ಪ್ರವೇಶಿಸಿದರೆ ಮಳೆಗಾಲದಲ್ಲಿ ನೀರು ಲೊಳಲೊಳನೆ ಸರಾಗವಾಗಿ ನುಗ್ಗಿ ಬರಲೂ ಅನುಕೂಲವಾಗಿತ್ತು. ಗೋಡೆಗೊಂದು ಮೊಳೆ ಹೊಡೆಯಲು ಹಿಂಜರಿಕೆಯಾಗುವಂತೆ ಬಿರುಕುಗಳಿದ್ದ ಮನೆಯನ್ನು ಕೂಸಣ್ಣ ತನ್ನ ದೃಷ್ಟಿಗೆ ಆಗುವಷ್ಟು ಪರೀಕ್ಷಿಸುತ್ತಿದ್ದ. ಅವನ ಪಾಲಿಗೆ ಸ್ವಂತವೆಂದು ಹೇಳಿಕೊಳ್ಳಲಿದ್ದ ಏಕೈಕ ಆಸ್ತಿಯಾಗಿ ಈ ಮನೆಯಿತ್ತು. ಅಸಲಿಗೆ ಕೂಸಣ್ಣ ಈ ಸೀಮೆಯವನಲ್ಲ. ಅವನು ಅದ್ಯಾವುದೋ ಕಾಡ ಸೆರಗಿನವನು. ಅಲ್ಲಿಂದ ಇಲ್ಲಿಗೆ ಹೊರಟು ಬಂದ ಅವನ ಮಹಾಯಾನವೇ ಅಚ್ಚರಿ ತರುವಂತದ್ದು.

ಕೂಸಣ್ಣನ ಅಪ್ಪನೊಬ್ಬ ದನಗಾಹಿ. ಊಳಿಗಕ್ಕಾಗಿ ಯಾರೋ ಜಮೀನ್ದಾರರ ಮನೆಯಲ್ಲಿ ಆಳು ಮಗನಾಗಿದ್ದ. ದಿನನಿತ್ಯ ಅವರ ರಾಸುಗಳ ಹೊಡೆದುಕೊಂಡು ಹೋಗಿ ಕಾಡಿನಲ್ಲಿ ಮೇಯಿಸಿಕೊಂಡು ಸಂಜೆ ಕೊಟ್ಟಿಗೆಗೆ ಕರೆತರಬೇಕಿತ್ತು. ಅದು ದಟ್ಟ ಕಾನನವಾದ್ದರಿಂದ ಅಲ್ಲಿ ಹುಲಿಯ ಕಾಟವಿತ್ತು. ದನಗಾಹಿಗಳು ಈ ನಿಟ್ಟಿನಲ್ಲಿ ತುಸು ಎಚ್ಚರ ತಪ್ಪಿದರೂ ರಾಸುಗಳು ಹುಲಿಯ ಬಾಯಿಗೆ ಆಹಾರವಾಗುತ್ತಿದ್ದವು. ಹೀಗೆ ರುಚಿ ಕಂಡ ಹುಲಿ ದನಗಾಹಿಗಳ ಲೆಕ್ಕಿಸದೆ ರಾಸುಗಳ ಮೇಲೆ ಎರಿ ಬರಲು, ಈ ದನಗಾಹಿಗಳು ಅಸಹಾಯಕರಾಗಿರುತ್ತಿದ್ದರು. ಇಂಥೇ ಒಂದು ದಿನ ಜಮೀನ್ದಾರರ ಪ್ರೀತಿಯ ಹಾಲು ಕೊಡುವ ರಾಸನ್ನು ಹುಲಿಯೊಂದು ಮೇಯುವಾಗ ಹೊತ್ತು ಹೋಗಿತ್ತು. ಇದು ದನಗಾಹಿಯ ಬೇಜವಾಬ್ದಾರಿತನದಿಂದ ಆದ ಅವಘಡವೆಂದು ಜಮೀನ್ದಾರ ಪಟ್ಟು ಹಿಡಿದು ಆ ದನಗಾಹಿಗೆ ಈ ಹಸುವಿನ ದಂಡ ಕಟ್ಟುವಂತೆ ತಾಕೀತು ಮಾಡಿದ. ಆ ದನಗಾಹಿ ತನ್ನ ಬಳಿ ಹಣವಿರದ ಕಾರಣಕ್ಕೆ ತನ್ನ ಪರಿವಾರದಲ್ಲಿದ್ದ ಹಲವು ಮಕ್ಕಳಲ್ಲಿ ಯಾರಾದರೊಬ್ಬರನ್ನು ಸಾಯೋತನಕ ಅವರ ಹಟ್ಟಿಯ ಜೀತಕ್ಕೆ ನೇಮಿಸುವುದಾಗಿ ಕೇಳಿಕೊಂಡ. ಆ ಜಮೀನ್ದಾರನಿಗೆ ಬೇರೆ ಆಯ್ಕೆಗಳಿರದ ಕಾರಣ ಇದು ಸಮ್ಮತಿಸುತ್ತಲೆ ತಮಗೆ ಬೇಕಾದ ಜೀತದ ಹುಡುಗನ ತಾನೇ ಆರಿಸಿಕೊಳ್ಳುವುದಾಗಿ ಷರತ್ತು ವಿಧಿಸಿದ. ಇದು ಆ ದನಗಾಹಿಗೆ ಒಪ್ಪಿತವಾಗುತ್ತಲೇ ಜಮೀನ್ದಾರರ ಮುಂದೆ ಅವನ ಮಕ್ಕಳ ಪರೇಡ್ ನಡೆಯಿತು. ಎಲ್ಲವೂ ಅರೆಹೊಟ್ಟೆಯಲ್ಲಿ ಬಳಲಿದ ಜೀವಗಳು. ಇದ್ದ ಆರು, ಏಳರಲ್ಲಿ ಸತ್ವವೆಂಬುದು ಇರಲಿಲ್ಲ. ಜಮೀನ್ದಾರ ಅಳೆದು, ತೂಗಿ ಕೊನೆಗೆ ಅವರಲ್ಲಿ ಮಧ್ಯಮನಾದ ಕೂಸಣ್ಣನ ಆಯ್ಕೆ ಮಾಡಿಕೊಂಡಿದ್ದ.

ಅಲ್ಲಿಗೆ ಹೋದ ಜಮೀನ್ದಾರನ ರಾಸು ಪಾಲಿನ ಲೆಕ್ಕಕ್ಕೆ ಕೂಸಣ್ಣ ಅವರಿಗೆ ದೊರಕಿದನಾದರು ತೃಪ್ತಿಯಿರಲಿಲ್ಲ. ಜಮೀನ್ದಾರ 'ಇದೆಲ್ಲಾ ಮೂಳೆ, ಚಕ್ಕಳ ಇವ್ನ್ ಬಿಗಿ ಭದ್ರ ಮಾಡೋಕೆ ನನ್ನ ಕಾಸೇ ಚೌರ ಆಯ್ತುದೆ' ಎಂದು ಕೂಸಣ್ಣನಿಂದ ಸರಿಯಾದ ಕೆಲಸ ಮಾಡಿಸುತ್ತಿದ್ದ. ಅಲ್ಲಿಗೆ ಬಿದ್ದ ಮೇಲೆ ಕೂಸಣ್ಣ ಎಷ್ಟೋ ಚಿಗುರಿಕೊಂಡಿದ್ದ. ಅಲ್ಲಿ ಎರಡು ಹೊತ್ತಿನ ಊಟವಾದರು ಅವನಿಗೆ ಚೆನ್ನಾಗಿ ದೊರಕುತ್ತಿತ್ತು. ಹಾಗೆ ಕೆಲಸಗಳಂತೂ ಕಮ್ಮಿಯಿರಲಿಲ್ಲ. ನಸು ಬೆಳಕಿನಿಂದ ಆರಂಭವಾಗಿ ನಡುರಾತ್ರಿಯ ತನಕ ಏನಾದರೂ ಒಂದು ಕೂಸಣ್ಣನ ಹಿಂಸೆ ತಿನ್ನುತ್ತಿತ್ತು. ಜಮೀನ್ದಾರ ಅವನ ತನ್ನ ಹಿಡಿತದಲ್ಲಿಟ್ಟು ಪಳಗಿಸುತ್ತಿದ್ದ. ಅದೇ ಸಮಯದಲ್ಲಿ ಜಮೀನ್ದಾರನ ದೂರದ ಸಂಬಂಧಿಯೊಬ್ಬ ಯಾವುದೋ ಕಾರಣ ಇತ್ತ ಬಂದವನು ಇದ್ದ ಎರಡು, ಮೂರು ದಿನಗಳಲ್ಲಿ ಕೂಸಣ್ಣನ ಕಾರ್ಯ ವೈಖರಿಯ ನೋಡಿದವನೆ ಜಮೀನ್ದಾರನ ಬಳಿ 'ಭಾವನೋರೆ ನನ್ಗೆ ಈ ಹೈದ್ನ್ ಕೊಡಿ. ನಾನು ಮಾಡಿರೋ ಕ್ವಾರೆಗೆ ಒಳ್ಳೆ ಆಳಾಯ್ತಾನೆ' ಎಂದು ಕೇಳುತ್ತಲೇ ಜಮೀನ್ದಾರ ಏನೊಂದು ಯೋಚಿಸದೆ 'ಅದಕ್ಕೇನು ಕರ್ಕಂಡ್ ಹೋಗಿ' ಎಂದು ಬಿಟ್ಟ. ಈ ಮಾತುಕತೆ ನಡೆಯುವಾಗ ಕೂಸಣ್ಣ ಅಲ್ಲೆ ಕೊಟ್ಟಿಗೆಯಲ್ಲಿ ಸಗಣಿ ಬಾಚುತ್ತಿದ್ದ. ಇವನನ್ನೂ ಒಂದು ವಸ್ತು ವಿನಂತೆ ಯಾವ ಒಪ್ಪಿಗೆ, ಅಭಿಪ್ರಾಯಗಳು ಕೇಳದೆ ತಮಿಷ್ಟ ಬಂದಂತೆ ಇವರು ಕೈ ಬದಲಿಸಿದ್ದು ಅವನಿಗೆ ತೀವ್ರ ನೋವುಂಟು ಮಾಡಿತ್ತು.

ಕೂಸಣ್ಣ ಅಲ್ಲಿಂದ ಆ ಜಮೀನ್ದಾರನ ಬಿಟ್ಟು ಕ್ವಾರೆ ಸಾಹುಕಾರನ ಹಿಂಬಾಲಿಸಿ ಈ ಬಯಲು ಸೀಮೆಗೆ ಬಂದಿದ್ದ. ತಾನು ಕಂಡಿದ್ದಕ್ಕಿಂತ ಬೇರೆಯದೆ ವಾತಾವರಣ ಇಲ್ಲಿನ ಸ್ಥಳ, ಪರಿಸರಗಳೆಲ್ಲವು. ಇಲ್ಲಿಗೆ ತನ್ನ ಹೊಂದಿಸಿಕೊಳ್ಳುವುದು ಅವನಿಗೆ ಸವಾಲಾಗಿ ಕಾಣಲಿಲ್ಲ ಇಲ್ಲೂ ಮೈ ಮುರಿಯುವ ದುಡಿತ. ಡೈನಾಮೇಟ್‌ಗಳ ಹಾಕಿ ಸಿಡಿದ ಬಂಡೆಗಳ ಜಲ್ಲಿಗಳಾಗಿ, ಸೈಜುಗಲ್ಲುಗಳಾಗಿ ಪರಿವರ್ತಿಸಬೇಕಿತ್ತು. ಈ ಸಾಹುಕಾರ ಕೂಸಣ್ಣನ ನೇತೃತ್ವದಲ್ಲಿ ಒಂದು ತಂಡ ಕಟ್ಟಿ ಕಡಿಮೆ ಕೂಲಿಗೆ ಆಳುಗಳ ದುಡಿಸುತ್ತಿದ್ದ. ಇದರ ವಿರುದ್ಧ ತಿರುಗಿ ಬಿದ್ದವರಿಗೆ ಕೊಡುವ ಶಿಕ್ಷೆಯಾಗಿ ಕಾಲುಗಳಿಗೆ ಕಬ್ಬಿಣದ ಬೇಡಿ ಬೀಳುತ್ತಿತ್ತು. ತೀರಾ ಅಮಾನುಷ ಎನ್ನುವ ಕ್ವಾರೆ ಕೆಲಸದಲ್ಲಿನ ಈ ಕೃತ್ಯದಿಂದ ಕೂಸಣ್ಣ ಮರುಗುತ್ತಿದ್ದ. ಇದನ್ನು ವಿರೋಧಿಸಿದರೆ ಈ ಬೇಡಿಗಳು ಅವನ ಕಾಲುಗಳಿಗೂ ಬೀಳುವ ಕಾರಣ ಮೂಕನಂತೆ ರಟ್ಟೆಯಲ್ಲಿ ಶಕ್ತಿಯಿರುವತನಕ ಕ್ವಾರೆಯಲ್ಲಿ ಬಂಡೆಗಳ ಬಡಿದ.

ಮುಂದೆ ಕಾಲ ಯಾರನ್ನು ಕಾಯದಿರುವ ಕಾರಣಕ್ಕೆ ಕೂಸಣ್ಣನ ಬದುಕಿನಲ್ಲೂ ಹಲವು ಬದಲಾವಣೆಗಳಾಗಿತ್ತು ಕಾಡ ಅಂಚಿನಿಂದ ಬಂದವನು ಮತ್ತೆ ಅತ್ತ ಕಡೆ ಹೋಗುವ ಸನ್ನಿವೇಶ, ಸಮಯ ಬರಲಿಲ್ಲ. ಇಲ್ಲೇ ಸಾಹುಕಾರ ತೋರಿಸಿದವಳೊಂದಿಗೆ ಮದುವೆಯಾಗಿ ದೇವರಾಜನೆಂಬ ಗಂಡು ಮಗನಾಗಿ ವರ್ಷಗಳು ನೋಡುವ ಹಾಗೆ ಉರುಳಿ ಹೋಗಿತ್ತು ಕೂಸಣ್ಣನ ಹೆಂಡತಿ ಕೂಡ ನಿರಂತರವಾಗಿ ಕ್ವಾರೆಯಲ್ಲಿ ದುಡಿದ ಧೂಳಿನ ಪರಿಣಾಮ ಅಸ್ತಮಾ ಕಾಯಿಲೆಗೆ ತುತ್ತಾಗಿ ಜೀವ ಬಿಟ್ಟಿದ್ದಳು. ಕೂಸಣ್ಣನಿಗೆ ತೀರ ವಯಸ್ಸಾದ ಕಾರಣ ದೇಹದ ಶಕ್ತಿ ಸೋತು ಕ್ವಾರೆಯ ಸಂಬಂಧ ಕಡಿದು ಕೊಂಡು ಮನೆಯ ಮಂಚಕ್ಕೆ ಜೋತು ಬಿದ್ದಿದ್ದ. ಕುಳಿತಲ್ಲೆ ಬರುವ ಊಟ, ತಿಂಡಿಗಳ ತನಗಾದಷ್ಟು ತಿಂದು ಹೊತ್ತು ಕಳೆಯಲು ಮನೆಯ ಜಗುಲಿ ಮೇಲೆ ಬಂದು ಕೂರುತ್ತಿದ್ದ. ಹಾಗೆ ಕುಳಿತರೆ ಯಾರಾದರು ಗುರುತಿನವರು 'ಇದ್ಯಾಕ ಕೂಸಣ್ಣ' ಎಂದು ಮಾತಿಗೆ ಎಳೆದರೆ ಕೂಸಣ್ಣ 'ನಂದೇನಿಲ್ಲ ಕಂತೆ ಒಗೆಯೋದು ಬಾಕಿ. ಊರು ಬಯಲಾಗೋದು ನೋಡ್ದೇ, ಬಯಲು ಊರಾಗೋದು ನೋಡ್ದೇ' ಎಂದು ಹರಟುತ್ತಿದ್ದ. ಇದರಿಂದ ಕೂಸಣ್ಣನಿಗೆ ಬೇಸರ ಕಳೆಯುತ್ತಿತ್ತಾದರೂ ಹೆಚ್ಚು ಹೊತ್ತು ಜಗುಲಿ ಮೇಲೆ ಕುಳಿತಿರಲಾಗುತ್ತಿರಲಿಲ್ಲ. ಸಮೀಪವೇ ಇರುವ ಕ್ವಾರೆಯಿಂದ ಜಲ್ಲಿ, ಸೈಜುಗಲ್ಲು, ಡಸ್ಟ್‌ಗಳ ಹೊತ್ತ ಟಿಪ್ಪರ್‌ಗಳು ಹದಗೆಟ್ಟ ರಸ್ತೆಯಲ್ಲಿ ಇನ್ನಿಲ್ಲದ ಧೂಳು ಎಬ್ಬಿಸಿ ಹೋಗುತ್ತಿದ್ದವು. ಇದರಿಂದ ಕೂಸಣ್ಣನ ಕೆಮ್ಮು ಏರಿ ಬಿಡುತ್ತಿತ್ತು. ಈ ಧೂಳಿನಿಂದ ಊರಿನ ಸುತ್ತಲಿನ ಮನೆ, ಗದ್ದೆ, ತೋಟಗಳೆಲ್ಲವು ಬಿಳಿ ಪೌಡರ್ ಮೆತ್ತಿಕೊಂಡು ಬೆಳ್ಳಗೆ ಮಿನುಗುತ್ತಿದ್ದವು.

ಇತ್ತ ದೇವರಾಜನ ಚಿಂತೆ ಮತ್ತೊಂದು ಥರದ್ದು. ಕ್ವಾರೆಗಳು ಹೀಗೆ ದಿಢೀರನೆ ತಮ್ಮ ದಿಡ್ಡಿ ಬಾಗಿಲುಗಳ ಹಾಕಿಕೊಂಡರೆ ತನ್ನಂಥೆ ಅದೆಷ್ಟೋ ಜನರು ಕೆಲಸಕ್ಕೆ ಏನು ಮಾಡುವರೆಂದು ಯೋಚಿಸುತ್ತಿದ್ದ. ಕಲ್ಲು ಗಣಿಗಾರಿಕೆಯಿಂದ ಸುತ್ತಲಿನ ವಾತಾವರಣದಲ್ಲಿ ಆಗುವ ದುಷ್ಪರಿಣಾಮಗಳು, ಅಕ್ರಮ, ಸಕ್ರಮವೆಂಬ ವಾದಗಳು ಇದ್ಯಾವ್ರದು ಅವನಿಗೆ ಬೇಕಿರಲಿಲ್ಲ. ಹಗಲು, ರಾತ್ರಿಗಳೆನ್ನದೆ ದುಡಿಯಲು ಸಿದ್ಧವಿದ್ದವನಿಗೆ ಇಲ್ಲಿ ಕೈತುಂಬಾ ಸಂಪಾದನೆಯಿತ್ತು ಇದರಿಂದಲೇ ದೇವರಾಜ ಬದುಕಿನಲ್ಲಿ ಸಾಕಷ್ಟು ಚೇತರಿಸಿ ಕೊಂಡಿದ್ದ. ಈಗ ಮುಂದಿನ ದಿನಗಳು ಹೇಗೆ ಎಂಬ ಬಗ್ಗೆ ಅವನಲ್ಲಿ ಚಿಂತೆಯಿತ್ತು. ಗೆಳೆಯರ ಜೊತೆ ಈ ಕುರಿತು ಮಾತನಾಡುವಾಗಲು ದೇವರಾಜ 'ಎಲ್ಲಾರ್ಗು ಆದ್ದು ನಮ್ಗೂ ಆಯ್ತುದೆ ಇನ್ಯಾವು ದಾದ್ರು ಕೆಲಸ ನೋಡೋದು' ಎಂದು ಸರಳವಾಗಿ ಹೇಳಿದ್ದ. ಅವನ ಹೇಳಿಕೆಯಷ್ಟೆ ಸರಳವಾಗಿ ಈ ಕಾರ್ಯವಿರಲಿಲ್ಲವೆಂಬುದು ಅವನಿಗೂ ಚೆನ್ನಾಗಿ ಗೊತ್ತಿತ್ತು. ಮನೆ ಮುಂದಿನ ಕೆಲಸವ ತೊರೆದು ಇನ್ನೆಲ್ಲೋ ದೂರಕ್ಕೆ ಅಲೆದು ಹೋಗಿ ದುಡಿವುದಷ್ಟು ಸುಲಭವಾಗಿರಲಿಲ್ಲ. ಹೊರಗಡೆ ಅಲ್ಲಿ, ಇಲ್ಲಿ ಕುಳಿತು ಸಾಕಾಗಿ ಮನೆಯೊಳಗೆ ಹೊಕ್ಕರೆ ಟಿವಿ ನ್ಯೂಸ್ ಚಾನಲ್‌ಗಳು ಅಕ್ರಮ ಕಲ್ಲು ಗಣಿಗಾರಿಕೆ ಸುದ್ದಿಯನ್ನು ಕೂಗು ಮಾರಿಯಂತೆ ಬಾಯಿ ಬಡಿಯುತ್ತಿದ್ದವು. ಹೊರಗಡೆಯು ಇದನ್ನೆ ಕೇಳಿ, ಮಾತಾಡಿ ಬಂದವನಿಗೆ ಮನೆಯೊಳಗೂ ಇದೇ ಮುಂದುವರಿದಿದ್ದ ಕಂಡು 'ಈಗ್ನೇ ಇದ್ ಛೇಂಜ್ ಮಾಡಿರಾ ಇಲ್ಲ ಕಲ್ಲು ತಗಂಡ್ ಹೊಡಿಲಾ ಟಿ.ವಿ.ಗೆ' ಎಂದು ರೇಗಿಕೊಳ್ಳುತ್ತಿದ್ದ. ಕೂಸಣ್ಣ 'ಇದ್ಯಾಕೋ ದೇವ್ರಾಜ ನಮ್ಮೂರು ಸುದ್ದಿ ನೋಡ ಬಾರ್ದಾ?' ಎಂದರೆ ಅದಕ್ಕೆ ದೇವರಾಜ 'ಸುದ್ದಿ ಸರಿನೇ ಅದ್ನೇ ದಿನಪೂರ್ತಿ ಹೇಳೋದೇನು ತಲೆ ಚಿಟ್ಟು ಅನ್ನಲ್ವಾ' ಎಂಬ ಮಾತಿಗೆ ಯಾರಿಂದಲೂ ಉತ್ತರ ವಿರಲಿಲ್ಲ. ದೇವರಾಜನ ತಳಮಳಗಳು ಯಾರಿಗೂ ಅರ್ಥವಾಗುತ್ತಿರಲಿಲ್ಲ. ವಾರದಿಂದ ಕೆಲಸವಿಲ್ಲದ ಕಾರಣ ಅವನ ಮುಖ ಸಪ್ಪೆಯಾಗಿತ್ತು. ಬೇಸರವಾಗುವತನಕ ಹಾಸಿಕೊಂಡ ಚಾಪೆ ಮೇಲೆ ಮಲಗಿದವನು ಒಂದಷ್ಟು ಹೊತ್ತು ಹೊರಗಡೆ ತಿರುಗಾಡಿ ಬರುತ್ತಿದ್ದ. ಅವನಿಗೆ ಎಲ್ಲಿಗೆ ಹೋದರೂ ಈಗಾ ಕ್ವಾರೆಯ ಕುರಿತ ಸುದ್ದಿ ಮಾತ್ರ ಬಿಟ್ಟಿರಲಿಲ್ಲ. ದೇವರಾಜನಿಗೆ ಕೆಲ ಸಮಯ ದಲ್ಲಿ ಈ ಕ್ವಾರೆ ಮುಚ್ಚುವುದು ಸೂಕ್ತವೆನಿಸಿತ್ತು. ತನ್ನ ಮನೆಗಾದ ದುಸ್ಥಿತಿ ಮತ್ತು ಟಿಪ್ಪರ್‌ನಲ್ಲಿ ಜಲ್ಲಿ, ಡಸ್ಟ್‌ಗಳ ಹೊತ್ತು ಹೋಗುವಾಗ ರಸ್ತೆಯಲ್ಲಿನ ಪೊಲೀಸರು, ಅಧಿಕಾರಿಗಳ ಕಿರಿಕಿರಿ, ಕ್ವಾರೆ ಮಾಲೀಕರು ಸರಿಯಾಗಿ ಅವರ ಮಂಥ್ಲೀ ಕೊಡದೆ ಇವರನ್ನು ಗೋಳು ಹುಯ್ದು ಕೊಳ್ಳುವ ರೀತಿ ದೇವರಾಜನಿಗೆ ಸಾಕು ಸಾಕಾಗಿತ್ತು ಅಂಥೆ ಬದುಕಿನ ನಿರ್ವಹಣೆಗೆ ಟಿಪ್ಪರ್‌ನ ಹೊರತಾಗಿ ಬೇರೆ ಆಯ್ಕೆಗಳು ಕಾಣಿ ಸುತ್ತಿತ್ತಾದರೂ ಇಷ್ಟು ದಿನ ಕಣ್ಮುಂದಿನ ತಟ್ಟೆ ಯಾಗಿ ರುಚಿ ಕೊಟ್ಟ ಈ ಕೆಲಸದಂತೆ ಅವುಗಳು ಇರಲಾರವೇನೋ ಎಂಬ ಅನುಮಾನ ಕಾಡುತ್ತಿತ್ತು.

ಕೂಸಣ್ಣ ವಾರದಿಂದ ಈಚೀಗೆ ರಾತ್ರಿಯ ವೇಳೆ ಒಳ್ಳೆ ನಿದ್ದೆ ಮಾಡುತ್ತಿದ್ದ. ಅವನ ಕೆಮ್ಮು ಕೂಡ ಅಷ್ಟಿಷ್ಟು ಸುಧಾರಿಸಿತ್ತು. ಕ್ವಾರೆ ತಾತ್ಕಲಿಕವಾಗಿ ಮುಚ್ಚಿದ ಕಾರಣಕ್ಕೆ ಅವನ ಮನೆ ಮುಂದಿನ ರಸ್ತೆ ಟಿಪ್ಪರ್‌ಗಳ ಓಡಾಟವಿರದೆ ನಿರಾಳವಾಗಿತ್ತು. ಈ ನಿರಾಳತೆ ಕೂಸಣ್ಣನೊಳಗೂ ಇಳಿದಂತೆ ಆಗಾಗ ತೂಕಡಿಸುತ್ತಲೆ ನಿದ್ದೆ ಹೋಗಿ ಬಿಡುತ್ತಿದ್ದ. ಹಗಲಿನಲ್ಲಿ ಜಗುಲಿ ಮೇಲೆ ಆರಾಮಾಗಿ ಕುಳಿತರೆ ಎಂದಿನ ಯಂತ್ರ ಸ್ಫೋಟಕಗಳ ಸದ್ದಿರದೆ ಸಣ್ಣಪುಟ್ಟ ಹಕ್ಕಿ, ಕೀಟಗಳ ಸದ್ದು ಅವನ ಕಿವಿಗೆ ಏನೋ ಆನಂದ ಕೊಡುತ್ತಿತ್ತು ತಾನು ಈತನಕ ಕಂಡಿರದ ಕ್ಷಣವನ್ನು ಅನುಭವಿಸುವ ವನಂತೆ ಸುತ್ತಲಿನ ನೀರವತೆಯೊಳಗಿನ ಈ ಜೈವಿಕ ಕ್ರಿಯೆಗಳ ಸದ್ದಿಗೆ ಪುಳಕಿತಾಗುತ್ತಿದ್ದ ಅಂಗಳದಲ್ಲಿ ಊರಿನ ಹೈಕಳು ಯಾವ ಭಯವಿರದೆ ಬೀದಿಗಳಲ್ಲಿ ಕುಣಿದು ಕುಪ್ಪಳಿಸುತ್ತಿದ್ದವು. ಇಲ್ಲಿನವರು ಕ್ವಾರೆ ಮುಚ್ಚಿದ ನಂತರ ಕೆಲಸ, ಕಾರ್ಯಗಳಿಗೆ ದೂರದ ಗದ್ದೆ, ತೋಟಗಳಿಗೆ ಹೋಗಬೇಕಾದ ತಾಪತ್ರಯ ಶುರುವಾಗಿತ್ತು. ಕೂಸಣ್ಣ ಆ ಕತ್ತಲಿನಲ್ಲೇ ನಿಧಾನವಾಗಿ ಗೋಡೆಗಳ ಹಿಡಿದು ಬಚ್ಚಲು ಮನೆಗೆ ಹೋಗಿ ಬಂದವನೇ ಇನ್ನೂ ಕುಳಿತಲ್ಲೆ ಕುಳಿತ ದೇವರಾಜನ ಕಂಡು 'ಕಾಲದಿಂದ ಇದೇ ಆತೂ ನಮ್ಮಂಥವ್ರ ಜೀವ ಅವ್ರಗೆ ಲೆಕ್ಕಕ್ಕೆಯಿಲ್ಲ. ದುರಾಸೆಗೂ ಒಂದು ಮಿತಿ ಬೇಡ್ವಾ?' ಎಂದ ದೇವರಾಜ ಏನೊಂದು ಮಾತನಾಡದೆ ತನ್ನ ಅಪ್ಪನ ಮುಖ ನೋಡಲು ಅಲ್ಲಿ ಅವನು ಅನುಭವಿಸಿದ ಯಾತನೆಗಳು ಮಡುಗಟ್ಟಿದ್ದವು. ಕೂಸಣ್ಣನಿಗೆ ಈ ಕ್ರಷರ್‌ಗಳ ಚಟುವಟಿಕೆ ನಿಂತಿದ್ದು, ಮುಂದೆ ಕೈಕುಳಿ ಕೆಲಸದಿಂದ ಕ್ವಾರೆಗಳಲ್ಲಿ ದುಡಿಯಲು ಹೆಚ್ಚಿನ ಕೂಲಿಯವರಿಗೆ ಬೇಡಿಕೆ ಬರಬಹುದೆಂಬ ಭರವಸೆಯಿತ್ತು. ಇದರಿಂದ ಊರಿನವರು ಕೂಲಿ ಕಂಬಳಕ್ಕೆ ಇಲ್ಲಿಂದ ಮೈಲುಗಳಾಚೆ ಹೋಗುವುದು ತಪ್ಪುತ್ತದೆ ಎಂದುಕೊಂಡ. ಇದನ್ನೆ ದೇವರಾಜನ ಮುಂದೆ ಆಡುವಾಗ ಅವನು 'ಇದೆಲ್ಲಾ ಆಗಾ ಮಾತಾ? ಎಷ್ಟಾದ್ರು ಮಿಷನ್ ಮಿಷನ್ನೇ ಮನಸ್ನಾ ಮನಸ್ನಾನೇ' ಎಂದು ಅಸಮಾಧಾನವಾಗಿದ್ದ. ಕೂಸಣ್ಣನಿಗೆ ಹಿಂದೆ ತಾವೆಲ್ಲ ಕೈ ಕುಳಿಯಿಂದಲೇ ಕ್ವಾರೆಗಳಲ್ಲಿ ದುಡಿದು ರಕ್ತಬಸಿದಿದ್ದು, ಈಗಿನವರಿಗೆ ನೀರಸವಾಗಿ ಕಂಡಿದ್ದು, ಬೇಸರವೆನಿಸಿತು. ಕೂಸಣ್ಣ ಇನ್ನು ಮರು ಮಾತನಾಡಲಿಲ್ಲ. ಮಂಚದ ಮೇಲೆ ಕುಳಿವನು ನಿಧಾನವಾಗಿ ಹಾಸಿಗೆ ಮೇಲೆ ಅಡ್ಡವಾಗುತ್ತ 'ಶಿವ, ನಾರಾಯಣ ಕಾಪಾಡಪ್ಪ' ಎಂದು ಕೋರಿಕೆ ಸಲ್ಲಿಸಿದ. ಮತ್ತೆ ತಲೆಯಲ್ಲಿ ಆ ದಿನಗಳ ಕುರಿತ ನೆನಪುಗಳು, ಘಟನೆಗಳು ಅನಾಯಾಸವಾಗಿ ನೆನಪಾಗಲು ಶುರುವಾದೋ ಅವುಗಳು ಕುರಿತು ಚಿಂತಿಸುತ್ತಲೆ ಕೂಸಣ್ಣನ ಕಣ್ಣುಗಳಿಗೆ ನಿದ್ರೆ ಆವರಿಸಿತು. ಸಣ್ಣಗೆ ಗೊರಕೆ ಪ್ರಾರಂಭಿಸಿದ. ಈ ಗೊರಕೆ ಸದ್ದು ಅಲ್ಲೆ ಕತ್ತಲೆಯೊಳಗೆ ಸಮರಾತ್ರಿಯಾದರೂ ಕರಗದೆ ಕುಳಿತ ದೇವರಾಜನ ಕಿವಿಗೆ ಅಚ್ಚೊತ್ತಿದ್ದಂತೆ ಬೀಳಲು ಅವನು ತನ್ನ ಅಪ್ಪನ ಈ ನಿದ್ದೆ ಸುಖವ ಕಂಡು ಹುಸಿ ನಕ್ಕಿದ್ದ. ಕೂಗಳತೆ ದೂರದ ಕ್ವಾರೆಗಳಿಂದ ಮತ್ತೆ ಕ್ರಷರ್‌ನ ಸದ್ದು ಹೊರಡಬಹುದೇ ಎಂಬ ನಿರೀಕ್ಷೆಯಲ್ಲಿ ಅವನ ನಾಳಿನ ದಾರಿಗಳೆಲ್ಲವೂ ಮಸುಕು ಮಸುಕಾಗಿದ್ದವು. ■


.ಹೆಚ್.ಜಿ.ಎನ್.ಪ್ರಸಾದ್.

ವಾರ್ಷಿಕ ಕಥಾ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ಪಡೆದ ಕಥೆ


ಕಥೆಗಾರ : ಆರ್.ಪವನ್‌ಕುಮಾರ್
ಕಥೆ : ಶಬ್ದ ನಿಶ್ಯಬ್ದವಾದೊಡೆ...!
ಮೊಬೈಲ್ 9945842882

ವಾರ ಭವಿಷ್ಯ

24.04.2022ರಿಂದ 30.04.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ– ವೃಷಭ, ಚಂದ್ರ–ಕುಂಭ, ಮೀನ, ಮೇಷ, ವೃಷಭ, ಕುಜ–ಮೀನ, ಬುಧ–ವೃಷಭ, ಗುರು– ಮೀನ, ಶುಕ್ರ–ಮೇಷ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು– ತುಲಾ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರಾದಾರಂಭಕ್ಕೆ ವಾಮ ಮಾರ್ಗದಿಂದ ಧನಾಗಮನ. ರೇಷ್ಮೆ, ಜವಳಿ ವ್ಯಾಪಾರಿಗಳಿಗೆ ಹೇರಳ ಧನಲಾಭ ಸಿಮೆಂಟ್, ಕಬ್ಬಿಣ ಮಾರಾಟ ಭರಾಟೆಯಿಂದ ಸಾಗುವುದು. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನಿಮ್ಮ ವಾಣಿಯಿಂದ ಕಾರ್ಮಿಕ ವರ್ಗದವರಿಗೆ ಸರ್ಕಾರದಿಂದ ಅನುಕೂಲಗಳು ಉಂಟಾಗುವುದು. ವಾರಾಂತ್ಯಕ್ಕೆ ಶಿರೋವೇದನೆ, ನರ ದೌರ್ಬಲ್ಯ ಕಾಡುವುದು.
–ಶ್ರೀ ಸುಬ್ರಮಣ್ಯ ಸ್ತುತಿ, ಶುಭಸಂಖ್ಯೆ–9.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ನಿಮ್ಮ ಆತ್ಮ ಶಕ್ತಿಯೇ ನಿಮ್ಮ ಬೆಸ್ಟ್‌ಫ್ರೆಂಡ್. ಕೈಗೊಂಡ ಕೆಲಸ ಕಾರ್ಯಗಳು ಸುಸೂತ್ರವಾಗಿ ಸಾಗುವುದು. ಸಮಯ ಸಮಯಕ್ಕೆ ಹಣಕಾಸಿನ ಅನುಕೂಲ ಒದಗುತ್ತದೆ. ಆದಾಯಕ್ಕೆ ತಕ್ಕಂತೆ ಖರ್ಚುಗಳು ಎದುರಾಗಲಿದೆ. ಆಸ್ತಿ ಖರೀದಿಗೆ ಮುನ್ನ ದಾಖಲೆಗಳನ್ನು ಪರಿಶೀಲಿಸಿ ಮುಂದುವರೆಯಿರಿ. ವ್ಯಾಸಂಗ ಸಂಶೋಧನೆಗಳು ನಿಮಗೆ ಹೆಸರು ತರಲಿದೆ. ಮನೆಯಲ್ಲಿ ಹಿರಿಯರ ಆರೋಗ್ಯದ ಕಡೆ ಗಮನ ನೀಡಿ.
– ಶ್ರೀಚಕ್ರ ದರ್ಶನ, ಶುಭಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಆದಾಯ ಮತ್ತು ಖರ್ಚು ಎರಡೂ ಹೆಚ್ಚಾಗುವುದು. ಹೊಸ ಆದಾಯ ಮೂಲಗಳೂ ಗೋಚರವಾಗಲಿದೆ. ಗುರು ಜನರ ಮಾರ್ಗದರ್ಶನದಿಂದ ಬದುಕಿನಲ್ಲಿ ಹೊಸ ತಿರುವು ಬರಲಿದೆ. ಸ್ಥಿರಾಸ್ತಿ ಕ್ರಯ– ವಿಕ್ರಯದಲ್ಲಿ ಲಾಭವನ್ನು ಕಾಣುವಿರಿ. ನ್ಯಾಯಾಲಯ ವಿಚಾರಗಳಲ್ಲಿ ಪ್ರಗತಿ ಕಂಡು ಬರುವುದು. ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ ಆಗುವುದು. ಸ್ನಾಯು ತೊಂದರೆ ಕಾಡಬಹುದು, ವೈದ್ಯರ ಭೇಟಿಯಿಂದ ಉಪಶಮನ.
– ಶ್ರೀರಾಮನಾಮ ಜಪ, ಶುಭಸಂಖ್ಯೆ–2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಚಂದ್ರಗ್ರಹ ಸಂಚಾರ ವಾರದ ಪೂರ್ವಾರ್ಧದಲ್ಲಿ ನಿಮ್ಮ ಮನೋವಾಂಛಿತ ಇಚ್ಛೆಗಳನ್ನು ಪೂರೈಸಲಿದೆ. ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ. ನಿಮ್ಮ ನಿರಂತರ ಪ್ರಯತ್ನ ಫಲ ನೀಡಲಿದೆ. ಆದರೆ, ಸಾಧ್ಯವಾಗದ ಆಸೆಗಳನ್ನು ಇಟ್ಟುಕೊಳ್ಳದಿರಿ. ಅಷ್ಟಮ ಶನಿದೇವ ನಿಮ್ಮ ತಪ್ಪುಗಳನ್ನು ಅವಲೋಕಿಸಿಕೊಳ್ಳಲು ಅವಕಾಶ ನೀಡಿದ್ದಾನೆ. ವಾರಾಂತ್ಯಕ್ಕೆ ಖಯಾಲಿ ಪ್ರವಾಸಗಳನ್ನು ಖಂಡಿತ ಮಾಡದಿರಿ.
–ಶ್ರೀಶನಿ ಚಾಲೀಸ್ ಪಠಿಸಿ, ಶುಭಸಂಖ್ಯೆ–1.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ದಾರಿ ತೋರುವ ಗುರುದೇವ ಅದೃಶ್ಯನಾಗಿದ್ದಾನೆ. ಪ್ರಾರಬ್ಧ ಕರ್ಮವನ್ನು ಕಳೆಯಲು ಕರ್ತವ್ಯದಲ್ಲಿ ಭಗವಂತನನ್ನು ಕಾಣಿ. ವಾರಾಂತ್ಯಕ್ಕೆ ಶುಭಚಂದ್ರ ಉಚ್ಚರಾಶಿಗೆ ಬಂದಾಗ ನೂತನ ವ್ಯಾಪಾರ ಪ್ರಾರಂಭಿಸಬಹುದಾಗಿದೆ. ಎಲೆಕ್ಟ್ರಿಕ್ ಯಂತ್ರೋಪಕರಣ ವರ್ತಕರಿಗೆ ಹೆಚ್ಚಿನ ಧನಲಾಭವಿದೆ. ಸಹೋದರ ಸಂಬಂಧಿಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದು. ಇದರಿಂದ ವಿಕೋಪವಾಗುವುದನ್ನು ತಡೆಗಟ್ಟಿ.
ಶ್ರೀ ಅಶ್ವಥ್ ಸ್ತೋತ್ರ ಪಠಿಸಿ, ಶುಭಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಹಳೆಯ ಸಮಸ್ಯೆಗಳು ಪರಿಹಾರವಾಗಲು ಗ್ರಹಾನುಕೂಲವಿದೆ. ದೂರ ಸರಿದವರು ಹತ್ತಿರವಾಗಿ ಮನೆಯಲ್ಲಿ ಸಂತಸದ ವಾತಾವರಣ ಇರುತ್ತದೆ. ಅಷ್ಟಮದಲ್ಲಿ ರಾಹುಸ್ಥಿತನಿದ್ದು, ನಂಬಲರ್ಹರಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡಬೇಡಿ. ಗುರು ಕೃಪೆಯಿಂದ ನಿಮ್ಮ ಪ್ರತಿಜ್ಞಾ ಪರಿಪಾಲನೆ ಮಾಡಿ ಮೆಚ್ಚುಗೆಗೆ ಪಾತ್ರರಾಗುವಿರಿ. ಗುರುಜನರ ಮಾರ್ಗದರ್ಶನ ದೊರೆಯುವುದು. ಮಹಿಳಾಮಣಿಯರು ಮಾಂಗಲ್ಯಸರ ಮುಚ್ಚಿಕೊಂಡು ಓಡಾಡಿ.
–ಶ್ರೀಸುಂದರ ಕಾಂಡ ಪಠಿಸಿ, ಶುಭಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸಪ್ತಾಹದ ಆದಿಗೆ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಬರಬೇಕಾದ ಹಣ ಕೈ ಸೇರದು. ಆದರೆ, ನೀವು ನಿರಾಶರಾಗುವ ಅಗತ್ಯವಿಲ್ಲ. ನಿಮ್ಮ ರಾಶ್ಯಾಧಿಪತಿ ಶುಕ್ರ ಗ್ರಹದ ಸಂಪೂರ್ಣ ದೃಷ್ಟಿ ನಿಮ್ಮ ರಾಶಿಯ ಮೇಲಿದೆ. ಆಪ್ತರ ವಿದ್ವಾಂಸರ ಸಲಹೆ, ಸಹಕಾರಗಳಿಂದ ಕಾರ್ಯಸಾಧನೆ ಆಗುವುದು. ವಿಲಾಸಿ ವಸ್ತುಗಳನ್ನು ಖರೀದಿಸುವುದರಿಂದ ಸತಿ– ಪತಿಯರಲ್ಲಿ ಉಂಟಾಗಿದ್ದ ಉತ್ತರ ಧ್ರುವ– ದಕ್ಷಿಣ ಧ್ರುವ ಪರಿಸ್ಥಿತಿ ನಿವಾರಣೆಯಾಗಲಿದೆ.
– ಶ್ರೀಶನಿ ಚಾಲೀಸ ಪಠಿಸಿ, ಶುಭಸಂಖ್ಯೆ–6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ವಾರದ ಪೂರ್ವಾರ್ಧದಲ್ಲಿ ಶುಭಚಂದ್ರನ ಪರಿಣಾಮ ಮನೆಯಲ್ಲಿ ಉಲ್ಲಾಸದ ವಾತಾವರಣ. ವೈಯಕ್ತಿಕ ಹಾಗೂ ಸಾಮಾಜಿಕ ಕಾರ್ಯಗಳು ಸುಲಲಿತವಾಗಿ ಸಾಗುವುದು. ಕಚೇರಿಯಲ್ಲಿ ಸಹದ್ಯೋಗಿಗಳ ಬೆಂಬಲ ದೊರಕುವುದು. 'ಬಾಯಿ ಇದ್ದವ ಬರದಲ್ಲೂ ಗೆದ್ದ' ಎಂಬಂತೆ ನಿಮ್ಮ ಸಮಸ್ಯೆ ಪರಿಹಾರವಾಗುವುದು. ಪಂಚಮ ಶನಿಯಿಂದ ತುಸು ಅನಾರೋಗ್ಯ ಕಾಡಬಹುದು. ಷೇರು ಇತ್ಯಾದಿ ವ್ಯವಹಾರದಲ್ಲಿ ಬಂಡವಾಳ ಹಾಕುವಾಗ ಅನುಭವಿಗಳ ಸಲಹೆ ಪಡೆಯಿರಿ.
– ಶ್ರೀ ಅಯ್ಯಪ್ಪಸ್ವಾಮಿ ದರ್ಶನ, ಶುಭಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಇದು ನಿಮಗೆ ಬ್ಯುಸಿ ವಾರ. ಹಲವು ರೀತಿಯ ಒತ್ತಡಗಳ ಮಧ್ಯೆ ಮಾನಸಿಕವಾಗಿ ನಲುಗುವಿರಿ. ನಿರ್ಧಾರಕ್ಕೆ ಮುನ್ನ ನಿಧಾನಿಸಿ. ವಿವಿಧ ವ್ಯಕ್ತಿಗಳ ಸಂಪರ್ಕ, ಒಡನಾಟಗಳಲ್ಲಿ ಸಮಯ ಕಳೆಯುವುದೇ ತಿಳಿದು ಬರುವುದಿಲ್ಲ. ವಾರ ಮಧ್ಯೆ ಧನಾಗಮವಾದರೂ ಅನಗತ್ಯ ವಿಷಯಗಳಿಗೆ ಹಣ ಪೋಲಾಗುವುದು, ಶಾರ್ಟ್ ಟ್ರಿಪ್‌ಗಳು ನಿಮಗೂ, ನಿಮ್ಮ ಮನೆಮಂದಿಗೂ ಮುದ ನೀಡುವುದು. ದುಷ್ಟ ಜನರ ಸಹವಾಸದಿಂದ ದೂರವಿರಿ. ವಾಯು–ಶೀತ ಕಾಡಬಹುದು.
– ಶ್ರೀ ಶಿವ ಪಂಚಾಕ್ಷರಿ ಮಂತ್ರ ಜಪಿಸಿ, ಶುಭಸಂಖ್ಯೆ–3

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ಸಾಡೇಸಾತಿಯ ಕಡೆಯ ಚರಣ ಪ್ರಾರಂಭವಾಗಿದೆ. ನಿಮಗೆ ಸಂಬಂಧಪಡದ ವಿಷಯಗಳಲ್ಲಿ ತಲೆ ಹಾಕಬೇಡಿ. ಮನೆಯಲ್ಲಿ ಹಾಗೂ ಉದ್ಯೋಗ ಸ್ಥಾನದಲ್ಲಿ ಹಿತಕರ ವಾತಾವರಣ ಇರದು. ವಾರ ಮಧ್ಯೆ ಹಿಂದೆ ಮಾಡಿದ್ದ ಸುಪ್ರಯತ್ನಗಳ ಫಲವಾಗಿ ಧನ–ಕನಕ ಪ್ರಾಪ್ತಿಯೂ ಉಂಟು. ಮರಮುಟ್ಟು ವರ್ತಕರಿಗೆ ಉತ್ತಮ ಲಾಭ ದೊರೆಯುವುದು. ಗೃಹಲಕ್ಷ್ಮಿಯೊಂದಿಗಿನ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಸಹನೆ ಮುಖ್ಯ. ಸೋತು–ಗೆಲ್ಲಿ.
– ಶ್ರೀ ಗಣಪತಿ ಅಭಿಷೇಕಕ್ಕೆ ಹಾಲು ನೀಡಿ, ಶುಭಸಂಖ್ಯೆ–8

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ನಿಮ್ಮ ಕೆಲಸ ಕಾರ್ಯಗಳಿಗೆ ಹಿತೈಷಿಗಳ ಸಹಾಯ ಹಸ್ತ ದೊರೆಯುವುದು. ಐಹಿಕ ಸುಖಭೋಗಗಳನ್ನು ಅನುಭವಿಸುವಿರಿ. ಮನೆಯವರೊಂದಿಗೆ ಸ್ವಲ್ಪ ಸಮಯ, ಪ್ರೀತಿ–ವಾತ್ಸಲ್ಯದಿಂದ ಕಳೆದರೆ ಮನೋಬಲ ಹೆಚ್ಚುವುದು. ಜನ್ಮಸ್ಥ ಶನಿದೇವನಿರುವ ಕಾರಣ ಖಯಾಲಿ ತಿರುಗಾಟಗಳಿಂದ ಸಂಕಷ್ಟವನ್ನು ತಂದುಕೊಳ್ಳದಿರಿ. ವಿದ್ಯಾರ್ಥಿಗಳು ಸಹವಾಸ ಉತ್ತಮರೊಂದಿಗೆ ಮಾಡಿ. ಅನ್ಯಥಾ ಪೊಲೀಸ್ ಠಾಣೆಗೆ ತಿರುಗಾಟಗಳು.
– ಶ್ರೀವೆಂಕಟೇಶ್ವರ ದರ್ಶನ, ಶುಭಸಂಖ್ಯೆ–2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಹೊಸ ವ್ಯಾಪಾರ ಚಟುವಟಿಕೆಗಳ ಪ್ರಾರಂಭವನ್ನು ಸ್ವಲ್ಪ ಕಾಲ ತಡೆಹಿಡಿಯಿರಿ. ಹೊಸ ಜನರ ಭೇಟಿ ನಿಮ್ಮಲ್ಲಿ ಉತ್ಸಾಹವನ್ನುಂಟು ಮಾಡುವುದು. ವಾರ ಮಧ್ಯೆ ಟ್ರಾವೆಲ್ ಏಜೆನ್ಸಿ, ಲಾಡ್ಜ್, ಕೇಟರಿಂಗ್ ಬಿಸಿನೆಸ್ ಉತ್ತಮವಾಗಿ ನಡೆಯುವುದು. ಪ್ರಮುಖ ನಿರ್ಧಾರಗಳನ್ನು ಅನುಭವಿಗಳಲ್ಲಿ ಸಮಾಲೋಚಿಸಿ, ಮಾಡಿ. ರಾಹು ದಿಢೀರ್ ನಿರ್ಧಾರಗಳಿಗೆ ಪ್ರೇರೇಪಿಸಬಹುದು. ವಾಹನ ಚಾಲನೆಯಲ್ಲಿ ಸ್ವರಕ್ಷೆ ಮುಖ್ಯ.
– ಶ್ರೀ ಮಂತ್ರಾಲಯ ಪ್ರಭುಗಳ ದರ್ಶನ, ಶುಭಸಂಖ್ಯೆ–5.

ಜೆಡಿಎಸ್ ವರ್ಚಸ್ಸು ಸಹಿಸದೆ ಕಾಂಗ್ರೆಸ್‌ನಿಂದ ಹತಾಶ ಹೇಳಿಕೆ

ಶಾಸಕ ಸಾ.ರಾ.ಮಹೇಶ್



ಹೊಸೂರು, ಏ.23(ಕೆಪಿಎಂ)– ರಾಜ್ಯದಲ್ಲಿ ದಿನದಿಂದ ದಿನಕ್ಕೆ ಜೆಡಿಎಸ್ ವರ್ಚಸ್ಸು ಹೆಚ್ಚುತ್ತಿರುವುದನ್ನು ಸಹಿಸದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರ ಕಾಂಗ್ರೆಸ್ ಮುಖಂಡರು ಹತಾಶ ಹೇಳಿಕೆ ನೀಡುತ್ತಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಹೋಬಳಿ ಹಾಡ್ಯ ಗೇಟ್ ಬಳಿ ಜನತಾ ಜಲಧಾರೆ ಯಾತ್ರೆಗೆ ಪೂರ್ಣ ಕುಂಭ ಸ್ವಾಗತ ಕೋರಿ ನಂತರ ನಡೆದ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ ಜನರಿಗೆ ನ್ಯಾಯ ಕೊಡಿಸುವ ಬದಲು ದಿನ ಬೆಳಗಾದರೆ ನಮ್ಮ ಪಕ್ಷದ ವಿಚಾರ ಮಾತನಾಡುತ್ತಿರುವ ಕಾಂಗ್ರೆಸ್ ಮುಖಂಡರ ವರ್ತನೆ ಅವರ ರಾಜಕೀಯ ಅಧಃಪತನ ತೋರಿಸುತ್ತದೆ ಎಂದು ಶಾಸಕರು ವ್ಯಂಗ್ಯವಾಡಿದರು.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿಯವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೇಲೆ ಆಣೆ ಮಾಡಲಿ ಎಂದು ಸಿದ್ದರಾಮಯ್ಯನವರು ಕೇಳುತ್ತಿದ್ದು, ಇದರ ಉದ್ದೇಶ ಏನೆಂದು ಪ್ರಶ್ನಿಸಿದ ಅವರು ನಮ್ಮ ಪಕ್ಷ ಮುಂಬರುವ ಚುನಾವಣೆಯಲ್ಲಿ ಹೆಚ್ಚು ಸಾಧನೆ ಮಾಡುವುದಿಲ್ಲ ಎಂದು ಟೀಕಿಸುವ ನಿಮಗೆ ನಮ್ಮ ಭಯವೇಕೆ ಎಂದು ಜರಿದರು.

ಮುಂಬರುವ ವಿಧಾನಸಭಾ ಚುನಾವಣೆಯ ನಂತರ 2023ಕ್ಕೆ ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗುವುದು ವಿಧಿಲಿಖಿತ ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೋಡಿಮಠದ ಶ್ರೀಗಳು ಭವಿಷ್ಯವಾಣಿ ನುಡಿದಿದ್ದು ಇದು ನಮಗೆ ಪಕ್ಷ ಸಂಘಟನೆಗೆ ಆನೆ ಬಲ ಬಂದಂತಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜ್ಯದ ಸಮಗ್ರ ಅಭಿವೃದ್ಧಿ ಪ್ರಾದೇಶಿಕ ಪಕ್ಷ ಜೆಡಿಎಸ್‌ನಿಂದ ಮಾತ್ರ ಸಾಧ್ಯ. ಮತದಾರ ಬಾಂಧವರು ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ನಮ್ಮ ಪಕ್ಷ ಬೆಂಬಲಿಸಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಕೇಂದ್ರದಲ್ಲಿ ಅಧಿಕಾರ ನಡೆಸಿದ ಬಿಜೆಪಿ ಮತ್ತು ಕಾಂಗ್ರೆಸ್ ರಾಷ್ಟ್ರೀಯ ಪಕ್ಷಗಳು ನಿರಂತರವಾಗಿ ಅನ್ಯಾಯ ಮಾಡುತ್ತಿದ್ದು, ಇದನ್ನು ಸರಿಪಡಿಸಿ ನ್ಯಾಯ ಒದಗಿಸುವಂತೆ ಒತ್ತಡ ಹೇರುವ ಸದುದ್ದೇಶದಿಂದ ಜನತಾ ಜಲಧಾರೆ ಯಾತ್ರೆ ಮಾಡುತ್ತಿದ್ದು ಇದಕ್ಕೆ ಸರ್ವರೂ ಬೆಂಬಲ ನೀಡಬೇಕೆಂದು ಕೋರಿದರು.

ಈ ವೇಳೆ ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್ ನಂಜಪ್ಪ, ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್, ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಜೆಡಿಎಸ್ ಯುವ ಮುಖಂಡ ಸಾ.ರಾ.ಜಯಂತ್, ಜಿಪಂ ಮಾಜಿ ಸದಸ್ಯರಾದ ಎಂ.ಟಿ.ಕುಮಾರ್, ಸಿ.ಜೆ.ದ್ವಾರಕೀಶ್, ಮಂಜುನಾಥ್, ಪುರಸಭೆ ಸದಸ್ಯ ಕೆ.ಪಿ.ಪ್ರಭುಶಂಕರ್, ಹಳಿಯೂರು ಗ್ರಾಪಂ ಅಧ್ಯಕ್ಷ ಹೆಚ್.ಆರ್.ಮಹೇಶ್, ಮಾಜಿ ಉಪಾಧ್ಯಕ್ಷ ಹೆಚ್.ಆರ್.ಕೃಷ್ಣಮೂರ್ತಿ, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಜಿಲ್ಲಾ ಗ್ರಾಮಾಂತರ ಯುವ ಜೆಡಿಎಸ್ ಮುಖಂಡ ಹೆಚ್.ಕೆ. ಮಧುಚಂದ್ರ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಎಸ್ಸಿ ಮತ್ತು ಎಸ್ಟಿ ಗುತ್ತಿಗೆದಾರರ ಸಂಘದ ತಾಲೂಕು ಸಂಘದ ಅಧ್ಯಕ್ಷ ನಾಗರಾಜು, ಹನಸೋಗೆ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಟಿ.ರಾಜೇಶ್, ಮಾಯಿಗೌಡನಹಳ್ಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ಕೆ.ಆರ್.ಜಗದೀಶ್, ತಂದ್ರೆ ಪಿಎಸಿಎಸ್ ಅಧ್ಯಕ್ಷ ಮಂಜೇಗೌಡ, ಜೆಡಿಎಸ್ ಮುಖಂಡರಾದ ಶ್ರೀಧರ್, ಎಸ್.ಟಿ.ಕೀರ್ತಿ, ಎಚ್.ಎಸ್.ಜಗದೀಶ್, ಹರ್ಷ ಕುಮಾರ್‌ಗೌಡ, ಟಿ.ಪಿ.ಮಂಜುನಾಥ್ ಮತ್ತಿತರರಿದ್ದರು.

> ಕಾಂಗ್ರೆಸ್‌ನವರಿಗೆ ಜೆಡಿಎಸ್ ಭಯ ಆವರಿಸಿದ್ದು, ನಿತ್ಯ ಬಿಜೆಪಿ 'ಬಿ' ಟೀಂ ಎಂದು ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಜೊತೆಗೆ ಮುಂಬರುವ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಲ್ಲ ಎಂದು ಸುಳ್ಳು ನುಡಿಗಳನ್ನಾಡುತ್ತಿದ್ದು, 150 ಸ್ಥಾನ ಗೆಲ್ಲುವ ಇವರಿಗೆ ನಮ್ಮ ಭಯವೇಕೆ ಎಂದ ಅವರು, ಹೆಚ್.ಡಿ.ಕುಮಾರಸ್ವಾಮಿ 2 ಬಾರಿ ಸಿಎಂ ಆಗಿದ್ದಾರೆ. ನಾನೂ ಸಹ ಒಮ್ಮೆ ಸಚಿವನಾಗಿದ್ದೇನೆ. ಹಾಗಾಗಿ ನಮಗೆ ರಾಜಕೀಯ ಅಧಿಕಾರದ ಆಸೆ ಇಲ್ಲ. ನಮ್ಮ ಮೂಲ ಉದ್ದೇಶ ರಾಜ್ಯದ ನೆಲ, ಜಲ, ಭಾಷೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ಹೋರಾಟ ಮಾಡುವುದು ಆಗಿದೆ.
> -ಸಾ.ರಾ.ಮಹೇಶ್, ಶಾಸಕ.

ಬೈಕ್‌ನಿಂದ ಆಯತಪ್ಪಿ ಬಿದ್ದು ವ್ಯಕ್ತಿ ಸಾವು



ಹುಣಸೂರು, ಏ.23(ಕೆಕೆ)– ಬೈಕ್‌ನಿಂದ ಆಯತಪ್ಪಿ ಬಿದ್ದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಮನುಗನಹಳ್ಳಿಯ ಕೋಸ್ಟಲ್ ಗಾರ್ಡ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಸಂಜೆ ನಡೆದಿದೆ.

ನಗರದ ನಾಲ್‌ಬಂದ್ ಬೀದಿ ನಿವಾಸಿ ಸಾದಿಕ್(58) ಸಾವನ್ನಪ್ಪಿದವರು. ಇತನ ಪತ್ನಿ ಜರೀನ್ ತಾಜ್, ಮೊಮ್ಮಗ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಾದಿಕ್ ತನ್ನ ಬೈಕ್(ಕೆಎ.45, ಇಸಿ.4585)ನಲ್ಲಿ ಪತ್ನಿ, ಮೊಮ್ಮಗನೊಂದಿಗೆ ಮೈಸೂರಿನಿಂದ ಹುಣಸೂರಿಗೆ ಬರುವಾಗ ನಿಯಂತ್ರಣ ಕಳೆದುಕೊಂಡ ಬೈಕ್ ಮನುಗನಹಳ್ಳಿ ಬಳಿ ಆಯತಪ್ಪಿ ಬಿದ್ದಿದ್ದಾರೆ. ಪರಿಣಾಮ ತೀವ್ರ ಗಾಯಗೊಂಡ ಸಾದಿಕ್‌ನನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಮಠಗಳ ಕೊಡುಗೆ ಅಪಾರ: ಸಿ.ಎನ್. ಮಂಜೇಗೌಡ



ಹೆಚ್.ಡಿ.ಕೋಟೆ, ಏ.23– ಶಿಕ್ಷಣ, ಆರೋಗ್ಯ ಹಾಗೂ ದಾಸೋಹ ಕ್ಷೇತ್ರದಲ್ಲಿ ಮಠಗಳ ಕೊಡುಗೆ ಅಪಾರ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ತಾಲೂಕಿನ ಪುರ ಗ್ರಾಮದ ಶ್ರೀಬಸವೇಶ್ವರ ಪಟ್ಟದ ಮಠದಲ್ಲಿ ಮೈಸೂರು ಮತ್ತು ಚಾಮರಾಜನಗರ ವೀರಶೈವ ಮಠಾಧಿಪತಿಗಳ ಗೋಷ್ಠಿಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ದೇಶದಲ್ಲಿ ಧರ್ಮ, ಜಾತಿಗಳ ನಡುವೆ ಸಂಘರ್ಷ ಉಂಟು ಮಾಡಿ ಸಮಾಜದಲ್ಲಿ ಅಶಾಂತಿ ಮೂಡಿಸುತ್ತಿರುವ ಸಮಾಜಘಾತಕ ಶಕ್ತಿಗಳ ವಿರುದ್ಧ ಮಠಾಧೀಶರು ಹೋರಾಟ ಮಾಡಿ ಜಾಗೃತಿ ಮೂಡಿಸಬೇಕಾಗಿದೆ. ಜನರು ಮಠಗಳ ಮೇಲೆ ಸಾಂಸ್ಕೃತಿಕ, ಧಾರ್ಮಿಕ ನಂಬಿಕೆ ಇಟ್ಟುಕೊಂಡಿದ್ದಾರೆ. ಸುತ್ತೂರು, ಆದಿಚುಂಚನಗಿರಿ, ಸಿದ್ಧಗಂಗಾ ಮಠಗಳು ಜ್ಞಾನಾರ್ಜನೆ ಜೊತೆಗೆ ಆರೋಗ್ಯ ದಾಸೋಹದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ದೇಶದಲ್ಲಿ ಸಾವಿರಾರು ಮಠಗಳಿದ್ದು ಎಲ್ಲಾ ಸರ್ಕಾರಗಳು ಮಠಗಳ ಅಭಿವೃದ್ಧಿಗೆ ಸಹಕಾರ ನೀಡುತ್ತಾ ಬಂದಿವೆ. ಶ್ರೀಬಸವೇಶ್ವರ ಪಟ್ಟದ ಮಠ ಇನ್ನು ಉನ್ನತ ಮಟ್ಟಕ್ಕೆ ಬೆಳೆದು ಜನರಲ್ಲಿ ಅರಿವು ಮೂಡಿಸಲಿ ಎಂದರು. ಈ ವೇಳೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಶ್ರೀಬಸವೇಶ್ವರ ಮಠದ ಚಂದ್ರಶೇಖರ ಸ್ವಾಮೀಜಿ, ಮಲ್ಲನಮೂಲೆ ಶ್ರೀಗಳು, ವಾಟಾಳು ಶ್ರೀಗಳು, ಬರಡನಪುರ ಶ್ರೀಗಳು, ಕುದೇರು ಮಠದ ಶ್ರೀಗಳು, ಬೆಟ್ಟದಪುರದ ಶ್ರೀಗಳು ಸೇರಿದಂತೆ 20 ಮಠದ ಸ್ವಾಮೀಜಿಗಳು ಭಾಗವಹಿಸಿದ್ದರು. ಮಠದಿಂದ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ಭುವನಹಳ್ಳಿಯಲ್ಲಿ ಮೂರೂರಮ್ಮ ರಥೋತ್ಸವ



ಬೆಟ್ಟದಪುರ, ಏ.23– ಸಮೀಪದ ಭುವನಹಳ್ಳಿ ಗ್ರಾಮದಲ್ಲಿ ಮೂರೂರಮ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಭುವನಹಳ್ಳಿ, ಜೋಗನಹಳ್ಳಿ, ಬೆಕ್ಕರೆ ಗ್ರಾಮಕ್ಕೆ ಸೇರಿದ ಈ ಗ್ರಾಮದೇವತೆ ರಥೋತ್ಸವ ಶಾಂತಿ ಮತ್ತು ಭಕ್ತಿಯಿಂದ ನೆರವೇರಿತು. ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿತು. ಈ ವೇಳೆ ಭುವನಹಳ್ಳಿ ಗ್ರಾಮದ ಮುಖಂಡರಾದ ಈಶ್ವರಗೌಡ, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಸ್ವಾಮಿಗೌಡ, ಜೋಗನಹಳ್ಳಿ ಗ್ರಾಮಸ್ಥರು, ಪಟೇಲ್ ಸ್ವಾಮಿಗೌಡ, ಮಾಜಿ ಗ್ರಾಪಂ ಸದಸ್ಯ ಗಿರೀಶ್, ವಿಎಸ್ಸೆಸ್ಸೆನ್ ಅಧ್ಯಕ್ಷ ಹರೀಶ್, ಮಾಜಿ ಅಧ್ಯಕ್ಷ ಲೋಕೇಶ್, ಗ್ರಾಪಂ ಮಾಜಿ ಸದಸ್ಯ ನಾರಾಯಣಶೆಟ್ಟಿ, ರಾಶಿರಾಜಶೆಟ್ಟಿ ಸೇರಿದಂತೆ ಇನ್ನೂ ಹಲವರಿದ್ದರು.

ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ

ಬಿಪಿಎಲ್ ಪಡಿತರದಾರರಿಗೆ ಉಚಿತವಾಗಿ ಅಕ್ಕಿ ವಿತರಣೆ



ತಿ.ನರಸೀಪುರ, ಏ.23(ಎಸ್‌ಕೆ)– ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಬಿಪಿಎಲ್ ಪಡಿತರದಾರರಿಗೆ ಪ್ರತಿ ತಿಂಗಳು ಉಚಿತವಾಗಿ 5 ಕೆಜಿ ಅಕ್ಕಿ ವಿತರಿಸಲಾಗುವುದು ಎಂದು ಆಹಾರ ಶಿರಸ್ತೇದಾರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ವೀರೇಶ್ ನ್ಯಾಯಬೆಲೆ ಅಂಗಡಿ ಸಂಖ್ಯೆ 1ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರಧಾನಮಂತ್ರಿ ಗರಿಬ್ ಕಲ್ಯಾಣ ಅನ್ನ ಯೋಜನೆಯಡಿ ಅಜಾದಿ –ಕಾ– ಅಮೃತ ಮಹೋತ್ಸವದ ಅಂಗವಾಗಿ ಬಿಪಿಎಲ್ ಪಡಿತರ ಕಾರ್ಡುದಾರರಿಗೆ ಉಚಿತವಾಗಿ 5 ಕೆಜಿ ಅಕ್ಕಿ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಬಿಪಿಎಲ್ ಕಾರ್ಡುದಾರರ ಪ್ರತಿಯೊಬ್ಬ ಸದಸ್ಯರಿಗೂ ತಲಾ 5 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತದೆ. ಪಡಿತರದಾರರು ಇದರ ಸದುಪಯೋಗ ಪಡೆಯುವಂತೆ ಮನವಿ ಮಾಡಿದರು.

ನ್ಯಾಯಬೆಲೆ ಅಂಗಡಿ ಮಾಲೀಕ ವೀರೇಶ್ ಮಾತನಾಡಿದರು. ಈ ವೇಳೆ ಆಹಾರ ಇಲಾಖೆಯ ಫುಡ್ ಇನ್ಸ್‌ಪೆಕ್ಟರ್ ದೇವಣ್ಣ, ಮಹೇಶ್, ಪುರಸಭಾ ಸದಸ್ಯ ಎನ್. ಲೋಕೇಶ್, ಪಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಪ್ರಕಾಶ್, ಗುಲ್ಜರ್ ಖಾನ್, ಸಿದ್ದಪ್ಪ, ವೀರೇಶ್, ಶಿವರಾಜು, ನಂದೀಶ್, ವಿನಯ್ ಕುಮಾರ್, ಬಸವರಾಜು, ಸುಂದರ್, ಸಿದ್ದೇಶ್ ಮತ್ತಿತರರಿದ್ದರು.

ಮಹಿಳಾ ಸಮಾನತೆಯಿಂದ ದೇಶದ ಅಭಿವೃದ್ಧಿ



ನಂಜನಗೂಡು, ಏ.23(ಸುದರ್ಶನ್)– ಯಾವ ದೇಶದಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಸ್ವಾತಂತ್ರ್ಯ ನೀಡಲಾಗುವುದೋ ಆ ದೇಶ ಉನ್ನತ ಸ್ಥಿತಿಯಲ್ಲಿ ಮುಂದುವರಿಯುತ್ತದೆ ಎಂದು ಶಾಸಕ ಬಿ.ಹರ್ಷವರ್ಧನ್ ಅಭಿಪ್ರಾಯಪಟ್ಟರು.

ನಗರದ ಶ್ರೀಕಂಠೇಶ್ವರ ಕಲಾ ಮಂದಿರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಿಜೆಪಿ ವತಿಯಿಂದ ಏರ್ಪಡಿಸಿದ್ದ ಕೊರೊನಾ ಮಹಿಳಾ ವಾರಿಯರ್ಸ್‌ಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.


ಕಳೆದ 2 ವರ್ಷಗಳ ಹಿಂದೆ ಕೋವಿಡ್ ಸಂಕಷ್ಟ ಸಮಯದಲ್ಲಿ ಮನೆಯಿಂದ ಹೊರ ಬರದಂತಹ ವಾತಾವರಣವಿತ್ತು. ಅಂತಹ ಸಂದರ್ಭ ವೈದ್ಯರು, ದಾದಿಯರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಸೇರಿದಂತೆ ವಿವಿಧ ಕ್ಷೇತ್ರಗಳ ಮಹಿಳಾ ವಾರಿಯರ್ಸ್‌ಗಳು ತಮ್ಮ ಪ್ರಾಣದ ಹಂಗನ್ನು ತೊರೆದು ಜನರ ಜೀವ ಉಳಿಸಲು ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆ ಸ್ಮರಿಸಿ ಗೌರವಿಸುವ ಸಲುವಾಗಿ ಈ ಸಮಾರಂಭ ಏರ್ಪಡಿಸಿರುವುದಾಗಿ ಹೇಳಿದರು.

ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳೆಯರ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮ ರೂಪಿಸಿದೆ ಅನೇಕ ವಿರೋಧದ ನಡುವೆಯೂ ತ್ರಿವಳಿ ತಲಾಖ್ ನಿಷೇಧ ಜಾರಿಗೊಳಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಬಜೆಟ್‌ನಲ್ಲಿ ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರಿಗೆ 2 ಸಾವಿರ ಹೆಚ್ಚುವರಿ ಗೌರವ ಧನ ಘೋಷಣೆ ಮಾಡಿದ್ದಾರೆ ಎಂದರು.

ಮುಖ್ಯ ಅತಿಥಿ ಡಾ.ಗೀತಾ ಮಾತನಾಡಿ, ಮಹಿಳೆಯರು ಕೀಳರಿಮೆ ಬಿಟ್ಟು ಏನಾದರೂ ಸಾಧಿಸಿ ತೋರುತ್ತೇನೆಂಬ ಆತ್ಮಸ್ಥೈರ್ಯ ಬೆಳೆಸಿಕೊಂಡಲ್ಲಿ ಸಾಧಿಸಬಹುದಾಗಿದೆ. ಸಾಧನೆ ಮೂಲಕ ದೇಶವನ್ನು ಮುಂದೆ ತರಬೇಕಿದೆ ಎಂದರು.

ಭಾಗ್ಯಲಕ್ಷ್ಮಿ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಕ್ಷೇತ್ರದಲ್ಲಿ ಶಾಸಕ ಬಿ.ಹರ್ಷವರ್ಧನ್ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರು ಇನ್ನಷ್ಟು ಉತ್ತಮ ಕೆಲಸ ಮಾಡುವಂತಾಗಲು ಬೆಂಬಲಿಸಿ ಶಕ್ತಿತುಂಬಿ ಬೆಳೆಸಿ ಎಂದರು.

ಸಮಾರಂಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗ ನಾಯಕ, ಎಸ್.ಎಂ.ಕೆಂಪಣ್ಣ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ನಗರಸಭಾ ಸದಸ್ಯರಾದ ಕಪಿಲೇಶ್, ಮಹದೇವಪ್ರಸಾದ್, ಮಹದೇವಮ್ಮ ಸೇರಿದಂತೆ ಅಂಗನಾಡಿ, ಆಶಾ ಕಾರ್ಯಕರ್ತೆಯರು, ದಾದಿಯರು ಇದ್ದರು.



ಸರಗೂರು ಪಟ್ಟಣದ 11ನೇ ವಾರ್ಡ್ ಬಿಡಗಲಿನಲ್ಲಿ ಶ್ರೀಮುಳ್ಳೂರಮ್ಮನವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯಿತು. ಅಲ್ಲದೆ ಭಕ್ತರಿಗೆ ಅನ್ನದಾನ ನಡೆಯಿತು. ಈ ವೇಳೆ ವೀರಶೈವ ಸಮಾಜ ಹಾಗೂ ಆದಿ ಕರ್ನಾಟಕ ಸಮಾಜದ ಯಜಮಾನರು, ಮುಖಂಡರು ಇದ್ದರು.

ಹುಣಸೂರು ಜನತೆಗೆ ನಾನು ಸದಾ ಚಿರಋಣಿ: ಜಿಟಿಡಿ



ಹನಗೋಡು, ಏ.23(ಮಹೇಶ್)– ಹುಣಸೂರು ತಾಲೂಕನ್ನು ನನ್ನ ಕುಟುಂಬ ಎಂದಿಗೂ ಮರೆಯುವುದಿಲ್ಲ. ತಾಲೂಕಿನ ಜನತೆಗೆ ನಾನು ಚಿರಋಣಿ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಹೆಗ್ಗಂದೂರು ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ ಜನತೆ ನನ್ನ ಕುಟುಂಬಕ್ಕೆ ರಾಜಕೀಯವಾಗಿ ಎಲ್ಲಾ ರೀತಿಯ ಶಕ್ತಿ ನೀಡಿದ್ದಾರೆ. ಹೀಗಾಗಿ ನಾನು ಮತ್ತು ನನ್ನ ಕುಟುಂಬ ಯಾವಾಗಲೂ ಚಿರಋಣಿಯಾಗಿರುತ್ತೇವೆ ಎಂದರು.


ಹನಗೋಡು ಹೋಬಳಿಯನ್ನು ನಾನು ಈ ಹಿಂದೆ ನನ್ನ ತವರೂರು ಎಂದು ಹೇಳಿದ್ದೆ. ಅದರಂತೆ ಇಂದಿಗೂ ಕೂಡ ಇಲ್ಲಿನ ಜನತೆ ನನಗೆ ಎಲ್ಲಾ ರೀತಿಯ ಸಹಕಾರ ನೀಡಿದ್ದಾರೆ ಎಂದ ಅವರು, ನಾನು ಶಾಸಕನಾಗಿ, ಸಚಿವನಾಗಿ ತಾಲೂಕಿಗೆ 75 ಕುಡಿಯುವ ನೀರಿನ ಟ್ಯಾಂಕ್, 16 ಪ್ರೌಢಶಾಲೆ, 4 ಕೆಇಬಿ ಸ್ಟೇಷನ್, 6 ಆಸ್ಪತ್ರೆ, 4 ಪಶು ಆಸ್ಪತ್ರೆ, ಅಲ್ಲದೇ 3 ಪದವಿ ಕಾಲೇಜುಗಳನ್ನು ಮಂಜೂರು ಮಾಡಿಸಿದ್ದೇನೆ. ಸುಮಾರು 35 ಸಾವಿರ ಎಕರೆ ಪ್ರದೇಶವನ್ನು ಸಣ್ಣ ನೀರಾವರಿ ಇಲಾಖೆಯಿಂದ ಹಾರಂಗಿ ಇಲಾಖೆಗೆ ವರ್ಗಾವಣೆ ಮಾಡಿಸಿ ಹಾರಂಗಿ ಕಾಲುವೆಗಳ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ ಎಂದರು.

ವೃದ್ಧಾಪ್ಯ ಅಂಗವಿಕಲರ ವೇತನ ಸೇರಿದಂತೆ ಹತ್ತು ಹಲವು ಸರ್ಕಾರಿ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ನಾನು ಸಹ ರೈತನಾಗಿ, ಸಹಕಾರ ಸಂಘದ ಕಾರ್ಯದರ್ಶಿಯಾಗಿ ರೈತ ಕಷ್ಟಸುಖವನ್ನು ಹತ್ತಿರದಿಂದ ಬಲ್ಲವನಾಗಿದ್ದೇನೆ. ಆದ್ದರಿಂದ ಸಹಕಾರ ಸಂಘದ ಈಗಿನ ಕಾರ್ಯದರ್ಶಿಗಳು ರೈತರ ಕಷ್ಟಸುಖದಲ್ಲಿ ಭಾಗಿಯಾಗಿ ಕೃಷಿ ಸಾಲ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರ ಕಣ್ಣೀರು ಒರೆಸಬೇಕು ಎಂದು ಕಿವಿಮಾತು ಹೇಳಿದರು.

ರೈತರು ಸಹ ಸಹಕಾರ ಸಂಘದಲ್ಲಿ ಸಾಲ ಪಡೆದು ಸಕಾಲದಲ್ಲಿ ಮರುಪಾವತಿಸಿದರೇ ಸಂಘಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಎಂದರು. ಈ ವೇಳೆ ಸಂಘದ ಅಧ್ಯಕ್ಷ ಬೆಟ್ಟೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ಸುಭಾಷ್, ಬಸವರಾಜ್, ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ರಮೇಶ್, ಮೇಲ್ವಿಚಾರಕ ಗುರು, ಕುಮಾರ್, ಮಂಜೇಶಗೌಡ, ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ವೀರಭದ್ರಪ್ಪ, ಲಿಂಗರಾಜಪ್ಪ ಉಪಸ್ಥಿತರಿದ್ದರು.

ಸ್ವಾಭಿಮಾನದ ಬದುಕು ಕಲಿಸುವುದು ಗ್ರಂಥಾಲಯ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ



ತಿ.ನರಸೀಪುರ, ಏ.23(ಎಸ್‌ಕೆ)– ಜ್ಞಾನ ವಿಸ್ತಾರವಾಗಲು ಗ್ರಂಥಾಲಯ ಕಡೆ ಹೋಗಬೇಕು. ಇದರಿಂದ ಗ್ರಹಿಸುವ ರೀತಿ ಬದಲಾಗುತ್ತದೆ. ಘನತೆ ಮತ್ತು ಸ್ವಾಭಿಮಾನದಿಂದ ಬದುಕು ಹೇಳಿಕೊಡುವುದು ಗ್ರಂಥಾಲಯ ಅಥವಾ ಪುಸ್ತಕಗಳು ಎಂದರೆ ತಪ್ಪಾಗಲಾರದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಕನ್ನಡ ಸಾಹಿತ್ಯ ಸೌರಭ ವೇದಿಕೆ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ಕನ್ನಡ ಸಾಹಿತ್ಯ ಸೌರಭ ವೇದಿಕೆ ಉದ್ಘಾಟನೆ ಮತ್ತು ವಿಶ್ವ ಪುಸ್ತಕ ದಿನಾಚರಣೆ ಸಮಾರಂಭದ ಅಂಗವಾಗಿ ಹಿರಿಯ ಸಾಹಿತಿ ಕೆ.ಆರ್. ಶಣ್ಮುಖಸ್ವಾಮಿ ಅವರ 'ಕರುನಾಡ ಕವಿ ಕೋಗಿಲೆಗಳು' ಕೃತಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುಸ್ತಕಗಳು ಬದುಕಿನ ಮಾರ್ಗದರ್ಶನ ನೀಡುತ್ತದೆ. ಮೊಬೈಲ್‌ನ ಗೂಗಲ್ ಸಂಸ್ಥೆ ರಸ್ತೆ ಮಾರ್ಗದರ್ಶನ ಮಾತ್ರ ನೀಡುತ್ತದೆ. ಆದ್ದರಿಂದ ಮೊಬೈಲ್ ಹಾಗೂ ಪುಸ್ತಕಕ್ಕೆ ಇರುವ ವ್ಯತ್ಯಾಸ ಅರಿತುಕೊಳ್ಳುವಂತಾಗಬೇಕು. ನಾಗರಿಕರು ದೇವಾಲಯಗಳಿಗೆ ಎಷ್ಟು ಮಹತ್ವ ನೀಡುತ್ತೀರೊ ಅದಕ್ಕಿಂತ ಹೆಚ್ಚಿನ ಮಹತ್ವವನ್ನು ಗ್ರಂಥಾಲಯಕ್ಕೆ ನೀಡುವಂತಾಗಬೇಕು. ಪೋಷಕರು ತಮ್ಮ ಮಕ್ಕಳ ಕಲಿಕೆ ಬಗ್ಗೆ ದೂರು ಹೇಳುವುದನ್ನು ಬಿಟ್ಟು ಬಿಡುವಿನ ವೇಳೆ ಗ್ರಂಥಾಲಯದಲ್ಲಿ ಕುಳಿತು ಓದುವ ಅಭ್ಯಾಸ ಮಾಡಬೇಕು. ಆಗ ಮಕ್ಕಳು ಗೌರವದಿಂದ ಹಾಗೂ ಘನತೆಯಿಂದ ತಲೆ ಎತ್ತಿ ನಿಲ್ಲುವಂತ ಪ್ರಜೆಗಳಾಗುತ್ತಾರೆ ಎಂದರು.

ಕನ್ನಡ ಸಾಹಿತ್ಯ ಸೌರಭ ವೇದಿಕೆ ಅಧ್ಯಕ್ಷ ಎಂ.ರಾಜು ಮಾತನಾಡಿ, ಕನ್ನಡ ಸಾಹಿತ್ಯದ ಕೆಲಸ ಮಾಡಲು ಕನ್ನಡ ಸಾಹಿತ್ಯ ಸೌರಭ ವೇದಿಕೆ ಸದಾ ಸಿದ್ಧವಿದ್ದು, ಕನ್ನಡ ಸಾಹಿತ್ಯ ಪರಿಷತ್‌ನ ತಾಲೂಕು ಅಧ್ಯಕ್ಷನಾಗಿ ನನ್ನ ಅಧಿಕಾರ ಅವಧಿಯಲ್ಲಿ 3 ಸಮ್ಮೇಳನಗಳನ್ನು ಮಾಡಿ, ಕನ್ನಡ ಪರ ಕೆಲಸ ಮಾಡುವ ಮೂಲಕ ತಾಲೂಕಿನಲ್ಲಿ ಸಂಘಟನೆ ಮಾಡಿದ್ದೇನೆ ಎಂದರು.

ಹಿರಿಯ ಸಾಹಿತಿ ಕೆ.ಆರ್.ಶಣ್ಮುಖಸ್ವಾಮಿರವರ ಕರುನಾಡ ಕವಿ ಕೋಗಿಲೆಗಳು ಕೃತಿಯನ್ನು ಮೈಸೂರಿನ ಖ್ಯಾತ ಕವಿಗಳಾದ ಡಾ. ಜಯಪ್ಪ ಹೊನ್ನಾಳ್ಳಿ ಬಿಡುಗಡೆಗೊಳಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಜಿ.ಪ್ರಕಾಶ್, ಕನ್ನಡ ಸಾಹಿತ್ಯ ಸೌರಭ ವೇದಿಕೆ ಉಪಾಧ್ಯಕ್ಷ ಟಿ.ಡಿ. ಗೋವಿಂದೇಗೌಡ, ಗೌರವ ಕಾರ್ಯದರ್ಶಿ ಸಿ.ಲಿಂಗರಾಜು, ಖಜಾಂಚಿ ವನಜಾಕ್ಷಿ, ಸಮಾಜ ಸೇವಕ ವೈ.ಎಸ್.ರಾಮಸ್ವಾಮಿ, ಮಳವಳ್ಳಿಯ ಸಾಹಿತಿ ಪಿ.ನಾಗರತ್ನಮ್ಮ, ಚಿತ್ರಕಲಾವಿದ ಶ್ರೀಹರಿ ಚಂದ್ರವಂಶಿ, ತಲಕಾಡು ಪಿಎಸ್ ಶ್ರೀನಿವಾಸರಾವ್, ಎಲ್‌ಐಸಿ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಟಿಸಿ ಮಾದೇಗೌಡ, ಸಿ.ಎನ್.ಪ್ರಕಾಶ್, ಎಸ್.ಮಹದೇವಶೆಟ್ಟಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಸಿ.ಪೂರ್ಣಿಮಾ, ವೆಂಕಟೇಶ, ಅಶೋಕ್ ಉಲ್ಲಣ್ಣ ಸಿದ್ದಲಿಂಗಮೂರ್ತಿ ಮತ್ತಿತರರಿದ್ದರು.

ಇಂದು ಹುಣಸೂರಿಗೆ ಜನತಾ ಜಲಧಾರೆ ರಥಯಾತ್ರೆ



ಹುಣಸೂರು, ಏ.23(ಕೆಕೆ)– ರಾಜ್ಯದ ಪ್ರಮುಖ 15 ನದಿಗಳ ಉಗಮ ಸ್ಥಾನದಿಂದ ಗಂಗಾಜಲವನ್ನು ಹೊತ್ತು ತರುವ ಜಲಧಾರೆ ರಥಯಾತ್ರೆ ಹುಣಸೂರಿಗೆ ಕೆ.ಆರ್.ನಗರದಿಂದ ಏ.24 ರಂದು ಬೆಳಗ್ಗೆ ಆಗಮಿಸುತ್ತಿದ್ದು, ಆತ್ಮೀಯವಾಗಿ ಸ್ವಾಗತಿಸಿ ಬರಮಾಡಿಕೊಳ್ಳುತ್ತೇವೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಸೋಮಶೇಖರ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ ಹುಣಸೂರಿಗೆ ಕೆ.ಆರ್.ನಗರದಿಂದ ಗಾವಡಗೆರೆ ಮಾರ್ಗವಾಗಿ ಆಗಮಿಸುತ್ತಿರುವ ಜಲಧಾರೆ ರಥವನ್ನು ಚಿಕ್ಕಾಡಿಗನಹಳ್ಳಿ ಬಳಿ ಸ್ವಾಗತಿಸಲಾಗುವುದು. ನಂತರ ಹುಣಸೂರಿನ ಪ್ರಮುಖ ರಸ್ತೆಗಳಲ್ಲಿ ರಥ ಸಂಚರಿಸಿ ಮಧ್ಯಾಹ್ನ 3ಕ್ಕೆ ರತ್ನಪುರಿ ರಸ್ತೆಯಲ್ಲಿರುವ ಸಲೀಂ ಪ್ಯಾಲೇಸ್‌ನಲ್ಲಿ ಸಮಾವೇಶಗೊಳ್ಳಲಿದೆ.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುವ ಸಮಾರಂಭದಲ್ಲಿ ಶಾಸಕ ಸಾ.ರಾ.ಮಹೇಶ್, ಮಹದೇವು, ಅಶ್ವಿನ್ ಕುಮಾರ್, ಎಂಎಲ್‌ಸಿ ಮಂಜೇಗೌಡ, ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ಜಲಧಾರೆ ರಥವು ತಾಲೂಕಿನಲ್ಲಿ 2 ದಿನಗಳ ಕಾಲ ಸಂಚರಿಸಲಿದೆ ಎಂದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ದೇವರಾಜ ಒಡೆಯರ್, ಸಹ ಕಾರ್ಯದರ್ಶಿ ವೆಂಕಟೇಶ್, ಜಿಪಂ ಮಾಜಿ ಸದಸ್ಯ ಹೆಚ್.ಎಂ.ಫಜಲುಲ್ಲಾ ಉಪಸ್ಥಿತರಿದ್ದರು.


TAPCMS ನಿರ್ದೇಶಕರು, ಕಾಮನಕೆರೆ ಹುಂಡಿ
ಶ್ರೀ ಹೆಚ್. ಪ್ರಕಾಶ್
ರವರಿಗೆ
40ನೇ ಜನುಮದಿನದ ಶುಭಾಶಯಗಳು
ಶುಭ ಕೋರುವವರು : ಅಧ್ಯಕ್ಷರು, ಜಿ.ಟಿ.ಡಿ ಅಭಿಮಾನಿ ಬಳಗ
ಹೆಚ್. ಗಿರೀಶ್‌ಗೌಡ್ರು ಮತ್ತು ಶಿವರಾಜ್ ಸ್ನೇಹ ಬಳಗ, ಕಾಮನಕೆರೆ ಹುಂಡಿ